ಕರ್ಣಾಟಕ ಕಾವ್ಯಮಂಜರಿ.

ಸಿಂಗರಾರ್ಯ ವಿರಚಿತ

# ಮಿತ್ರವಿಂದಾಗೋವಿಂದ ನಾಟಕಂ

[ ೭ ]

ಎಸ್. ಜಿ. ನರಸಿಂಹಾಚಾರ್,
ಮ. ಅ. ರಾಮಾನುಜೈಯ್ಯಂಗಾರ್,
ಇವರಿಂದ ಪರಿಷ್ಕರಿಸಲ್ಪಟ್ಟು

ಕರ್ಣಾಟಕ ಕಾವ್ಯಮಂಜರಿ ಪ್ರೊಪ್ರೈಟರುಗಳಿಗಾಗಿ

ಮೈಸೂರು,
ಸದ್ವಿದ್ಯಾಮಂದಿರ ಮುದ್ರಾಶಾಲೆಯಲ್ಲಿ ಮುದ್ರಿಸಲ್ಪಟ್ಟಿತು.
೧೮೯೩.

[ಕ್ರಯ [illegible] ರೂಪಾಯಿ.

...ರ್ಣಾಟಕಕಾವ್ಯಮಂಜರಿ ಆಫೀಸ್ ಮ್ಯಾ. ಪ್ರೊಪ್ರೈಟರು, ಮ. ಕೆ. ನಾರಸ್ವಾಮಿ
ತಿರುಮಲಾಚಾರ್, ಅ. ಅನಂದಾಳ್ವಾರ್ ಇವರಲ್ಲಿ ದೊರೆಯುತ್ತವೆ.

Registered according to Act XXV, 1867
(*All rights reserved.*)

ಈ ಪುಸ್ತಕವು ಮೈಸೂರಲ್ಲಿರುವ ಕರ್ಣಾಟಕಕಾವ್ಯಮಂಜರಿ ಆಫೀಸ್ ಮ್ಯಾನೇಜಿಂಗ್ ಪ್ರೊಪ್ರೈಟರ್ ಮ. ಕುಮಾರಸ್ವಾಮಿ ತಿರುಮಲಾಚಾರ್ಯರಲ್ಲಿ ದೊರೆಯುತ್ತದೆ.

# ಕರ್ಣಾಟಕ ಕಾವ್ಯಮಂಜರಿ.

## (ಮಿತ್ರವಿಂದಾಗೋವಿಂದನಾಟಕಂ)

ವೃ॥ ಶ್ರೀಯಂ ಪಾಲ್ಗಡಲಿಂದಮೆನ್ನೆದೆಗೆ ಬಂದಿಂತೊಲ್ಮೆಯಿಂದಿರ್ದಳಂ ।
ನೀಯಂ ಭೃತ್ಯಯಸೇವೆಯೊಳ್ನಲಸಿದೀಭೂದೇವಿಯಂ ನಾಡೆ ಕೀ ॥
ಟ್ಗಿಯಲ್ಬಾರದೆನುತ್ತಮೆತ್ತಿ ಪಿಡಿದುಂ ಸೌಕರ್ಯದಿಂದಜ್ಯಮಂ ।
ರೈಯಂ ಕೈಮಿಗೆ ಸಾಚಿ ಸಂತವಿಸಿದಾಗೋವಿಂದನಂ ವಂದಿಪೆಂ॥೧

ಇಂತು ನಾಂದಿಗೆಯ್ದು ಸೂತ್ರಧಾರಂ ಸೇರೆಯೊಳ್ ಪೂರ್ಣೈಸಿದ
ಕುಸುಮಂಗಳಂ ರಂಗದೊಳ್ಚೆಲ್ಲಿ ಸಭೆಗೆ ವಂದಿಸಿ ತೆರೆಯಂ ನೋಡಿ,

ಸೂತ್ರಧಾರಂ. ಎಲೆ ಆರ್ಯೆ, ಇತ್ತ ಬಾರಾ. (ಎಂಬುದುಂ

ನಟಿ. (ಸಾರ್ತಂದು) ಅಯ್ಯಾ ಇದೆ ಬಂದೆಂ. ಆವ ಕಜ್ಜಮೀಗಳ್ ಉಜ್ಜುಗಿಪ್ಪುದು ?

ಸೂತ್ರಧಾರಂ. ಈಗಳೀವಸಂತೋತ್ಸವದೊಳ್ಪಲನಾಡುಗಳಂ ಪಶ್ಚಿಮ ಶ್ರೀರಂಗರಾಜನಡಿದಾವರೆಯಂ ಸೇವಿಸಲ್ಬಂದು ಸಂದಣಿಸಿ ಸಭೆಯಂ ಸಿಂಗರಿಸುವೀಬಿಜ್ಜೆವಳರೆಱೆಯುರೆನ್ನಂ ಕರೆದಿಂತು ನಿರವಿಸಿದರ್.

ಅದೆಂತೆನೆ :— “ ಎಲೆ ನಟ್ಟುವಿಗರ ಕಟ್ಟೊಟ್ಟೆಡೆಯುನೆ,

ಕಂ॥ ಶೌರಿಯ ಚರಿತದ ಕಥೆಯಾ ।
ಧಾರದೆ ಕಿವಿಗಿಂಪುಗಜಿವ ಸಿಂಗರದಿರವಂ ॥
ಏರೂಪಕಂ ನಿರೂಪಿಕು ।
ಮೂರೂಪಕಮಂ ನಿರೂಪಿಸಿಂದೊಲವಿಂದಂ ॥ ” (ಎಂಬುದುಂ,

ನಟಿ. ( ಇನಿಸುಂಬೊಟ್ಟು ಜಾನಿಸಿ, ಸೂತ್ರಧಾರನಂ ನೋಡಿ, )
ಅಯ್ಯಾ! ಆವುದಂತು ಮನಂಗೊಳಿಪ ರೂಪಕಂ ?

ಸೂತ್ರ. ಆರ್ಯೆ ಇದಲ್ತೆ ಮಿತ್ರವಿಂದಾಗೋವಿಂದಮೆಂಬ ನಾಟಕಂ.

ನಟಿ. (ಅಚ್ಚರಿಗೊಂಡು) ಆದೊಡಾರಿದಂ ನಿರವಿಸಿದರ್?

ಸೂತ್ರ. ಎಲೆಗೆ ಏಂ ಕೇಳ್ದಱಿಯೆಯಾ?

ವೃ॥ ಶ್ರೀಮತ್ಸೌಮ್ಯನೃಸಿಂಹಸೂರಿತನಯಂ ಶ್ರೀತಿರುಮ
ಲಾರ್ಯಾನುಜಂ । ಶ್ರೀಮತ್ಕೌಶಿಕ ಸಿಂಗರಾರ್ಯನುಸಿರ್ದಂ,
ತಾನೆಮ್ಮೊಳಪ್ಪೊರ್ಲ್ಮೆಯಿಂ ॥ ಈಮಹಾಚಾರ್ಯನ ಕಬ್ಬ
ವೆಸೆ ಮಧುವಂ ಸೂಸುತ್ತಮಾಮೋದದಿಂ [illegible] ಘಮಂ
ಡಾರದ ಪ್ರೌಢೋಡಂಬಡಿಯೆನಿಕುಂ ಸೊಂಪಿಂ ಸುಹೃತ್ಕರ್ಣ
ದೊಳ್ ॥೩

ಮತ್ತಮಂತುಮಲ್ಲದೆಯುಂ,

ವೃ॥ ಕಳೆಯಿಂದಂ ಪೊಳೆವಚ್ಚಬಣ್ಣದೊದವಿಂ ಸದ್ವೃತ್ತ
ಸಂಪತ್ತಿಯಿಂ । ಬೆಳಗಿಂದಂದದೆ ನುಣ್ಪಿನಿಂದೆರ್ದೆಗೆ ವ
ರ್ಪುದ್ಯದ್ಗುಣಶ್ಲೇಷದಿಂ ॥ ಲಳಿತಾಲಂಕೃತಿಯೆಗಾಢ್ಯಮಾಗಿ

ಸೊಗಸಿಂ ಕಂಠಕ್ಕೆ ಕರ್ಣಕ್ಕೆ ಸೈ । ತಳವಟ್ಟಿರ್ಪುವು
ಸಿಂಗರಾರ್ಯರುಸಿರ್ದೀ ಶ್ರೀಸೂಕ್ತಿಮುಕ್ತಾಳಿಗಳ್ ॥೪

ಮತ್ತಂ,

ವೃ॥ ಅಂದಂಬೆತ್ತ ಪದಕ್ರಮಂಗಳನನೇಕಾಲಂಕ್ರಿಯಾಭಿಖ್ಯೆ
ಯಿಂ । ಚಂದಂ ಮುಂಬರಿವೊಂದು ಭಾವತತಿಯಿಂ ಚಂ
ಚದ್ರಸಸ್ಫೂರ್ತಿಯಿಂ ॥ ಒಂದೇ ರೀತಿಯೊಳೊಂದಿ ಬರ್ಪ
ದನಿಯಿಂದಾಹ್ಲಾದಮಂ ಮಾಳ್ಕುಮೀ । ನಂದಂ ಕೈಮಿಗೆ
ಸಿಂಗರಾರ್ಯರೊರೆದೀಕರ್ಣಾಟಕಂ ನಾಟಕಂ ॥೫

ಮತ್ತಮಿದಲ್ಲದೆಯುಂ,

ಕಂ॥ ರಂಜಿಪುದು ರಸಿಕರಂ ಕಾ ।
ವ್ಯಂ ಜಾಣಿಂದಾರ ರಾಘವಾಭ್ಯುದಯಾಖ್ಯಂ ॥
ಕಂಜಾಕ್ಷನ ಸಂಕೀರ್ತಿಸು ।
ತ್ತಂ ಜಸಮಂ ಪಡೆದ ಗೀತರಂಗೇಶ್ವರಮುಂ ॥೬

ನಟಿ. ಅಯ್ಯಾ, ಇವರಲ್ತೆ ಪದವಾಕ್ಯಪ್ರಮಾಣಪಾರಾವಾರಪಾರೀಣರೆಂದು ಜಗದೊಳ್ನೆಗಳ್ದಿರ್ಪರ್. ಎಂತಿವರ್ಗೆ ಕವಿತಾಕೌಶಲಮುಂ?

ಸೂತ್ರ. ಎಲೆಗೆ ಆದೊಡಾಲಿಸು. ಶ್ರೀಮನ್ಮಹಾರಾಜಾಧಿರಾಜರಾಜಪರಮೇಶ್ವರಪ್ರೌಢಪ್ರತಾಪ ಬಿರುದೆಂತೆಂಬರ ಗಂಡನಪ್ರತಿಮಲೋಕೈಕವೀರಮಹೀಶೂರನರಪತಿಶ್ರೀಚಿಕದೇವಮಹಾರಾಯನ ನಿಱುಗೆವಡೆದ ಕಡುನೇಹಕ್ಕೆ ನೆಲೆವನೆಯುಮಶೇಷಕಲಾನಿಧಿಯುಮೆನಿಸಿ ನೆಗಳ್ದ ತಿರುಮಲಾರ್ಯರ ಕೃಪೆಯಿಂದೆಣಿಕೆಗಳವಡದ ಪಲವುಂ ಬಿಜ್ಜೆಗಳಂ ನೆರವಣಿಗೆಗೊಂಡು ರಸಿಕರೆಣೆಯರೆನಿಸಿ ಚದುರಿಂ ಜಾಣಿಂ

ಜಗದೊಳ್ಜಸಮಂ ಪಡೆದವರ್ಗೆ ಕಾತೆಯೊಳ್ಪ್ರವೀಣತೆಯಂ ಬ
ಣ್ಣಿಪುದೇಂ ? (ಎಂಬುದುಂ

ನಟಿ. (ನಸುನಗುತೆ) ಅಯ್ಯಾ, ಅರಸುಗಳ್ಗೊಲವು ಸಿರಿಯುಂ ಪೆಣ್ಣಿಕು
ಮಲ್ಲದೆ ಸರಸತಿಯುಮಂ ಸಂಗಳಿಕುಮೇ ?

ಸೂತ್ರ. ಎಲೆಗೆ ಈರಾಯನೇನೀನಾಡಾಡಿಯರಸರಂತೆಂದೆಣಿಸುವೈ ?
ಅಂತಲ್ತು. ಸರಸಂ ಕಲಾನಿಧಿ ಮಹಾರಾಜಂ ; ಆದೊಡಾಲಿಸು.

ವೃ॥ ಕಡುಜಾಣಂ ಕಲೆಯೊಳ್ ಸಮಂತು ಕುಶಲಂ ಸಂಗೀತಸಾಹಿ
ತ್ಯದೊಳ್ । ಬೆಡಗಿಂ ವೈಣಿಕರೊಳ್ಪ್ರವೀಣನೆಯಂ ವಿ
ಜ್ಞಾನದೊಳ್ ಶೌರ್ಯದೊಳ್ ॥ ಪಡಿಯಿಲ್ಲಾಯುಧರತ್ನ
ವಾಜಿಗಜಮಂ ತಾನೇ ಪರೀಕ್ಷಿಕ್ಕುವಂ । ಬಿಡಯಕ್ಕೆ
ನ್ನನಿದಂ ದಲೆಲ್ಲರುಸಿರ್ವರ್ ಶ್ರೀಚಿಕ್ಕದೇವೇಂದ್ರನೊಳ್ ॥೭

ಮತ್ತಂ,

ವೃ॥ ಧರೆಯೊಳ್ ಕ್ಷತ್ರಿಯರಂ ನೆಗಟ್ಟುವೃಥೆಯೊಳ್ ರಾಜನ್ಯಧ
ರ್ಮಂಗಳೊಳ್ । ಧುರದೊಳ್ ಸೈನ್ಯಮನೊಗ್ಗುಗೆಯ್ದರಿಗ
ಳಂ ಗೆಲ್ದಂದು ಬಲ್ಗೆಯ್ಮೆಯೊಳ್ ॥ ಬಿರುದಂ ಪ್ರೋತ್ತರಸ
ರ್ಗೆ ಗಂಡನೆನ್ನುತಂ ಶ್ರೀಚಿಕ್ಕದೇವೇಂದ್ರನಂ । ಬಿರುದಂತೆಂ
ಬರ ಗಂಡನೀನೃಪತಿಯೆಂದೀಲೋಕಮೇ ಬಣ್ಣಿಕುಂ ? ॥೮

ವ॥ ಅಂತಪ್ಪ ಮಹಾರಾಯನ ಸಭೆಯ ಸಮುದ್ರಂಗೆ ತಾರಾಧಿಪನೆನಿಪರ್ಗೆ
ಕೇಳ್ವುದೇಂ ಪ್ರಾಗಲ್ಭ್ಯಮಂ ; ಇಂತಿದೆ ಸೈತು ನಿರವಿಸಲ್ಪಟ್ಟ
ಪ್ರರ್ದದಲ್ತೆ ತಿರುಮಲಾಚಾರ್ಯರಿಂದಮುಂ. ಎಂತೆನೆ :—

ಶ್ಲೋ॥ "ಶಮಯತಿ ಜಡಿಮಾನಂ ಸೌಮನಸ್ಯಂ ಪ್ರಸೂತೇ ।
ಸಕಲಸರಸವಿದ್ಯಾಕೌಶಲಾನಿ ವ್ಯನಕ್ತಿ ॥
ಸಕೃದಪಿ ಚಿಕದೇವಕ್ಷ್ಮಾಭೃದಾಸ್ಥಾನಸೀಮಾ ।
ಪರಿಗತಬುಧಗೋಷ್ಠೀಪ್ರಾಂತಪಙ್ಕ್ತಿಪ್ರವೇಶಃ ॥" ೯

ಮತ್ತಂ

ವೃ॥ "ಬಳೆಗುಂ ಸಂತಸಮುಣ್ಮುಗುಂ ಬಗೆಯುಳಲ್ಗಂ ಪ್ರಜ್ಞಾ-
ಸಲ್ಗಂ ವಚಂ|ಬಳಕುಂ ಗೆಯ್ಮೆ ಮಡಲ್ಗುವೊಳ್ಪಸಮರಂ
ಪೆಂಪೇಱುಗುಂ ಮತ್ತಮೇಂ ॥ ಕೆಳೆಗೊಳ್ಗಂ ನೆವಮಿಲ್ಲ
ದೆಲ್ಲಜಗಮುಂ ತಾಳ್ಗಯ್ಗಮಾದ್ಯೈವಮುಂ|ತಳೆವರ್ನ್ನಂ
ಚಿಕದೇವರಾಯನ ದಯಾಂಕೂರಂ ಕಟಾಕ್ಷಾಂತದೊಳ್" ॥೧೦

(ಎಂಬುದುಂ

ನಟಿ. (ಆಲಿಸಿ, ನೋಡುಗಂಗೊಂಡು) ಅಹಹ! ಅಯ್ಯಾ, ಎನಿತಂದವಾಗಿ ಮೊಲ್ಪುವಡೆದ ಸಬುದಂಗಳ ಸೇರುವೆಯಿಂ ಸರಳಮುಂ ಕರಮೆಸೆವ ಪುರುಳ ಪವಣಿಗೆಯಿಂ ಸರಸಮುಮೆನಿಸಿ ತನಿಸೊದೆಯ ಸೋನೆಯಂತೆ ಇನಿದಂ ಕಿವಿಗಳ್ಗೆ ಕಱಗುಮೀ ತಿರುಮಲಾರ್ಯರ ಬಾಯ್ದೆಱೆಯ ಸರಸತಿಯ ಸೊಪ್ಪುವಡೆದ ಸಾಹಿತ್ಯಸೌಂದರ್ಯಂ.

ಸೂತ್ರ. ಇನಿತುಮಾತ್ರಮೆ ? ಅಶೇಷತಂತ್ರಸ್ವತಂತ್ರತೆಯಿಂ ಜಸದ ಜೊನ್ನಮಂ ದೆಸೆದೆಸೆಗೆ ಪಸರಿಸಿದರಲ್ತೆ ದೇಶಿಕಸಾರ್ವಭೌಮರೆನಿಸಿದೀ ದ್ವಿಜರಾಜರ್. ಅಂತೆ ಅಲ್ತೆ:—

ವೃ॥ ಫಣಿಪತಿಭಾಷ್ಯದಾಗರುಡಿಯೊಳ್ಪದಬಾರಿಗೆರೂಡಿಗೆಯ್ದುದುಂ|
ಕಣಚರಣೋಕ್ತಿಜೈಮಿನಿಯ ವಾಣಿಗಳಂ ಮಿಗೆ ತಾಳ್ದಜಾಣ್ಮೆಯಂ॥

ಪ್ರಣುತಿಸೆ ಭಾಷ್ಯಕರ್ ತಿರುಮಲಾರ್ಯಸರಸ್ವತಿ ಸಾರ್ದ್ರಚಿತ್ತಮಂ ।
ತಣಿಯದೆ ರಙ್ಗನಾಥನೊಳೆ ನರ್ತಿಸುಗುಂ ಶ್ರುತಿಮೌಳಿರಙ್ಗದೊಳ್ ॥

ವ॥ ಮತ್ತಮೀಪಂಡಿತಕವಿಮಂಡಲಾಖಂಡಲರ್ ಪಿರಿದಾಗಿ ಶಾಸ್ತ್ರಸ್ಮೃತಿಸ್ತೋತ್ರಗ್ರಂಥಂಗಳುಂ, ಇವಲ್ಲದಿನ್ನುಂ ಸಕ್ಕದದೊಳಂ ಕನ್ನಡದೊಳಂ ಬೇಱೆವೇಱೆ ಕಿವಿಗಿನಿದುಂ ನೂಸುವ ಪಲವಗೆಯ ಕಾವ್ಯನಾಟಕಾಲಂಕಾರಂ ಮೊದಲಾದ ವಸ್ತುಕ ವರ್ಣಕಪ್ರಬಂಧಂಗಳಂ ಗಡಿಯಿಲ್ಲದೆ ನಿರವಿಸಿರ್ಪರ್; ಆದೊಡಿನ್ನುಂ ಪಿರಿದಾಗಿ ಬಣ್ಣಿಪುದೇಂ ?

ವೃ॥ ಪಿರಿದುಂ ಪ್ರೌಢತ್ವಮಂ ಪೆರ್ಚ್ಚಳಿಕೆ ಕವಿವರರ್ ಕಬ್ಬದೊಳ್
ಶಾಸ್ತ್ರದೊಳ್ಮೇಣ್ । ಕರಮೀಸಾಹಿತ್ಯದೊಳ್ಬಿತ್ತರಿಪೊಡೆ ರಸ
ಮಂ ತಿರ್ಮಲಾರ್ಯರ್ಗೆ ಸಲ್ಗುಂ ॥ ತರಣಿದ್ಯೋತಂಗಳೇನೊಡವೆ
ವಿಧುಮಣಿಯೊಳ್ ನೈದಿಲೊಳ್ಮತ್ತಮ ತಾಂ । ಕರಗಿಪ್ಪಂ ಬಿ
ರ್ಚ್ಚುವಂ ಚಂದಿರನೆ ಉಳಿದವರ್ಗೆಂತೊಸರ್ಗುಂ ಮುಳುರ್ಗುಂ? ॥೧೨

ನಟಿ. ಅಯ್ಯಾ, ಅಧ್ಭುದು, ಎನಿತು ಸೋಜಿಗಮಂ ಪೊಣ್ಮಿಕುಮಿಂತು ಬಿಂಬಪ್ರತಿಬಿಂಬಂಗಳಂತೆ ಸಮಾನಾಕಾರಮಾಗಿ ಬಗೆಗೊಳಿಸುಮೀ ಸೋದರರ್, ಸೊಗಯಿಸುವ ಸಾದೃಶ್ಯಂ.

ಸೂತ್ರ. ಇಂತೆ ಅಪ್ಪುದು. ಮುನ್ನಮೆ ಬಣ್ಣಿಸಿರ್ಪುದಿದು ಬಿನ್ನಣಿಗರಿಂ. ಅದೆಂತೆನೆ —

ವೃ॥ ಇವರಿರ್ವರ್ ಸರಸರ್ ಸಮಾನಚರಿತರ್ ಸಾರಜ್ಞರತ್ಯುನ್ನತರ್ ।
ವಿವಿಧಾಮ್ನಾಯತದಗ್ರ್ಯಯುಗ್ಮಸರಹಸ್ಯಾರ್ಥಂಗಳಂ ಬೋಧಪರ್॥
ಸುವಿನೀತರ್ಕವಿತಾಪ್ರವೀಣರಭಿರೂಪರ್ಸರ್ವಶಾಸ್ತ್ರಜ್ಞರಿಂ ।

ಶಿವರಿಂದೈಸೆ ಜಗಕ್ಕೆ ಸಾಮ್ಯನರಸಿಂಹಾರ್ಯೋತ್ತಮರ್ ವೃತ್ತಿಗಳ್॥
ಎಂದು.

ವ॥ ಅದಱಿಂದಿಂತಪ್ಪ ಮಹಾನುಭಾವರ್ ನಿರೂಪಿಸಿದ ರೂಪಕಮನೀಗಳೀಸಭೆಯೊಳಭಿನಯಿಸಿ ಎಮ್ಮ ಬಿಜ್ಜೆಗೆ ಸಫಲತೆಯುಂ ಸಂಪಾದಿಸಿ, ಆಮುಂ ಕೃತಾರ್ಥರಾಗವೇಱ್ಪುದು. (ಎಂದು ಮುಂತಣ್ಣಡಿಯಿಟ್ಟು, ಮತ್ತಮಾರಯ್ದು ಸಂತಸಂಗೊಂಡು,) ಅಚ್ಚರಿಯಚ್ಚರಿ! ಈಸಭೆಯವರ ಮನಮನಿತುಮೆನ್ನೆಣಿಕೆಗೆ ಬಳಸಂದಿರ್ಪುದಱಿಂದೆನ್ನ ನಿಕ್ಕುವಂ ಅಂತಪ್ಪುದಲ್ತೆ:—

ವೃ॥ ಸರಸಂ ಶ್ರೀಸಿಂಗರಾರ್ಯಂ ಕವಿ ಸಭೆಯನಿತುಂ ಸದ್ಗುಣಗ್ರಾ
ಹಿ ಕಟ್ಟಾಚ್ಚರಿವೆತ್ತೀವಾಸುದೇವಂ ಕೃತಿಗಮದೊಡತೆ
ಯುಂ ನಾಟ್ಯದೊಳ್ದಕ್ಷರಾಮುಂ ॥ ಬೆಳೆದಿಲ್ಲೀವಸ್ತು
ವೊಂದೊಂದೆಳಸಿದ ಪುಗುಳಂ ಬೀಱುವೊಳ್ದಿಣ್ಣಮಿನ್ನೇಂ॥
ನೊರೆವೆಂ ಭಾಪೆನ್ನ ಪುಣ್ಯೋದಯದೆ ಶುಭಗುಣಗ್ರಾಮ
ಮೇ ಪೊಣ್ಮಿತಲ್ಲಂ ॥೧೪

ವ॥ ಅದಱಿಂದೆಲೆಗೆ ಈಮಿತ್ರವಿಂದಾಗೋವಿಂದಮೆಂಬ ನಾಟಕಮನಭಿನಯಿಸಿ ನಟಿಸುವಂ. ನೀನುಮಿದಕ್ಕುಚಿತಮಾದ ವಸದನಂಗೊಳವೇಱ್ಪುದು. (ಎನೆ

ನಟಿ. (ಇನಿಸುಂ ಪೊಱ್ಱು ಚಾನಿಸಿ, ನೆನಹನಭಿನಯಿಸಿಯುಗ್ಗಿಗಂಗೊಂಡು, ನಿಡುಸುಯ್ಯುತ್ತೆ) ಅಯ್ಯಾ, ನೀಂ ಚಿಂತೆಯಿಲ್ಲದವಂ. ಎಂತು ನರ್ತಿಸದಿರ್ಪೆ. ಎನಗಾದೊಡೊರ್ವಳೇ ಕುಮರಿ. ಅವಳ ನೀಂ ದೇಶಾಂ

ತರದೊಳಿರ್ಪವಂಗೆ ಕುತಲೆಳಸಿ ನಿಕ್ಕುವಂ ಗೆಯ್ದಿರ್ಪ್ಪರ್. ಅದಱಂ ದೂರದೊಳಿರ್ಪ್ಪವನೊಡನೀಕುವರಿಗೆ ಮದುವೆಯೆಂತು ಸಂಗಳಿಕುಮೆಂಬೀಚಿಂತೆಯಿಂದೆನ್ನನಾಂ ತಿಳಿಯುಲಾಱೆಂ. ಇಂತಿರ್ಪ್ಪವಳ್ಗನ್ನೀನಾಟಕಾಭಿನಯಮೆಂತಪ್ಪುದು?

ಸೂತ್ರ. ಎಲೆಗೆ, ದೂರದೊಳಿರ್ಪ್ಪವನೆಂಬೀಕರೆಕರೆಯಂ ಪರಿಹರಿಸಿ ನೋಡಾ.

ಕಂ॥ ಕಡಲ ನಡುವಾದೊಡಂ ದೆಸೆ ।
ಗಡೆಯಾದೊಡಮಕ್ಕೆ ದಿವಮದಾದೊಡಮೇಂ ತಾಂ ॥
ಪಡಿವೊಗವಾದಾಬಿದಿಯಾ ।
ಯೆಡೆಯಿಂ ತಂದೀಗುಮೆಳಸಿದರ್ಥಮನುಱದಿಂ ॥೧೪

(ತೆಱೆಯೊಳ್)

ಲೇಸು ಲೇಸೆಲೆ ಭರತಪುತ್ರಾ, ಅದಂತೆ ಅಪ್ಪುದು. ಇದಕ್ಕೆ ಸಂದೆಯಮೇಂ?

(ಎಂದು "ಕಡಲ ನಡುವಾದೊಡಂ .... ದಿಂ" ಎಂಬ ಪದ್ಯಮನೋದುವನಂ)

ಸೂತ್ರ. (ತನ್ನನಿಯುಳಂ ನೋಡಿ) ಎಲೆಗೆ, ನೀನೇತಕ್ಕಿರ್ನ್ನುಂ ತಡಂ ಮಾಡುವೆ? ಇದಲ್ತೆ ಎನ್ನ ತಮ್ಮನುದ್ಧವವೇಷದಿಂ ಭೂಷಿತನಾಗಿ ಬಂದಂ. ಆವುಂ ಮುಂತೆ ಬರ್ಪ್ಪ ವೇಷಂಗಳನಳವಡಿಪಂ.

[ಎಂದಿರ್ವ್ವರುಂ ತೆರಳ್ವರ್]

ಇದು ಪ್ರಸ್ತಾವನೆ.

(ಬೞಿಕ್ಕೆ ಮುನ್ನಿರವಿಸಿದ ಪರಿಯಿಂದುದ್ಧವಂ ತೆಱೆಯು
ತ್ತಱಿಂ ಪೊಱಮಟ್ಟು ಬಂದು, )

ಉದ್ಧವಂ. ಅದಂತಪ್ಪುದಪ್ಪುದು. ಇದರ್ಕೆ ಸಂದೆಯಮಿಲ್ಲ. (ಎಂದು
'ಕಡಲ ನಡುವಾದೊಡೇಂ...ದಿಂ' ಎಂಬುದು ಮೊದಲಾದುದಂ ನುಡಿದು,)
ಅಂತಲ್ಲದಿರ್ದೊಡಾಮಾರ್ಗ್ಗಂ ಬಂದೊರೆದ ಕಜ್ಜದಿರವಂ ನಂಬಿಯು
ವಂತೀದೇಶದರಸನಂ ಪ್ರಾರ್ಥಿಸುವಿನಂ ; ಅವಂ ತನ್ನ ಕುವರರಿ
ರ್ವ್ವರುಮಱಿಯದಂತಾಕನ್ನೆಯುಂ ಕಡಲ ಬೞಿವಿಡಿದು ಕಡುವೇಗದಿಂ
ದ್ವಾರಕೆಗೊಡಗೊಂಡೊಯ್ವುದೆಂದು ಪಡಂಗನೇಱಿಸಿ ಕಳುಪ್ಪುವು
ದುಂ ; ಆರಾಯುಗುವರಿಯುಮಾಂ ಮುನ್ನೀರ ದಾಱಿವಿಡಿದೆಮ್ಮೂರ್ಗೆ
ತರುತ್ತುಮಿರೆ, ರನ್ನದಿವಿಯ ಸನಿಯದೊಳ್ ನಡುಗಡಲೊಳಿರ್ದ
ಗಿರಿಯನೆಡಹಿಯಾಪಡಂಗೊಡೆದು ಕಡಲೊಳ್ಪಡೆ ; ಆಕುವರಿಗಾಧಾ
ರಮಾಗಿಯಾಗಳೊಂದು ಪಲಗೆ ಸಿಲ್ಕುವುದೆಂತು! ಅಂತು ಸಿಲ್ಕಿದಾ
ಪಲಗೆಯೊಳ್ ತೇಲುತ್ತಿರ್ಪನಂ, ಆಗಳಾದ್ವಾರವತೀಪುರದ ಪರದ
ನೊರ್ವ್ವಂ ರನ್ನದಿವಿಗೆ ಪೋಗಿರ್ದು ಮರಳ್ದಾದಾಱಿವಿಡಿದು ಬರುತ್ತು
ಮಾತೆಱದೊಳಿರ್ಪಕುವರಿಯಂ ಕಂಡು, ಕಟ್ಟಾಣಿಮುತ್ತಿನ ತಾ
ರಾವಳಿಯ ಕುಱುಪಿನಿಂದಱಿತು ದ್ವಾರಕೆಗೆ ತರ್ಪುದೆಂತುಟು ! ಅದ
ಱಿಂದೆಮ್ಮಾಳ್ದಂಗೆಲ್ಲ ತೆಱದಿಂದಮುಕ್ಕೆಮಂಗಳ್ ನಿಕ್ಕುವಮಾಗಿ ತೆ
ೞ್ಕೆಲ್ಸುಗುಂ. (ಮತ್ತಮಾಳೋಚಿಸಿ) ಆನುಮೀಕುವರಿಯನರಸಿಯ
ಕೈಯೊಳಿತ್ತು ಕಜ್ಜಮಂ ಸಜ್ಜುಗೊಳಿಸಿದೆಂ. ಮತ್ತಮೀಗಳೀ
ಸುಭದ್ರನೆಂಬ ಪಡಿಯರಂ ಅವಂತೀದೇಶದರಸನ ಅಮಾತ್ಯನಾದ
ಸುನಂದನೊಡವೆರೆದಾಕಡಲೆಡೆಯೊಳೆನಿತೊ ಕಟ್ಟಾಯಸಂಬಟ್ಟಲ್ಲಿಂ
ಪೊಱಮಟ್ಟು ಸೌಭಪುರಾಧಿಪತಿಯಂ ಮಡಿಪಲ್ಕೆ ಪೋಗಿರ್ಪೆಮ್ಮ
ಯುವರಾಜನಾದ ಪ್ರದ್ಯುಮ್ನನೊಡನೆ ಕೂಡಿರ್ಕುಮೆಂದೊಂದು ವೃ

ತ್ತಾಂತಮಂ ಕೇಳ್ದಂ. ಇಂತಿನಿತುಂ ಪ್ರಯೋಜನಮುಂ ಕೈಸಾರ್ದಂತಿರೆಯುಮೆನ್ನ ಮನಕ್ಕೆ ಅಳವುದೋಱದು. ಈಭೃತ್ಯಭಾವಮೆಂಬುದು ಕಷ್ಟಮಲ್ತೆ. ಅದೆಂತೆನೆ :—

ವೃ॥ ಪಿರಿದಾಗಿ ಪಾರ್ಶ್ವನೊರೆದುಂ ಬಿಡಿಯುಂ ನೆರಂಗೊಂ |
ಡರಸಂಗೆ ಸಂತಸಮನಾಗಿಸುವೊಂದು ಕಜ್ಜಂ ॥
ಭರದಿಂದೆ ಸೇಱುದೊಡಮಾಣತಿಯಿಲ್ಲದಾಂ ನಿ |
ರ್ಭರನಾಗಿ ನನ್ನಿಯುದನಾಗಿಸಲಾರೆನೀಗಳ್ ॥೧೬ (ಎಂಬುದುಂ

(ತೆಱೆಯೊಳ್ ಪೆರ್ಗಳಮಾದ ಕಳಕಳಮುಂ ಕೇಳಿಸೆ, ಉದ್ಧವಂ ಪೇಳ್ವಂ)

ಉದ್ಧ. ಇದೆಕೊಳ್, ಮೆಲ್ಲಿತಾಗಿ ಬಾಜಿಪ ಮದ್ದಳೆಯ ದನಿಯುಂ ಕೆಳೆಗೊಂಡು ಪರಿವ ಸಂಗೀತದಿಂಚರಮನನುಸರಿಸಿ ಪೌರಜನಂಗಳ ಚರ್ಚರಿಯ ನಿನದಂ ಪೆರ್ಚುತಿದೆ. ಅದಱಿಂ ಪ್ರೊಗೋಲನುಕ್ಕೆವದಿಂ ಪೆರ್ಗಳಂಬೆತ್ತು ಪುರಜನದ ಪಿರಿದಪ್ಪ ಸಂತಸಮಂ ನೋಡಲ್ ಮಾರಾಯಂ ಸೆಜ್ಜೆಯನೇಱಲ್ಪಡಿಮೊಗಮಾಗಿ ನಡೆತರ್ಪನೆಂದು ತೋಱುತ್ತಿದೆ. ತಿಳಿದಂ. (ಮಗುಳೆ ಮೇಲೆ ನೋಡಿ) ಇದೆ, ಆಗಳೇ ಕರುಮಾಡಮಂ ಪಸದನಂಗೆಯ್ದಂ ವಾಸುದೇವಂ.

ವೃ॥ ಜಿತಲೋಕಂ ಮಿಗೆ ಶಾಂತವಿಗ್ರಹನುದಾರಂ ಸರ್ವಸಂಭಾವಿತಂ।ಸ
ತತಂ ಸಂಭೃತಸಾಮನಸ್ಯಭರನಾತ್ಮಾರಾಮನಾರಯ್ಯಲ॥ವ್ರತಿಮಂ
ತನ್ನ ಮಹೋತ್ಸವಾತಿಶಯಮಂ ನೋಡಲ್ಕೆ ಕಾಮಂಬೊಲಾ। ದೃ
ತನಾಗಿಂತುಟು ವಾಸುದೇವನಿದೆಕೊಳ್ ಸಾರ್ತಂದನಾನಂದದಿಂ ॥೧೭

ಆನುಮೆನ್ನ ಮನೆಗೆಯ್ದಿ ಕಾರ್ಯಶೇಷಮನಾಳೋಚಿಪೆಂ.

(ಎಂದು ತೆರಳ್ದಂ)

— ಇದು ವಿಷ್ಕಂಭಂ —

[ಆಬಳಿಕ್ಕೆ ವಸಂತೋತ್ಸವಕ್ಕೆ ತಕ್ಕ ವಸದನಂಗೆಯ್ದು, ವಿದೂಷಕನೊಡವೆರೆದು ಪಟ್ಟವಣಿಯೊಳಿಟ್ಟಳಿಸಿಯೋಲಗಂಗೊಳ್ಬಂದಂ ವಾಸುದೇವಂ.]

ವಾಸುದೇವಂ. (ಕೊರ್ಕೆಯಿಂದೆ) ಎಲೆ ಕುಚೇಲನೆ, (ಎಂಬುದುಂ

ಕುಚೇಲಂ. ಜೀಯ್ಯ, ಆಣತಿಯುಂ ಬೆಸಸು.

ವಾಸು.

ವೃ|| ಅನಿಬರ್ ನಿರ್ಜಿತರಾದರೆನ್ನ ಪಗೆವರ್ಸಾಮ್ರಾಜ್ಯಮೀಯುಗ್ರಸೇ |
ನನೊಳಿರ್ಪ್ಪಂದದಿನಿರ್ಕುಮೊಲ್ಮೆವಡೆದೆಲ್ಲಾ ನಾಡುಗರ್ ಬಾಳ್ಗಮೀ||
ಯಿನಿಯಳ್ ರುಕ್ಮಿಣಿ ಭಾವ್ಯ ಕಾಲಮೆ ವಸಂತಂ ನೇಹಿಗಂ ನೀನುಮಿ|
ನ್ನನೆಗೋಲಂ ಮಿಗೆ ವೆರ್ಚುತಿರ್ಕ್ಕವನಿತುಂ ನೋಡೆನ್ನ ಪೇರುಕ್ಕಮಂ||

ವಿದೂ. (ಹರಿಸಂಗೊಂಡು) ಎಲೆ ಜೀಯಾ, ಇದಿಂತಲ್ತು; ಆಂ ಬೇಱೆ ತಿಳಿದಿರ್ಪೆಂ. ಈಯುಕ್ಕಮನಿತುಂ ನಿನಗಮಲ್ತು; ಕಾಮದೇವಂಗಮಲ್ತು; ಮತ್ತೊರ್ವ ಎನೆ, ಪಾರ್ವನಪ್ಪೆನಗೊರ್ವಂಗೀಮಹೋತ್ಸವಂ. ಅಂತಲ್ಲದಿರ್ದೊಡೆ, ಎಂತುಂ ಮಹಾರಾಯನಾದ ನೀನೆನ್ನಂ ಕುಱುಪಿಟ್ಟಂತು ಬೆಸಸುವೈ. (ಮತ್ತಂ ಮುಂತಕ್ಕೆ ಬಟ್ಟೆಯಿಟ್ಟು) ಬಱುಮಾತಿನಿಂ ಬರ್ಪುದೇಂ? ಇದೆಕೊಳ್; ಜವ್ವನದಿಂ ಮತ್ತೆಯರಾದ ಕಾಮಿನಿಯರ್ ತಾಂ ಪಿಡಿದ ಕೊಂಬಿನಂಡೆಗಳೊಳ್ ತುಂಬಿದೋಕುಳಿಯ ನೀರ ಪೊಡೆತಗಳಂ ಕುಣಿಕುಣಿದಾಡುವ ಬೋಜಗರಿಂ ಪೊಣ್ಮಿದ ಬಿನದಂಗಳಂ ಬಳವಿಗೆಗೊಂಡು, ಸುತ್ತಲುಂ ಬಿತ್ತರಿಸಿ ಬಾಜಿಪ ಹುದ್ದಳೆಯ ಚರ್ಚರಿಯ ಕೌತಂಗಳ ಸದ್ದುಗಳಂ ಪೊಱಲ ಬೀದಿಯೆಲ್ಲಮುಂ ಮೊಳಗಿಸಿ, ಎಸೆವ ಗಂದವುಡಿಯನಂದದಿಂ ಚೆಲ್ಲಿ, ಮತ್ತುಂ ದೆಸೆಗಳಂ ಪರಿಮಳಂಗೊಳಿಸಿ, ಬಣ್ಣವೇಱುಪುಕ್ಕಮದ ಪೆರ್ಕಳಮಂ ನಿಟ್ಟಿಸಾ.

ವಾಸು. (ಸಂತಸಂಬೆತ್ತು ಬಳಸಿ ನೋಡಿ) ಅಚ್ಚರಿ, ಅಚ್ಚರಿ! ಪೊಚಲಿ ಚೆರುಕ್ಕೆವದುಮ್ಮಳಂ ಮಿಕ್ಕು ಮಂಡೆಯಂ ಮೀಱ ಪರಿವೃತ್ತಿದೆ. ಅಂತಪ್ಪುದಲ್ತೆ:—

ವೃ॥ ಪರಿದೇಱ್ವ ಪಟವಾಸದಿಂ ಗಗನದೊಳ್ಬಾಲಾತಪಂ ತೋಱು
ಯುಂ। ಬರದೊಳ್ ಕುಂಕುಮರಾಗಮೇಱುಯೊಡಲೊಳ್ ಪೊಂ
ಬಚ್ಚದೊಳ್ಪಾಗೆ ಕೇ॥ ಖರದೊಳ್ ಚಂಪಕದಿಂಪು ಮೀಱು
ಜನಮೆಲ್ಲಂ ಚಿನ್ನದೊಳ್ಪೊಂಪಿದಂ । ತಿರೆಯೀದ್ವಾರಕೆ
ರ್ರಾಜರಾಜಪುರಮಂ ತನ್ನೇಳ್ಗೆಯಿಂ ಕಳ್ಗಕುಂ ॥೧೯

ಮತ್ತಂ,

ವೃ॥ ಭರದೊಳ್ಪನ್ನಂಡೆಯಿಂದೌಕುಳಿಯನವಿರತಂ ಸೂಸೆ ಗೇಹಾ
ಜ್ಯಣಂ ನಿ । ರ್ಭರಸಮ್ಮರ್ದ್ದಂಗಳಿಂ ತೀವಿಪ ಕೆಸಱುಬಲಾಗಂ
ಪಸಿಂದೂರರೇಣೂ ॥ ತ್ಕರದಿಂ ಕೆಂಪಾಗೆಯಲ್ಲಿಂ ಪರಿವ ಜನ
ಪದನ್ಯಾಸದಿಂ ಕುಟ್ಟಿಮಂಗಳ್ । ಪರಲಾಕ್ಷಾಸಾರದಿಂ ಸಾರಿಸಿದ
ಮಸಕದಿಂದೆತ್ತಲುಂ ತೋಱುತಿರ್ಕುಂ ॥೨೦

ವಿದೂ. ಇದೆ, ವಿಟಜನಂ ಪಿಡಿದ ಜೇಗೊಳವೆಗಳಿಂ ಪನ್ನೀರ್ಗಳಂ ಬೆಲೆವೆಣ್ಗಳ ಮೇಲೆ ಸೂಸುವಿನಂ, ಅವರದಱ ತಣ್ಪಿನಿಂ ಜೇಂಗೞ್ವ ಬಿನದಮಂ ನೋಡಾ.

ವಾಸು. ಎಲೆ ವಿದೂಷಕನೆ, ಚೆನ್ನಾಗಿ ಸೊಲ್ಲಿಸಿದೈ. ಅದೆಂತೆನೆ:—

ವೃ॥ ಬಿಡದಿಟ್ಟಾಡುತುಮಿರ್ಪ ಗಂಧಪುಡಿಯಾಪೆರ್ಮ್ಬಿರ್ನೊಳೊ
ಟ್ಟನಿತೊಡ್ಡಪ್ರೊಳ್ನನ್ನದ ಕಾಂತಿಯಿಂ ಪೆಡೆಗಳಂ ಪೊಱಲ್ವಂಡೆ
ಯೊಳ್ಪಂದಮೀ ॥ ಯೆಡೆಯೊಳ್ತೋರ್ಪ ಭುಜಂಗರೊಳ್ಗಿನಿಳ
ದಾಂ ಮುಂ ಕಂಡ ಪಾತಾಳಮಂ । ಪಡಿಯಾಗಿಂದಿದಿರಿಟ್ಟಪ್ರೋಲ್

ನೆನೆಯಿಕುಂ ಸೊಂಪಿಂದಮೀಯುಕ್ಕೆವಂ ॥೬

ವಿದೂ. ಜೀಯ್ಯಾ, ಇದೆಕೊಳ್; ಕಲಾವತಿ ಮಧುಪಾನದ ಸೊರ್ಕಿಂ ವಿಗಡಮಾದಭಿನಯಂಬೆರಸು ಪೆಕ್ಕಣಂದೋಱುತ್ತೆ ಕನಕಾಂಗಿಯೊಡಗೂಡಿ ಇತ್ತಲೆೞ್ತಂದಪಳ್, ನೋಡಾ. (ಎಂಬುದುಂ

(ಕಲಾವತಿ, ಕನಕಾಙ್ಗಿಯೆಂಬ ಚೇಟಿಯರಿರ್ವರುಂ ದ್ವಿಪದೀಖಣ್ಡಮೆಂಬ ಪಾಡುಗಳಂ ಪಾಡುತ್ತೆ ಬಂದರ್)

ಅವಱೊಳೊರ್ವಳ್.

ಕಂ॥ ಗಿಳಿದೇರನ ಬಗೆವಂದೊ |
ಳ್ಗಿಳಿಯುಂ ತೆಂಗಾಳಿ ಮಾಮರಗಳೊಳ್ಮುಗುಳಂ ॥
ಬೆಳೆಯಿಸುತಂಗನೆಯರ ಮನ |
ದೊಳೆ ಮಾನಮನುಡುಗಿಸುತ್ತೆ ಬೀಸುಗುಮಳಪಿಂ ॥೭

ಮತ್ತೊರ್ವಳ್.

ಕಂ॥ ಮಾನಮನುೞಿದಿನಿಯರ ಸ |
ನ್ಮಾನಮನಿರದೆಳಸಿ ಕಾವನುರವಣೆಗಗಿಯಾ ॥
ತ್ತೇನೀಜವ್ವನವೆಣ್ಗಳ್ |
ತಾನೆಲ*ಗೞ್ಳವಾೞಿಯಲೆವವ್ರೊಲ್ಗದಗದಿಪರ್ ! ॥೮

ಮತ್ತಂ

ಕಂ॥ ಮೊದಲೊಳ್ಮಧುಮಾಸಮೆ ತಾ |
ನೊದವಿಸುಗುಂ ಮೂಢಭಾವಮಂ ಜನಮನದೊಳ್॥
ಮದನಂ ಬೞಿಕ್ಕೆ ಖತಿಯಿಂ |
ಸದೆಗುಂ ಬೆಂಬತ್ತಿ ಬಿಡದೆ ನನೆಯಂಬುಗಳಂ ॥೯

ವಾಸು. ಭಾಪುರೆ! ಸೊರ್ಕಿದೀಪೆಣ್ಗಳ ವಿಹಾರಲೀಲೆಗಳೆನಿತು ಪೆರ್ಚಳವಾಗಿಯುರ್ಕೞಿಸುತ್ತಿವೆ! ಅಂತಪ್ಪುದಲ್ತೆ :—

ವೃ॥ ಅಲೆವಟ್ಟಿಂತು ಸಡಿಲ್ದು ಪೆರ್ದುಱುಬಿನಿಂ ಪೂಮಾಲೆಗಳ್ಜಾಱು
ಯೆ । ತ್ತಾಲುಮಂತೆಂದುಗೆಗಳ್ ಪೊದಱ್ದುಲಿಯೆ ಪೆಂಪಿಂ ತೆಱ್ತು
ಪಾದಂಗಳೊಳ್॥ ಮೊಲೆವಿಣ್ಪಿಂ ನಡು ಬಳ್ಕೆ ನೋಡದೆ ಕರಂ ಕೈ
ಗಣ್ಮಿ ಪಿಡಿಪ್ಪವೊಲ್ । ಸಲೆ ಹಾರಂ ತೊನೆದಾಡೆ ವಕ್ಷದೊಳವಳ್
ಸೊಂಪಿಂದಮೇಂ ನರ್ತಿಕುಂ ! ॥೧೦

ವಿದೂ. ಜೀಯಾ, ಆನುಮೀಕುಣಿದಾಡುವ ಬಿಡುವೆಣ್ಗಳ ನಡುವೆ ಪೆಕ್ಕಣಂಗೆಯ್ದು ನನೆವಿಲ್ಲನುಕ್ಕೆವಮುಂ ಪೆರ್ಗಳಂಗೊಳಿಸುವೆಂ.

ವಾಸು. ಎಲೆ ಸಬ್ಬವಕಾಱನೆ, ಅಂತಕ್ಕೆ. (ಎಂಬುದುಂ

ವಿದೂಷಕಂ (ಇೞಿದು ಉತ್ತರಿಗೆಯಂ ನಡುವಿಂಗೆ ಸುತ್ತಿ ಆಚೇಟಿಯರಿರ್ತರದೊಳ್ ನಿಲ್ವಂತೆ ತಾಂ ನೆಲೆಗೊಂಡು ಕೊಂಕುಗುಣಿತಂಗುಣಿಯುತ್ತೆ ಒರ್ವಳಂ ನೋಡಿ) ಎಲೆ ಕಲಾವತಿ, ನೀನೀಚರ್ಚ್ಚರಿಯನೆನಗಿನಿಸು ಕಲಿಸು. (ಎಂಬುದುಂ

ಕಲಾ. ಎಲೆ ಎಗ್ಗನೆ, ಇದು ಚರ್ಚರಿಯಲ್ತು. (ಎಂಬುದುಂ

ವಿದೂ. ಮತ್ತಿದೇಂ ? (ಎನೆ

ಕಲಾ. ಇದು ದ್ವಿಪದೀಖಣ್ಡವೆಂಬ ಗಾನಂ. (ಎನೆ

ವಿದೂ. (ಸಂತಸಂಗೊಂಡು) ಖಂಡವಾದೊಡಿದಱನೇಂ ಪೂರಣಗಡುಬಂ ಮಾಡಲಕ್ಕುಮೇ? (ಎನೆ

ಕಲಾ. (ನಗುತ್ತೆ) ಅಂತಲ್ತಲ್ತು. ಮತ್ತೇನೆನೆ, ಪಾಡತಕ್ಕುದು.

ವಿದೂ. (ಮೊಗಮಂ ಕಿಱಿದುಗೆಯ್ದು) ಅಂತಾದೊಡಿದಱಿಂದಮೇಂ ? ಎಮ್ಮಾಳ್ದನ ಸನಿಯಕ್ಕೆ ಪೋಪೆಂ. (ಎಂದು ನಡೆಯುತ್ತಿರೆ)

ಕಲಾ. ಎಲೆ ಮರುಳೆ, ನೀನೆಂತು ಪೋದಪೆ? (ಎಂದು ಕೈವಿಡಿದೆೞೆದು) ಇಲ್ಲಿಯೆಮ್ಮೊಡನೆ ಕುಣಿದಾಡು. (ಎನೆ

ಮತ್ತೊರ್ವಳ್ (ಅದೇ ತೆಱದಿಂ ವಿದೂಷಕನಂ ಪಿಡಿದೆೞೆದು)
ಎಲವೊ, ಚರ್ಚರಿಯನಾದೊಡಂ ನಟಿಸು. (ಎಂಬುದುಂ

ವಿದೂ. (ಚರ್ಚರಿಯುಂ ವಿಗಡವಾಗಿ ನರ್ತಿಪ ನೆವದಿಂ ನೆಗೆದೋಡಿ ವಾಸುದೇವ ನಿರ್ವಿಡೆಗೆ ನಡೆತಂದು) ಎಲೆ ಜೀಯ್ಯಾ, ಆನುಂ ನಟಿಸಿ ಬಂದೆಂ.

ವಾಸು. ಎಲೆ ಕುಚೇಲನೆ, ಅವರಿರ್ವರುಂ ನಿನ್ನನೇತರ್ಕೆ ಪಿಡಿದೆೞೆಯುತ್ತಿರ್ದರ್ ? (ಎನೆ

ವಿದೂ. ಜೀಯ್ಯಾ, ಅದಂತಲ್ತು. ಎನ್ನ ನಲ್ಗಣಿತದೊಳ್ವೆಗೆಯುಂ ತಮಗೆ ಕಲಿಸೆಂದೆನ್ನ ಕೈವಿಡಿದೊತ್ತಂಬಡಿಸಿದರ್. ಆನದಂ ಕಲಿಸದೆ ಬಿನದಂಗೆಯ್ದು ಅವರಿರ್ವರಂ ತಪ್ಪಿಸಿ ಬಂದೆಂ. (ಅತ್ತಲ್

ಕನಕಾಂಗಿ. ಎಲೆ ಕಲಾವತಿ, ಆ ಪಲರ್ವಂ ಪೊಱಟ್ಟು ಬಿನದಂಗೆಯ್ದಪ್ರು. ಅದಱಿಂದಿನ್ನೇಳ್. ದೇವಿಯರಾಣತಿಗೆಯ್ದು ಕಳಿಪಿದ ಕಜ್ಜಮನಾಳ್ದಂಗೆ ಬಿನ್ನವಿಸುವಂ. (ಎನೆ

ಕಲಾ. ಎಲೆ ಸಖಿಯೆ, ಅಂತೆಸಗುವಂ.

(ಎಂದು ವಾಸುದೇವನಿರ್ವಿಡೆಗೆ ಸಾರ್ತಂದು)

ಎಲೆ ಮಾರಾಯನೆ, ನಿನಗೆ ಗೆಲವಕ್ಕೆ, ಗೆಲವಕ್ಕೆ! ಈಗಳ್ದೇವಿಯರ್ ದೇವಗಾರ್ಣತಿ (ಎನುತ್ತರೆವಾತಿನೊಳೆ) ಅಲ್ತಲ್ತು. ಆಂ ತಪ್ಪಿದೆಂ. ದೇವಿಯರ್ ಬಿನ್ನಪಂಗೆಯ್ದಪರ್. (ಎಂಬುದುಂ

ವಾಸು. (ನಗುತ್ತುಮಿಂ) ಎಲೆಗೆ, "ದೇವಿಯರಾಣತಿಗೆಯ್ದರ್" ಎಂಬುದೇ ಲೇಸುಲೇಸು. ಅದಱೊಳಂ ಮತ್ತೆ ವಿಶೇಷಮಾಗಿ ಈ ಮದನ ಮಹೋತ್ಸವದೊಳ್. ಆದೊಡೇಂ ಬೆಸಸಿದರ್ ದೇವಿಯರ್ಪೇೞ್. (ಎನೆ

ಕಲಾ. ದೇವಿಯರಿಂತು ಬಿನ್ನಪಂಗೆಯ್ದರ್. ಅದೆಂತೆನೆ: ಇಂದೀವ ಕರಂದೋದ್ಯಾನಮೆಂಬ ಸಿಂಗರದೋಂಟದೊಳ್ ಚೆನ್ನಸುಗೆಯ

ಮರದಡಿಯೊಳ್ ಜಗದೊಳ್ನೆಗೞ್ತೆವಡೆದ ಮುಗುಳಂಬನಂ ಪೂಜೆಗೆಯ್ವೆವು. ಅವರ್ಕೆ ದೇವರವರುಂ ಸನಿಯದೊಳಿರವೇೞ್ಪುದು, ಎಂದು. (ಎಂಬುದುಂ

ವಾಸು. (ಕಡುಸಂತಸಂಬಡೆದು, ಕುಚೇಲನಂ ನೋಡಿ) ಎಲೆ ಸಬ್ಬವಕಾಱನೆ, ಪೇೞ್ವೇೞ್ಪುದಲ್ತೆ ಉಕ್ಕೆವದ ಮೇಲುಕ್ಕೆವಂ ಸಮನಿಸಿತೆಂದು.

ವಿದೂ. ಭಾಪು! ಜೀಯಾ, ಗಳ್ಕನೆ ಪೋಪೆವು, ಏೞ್. ಆದೊಡೆ ಪಾರ್ವನಾದೆನಗವಾಯೆಡೆಯೊಳ್ ಸ್ವಸ್ತಿವಾಚನೆಗೆಯ್ವ ಕತದಿಂದೆ ಏನಾದೊಡಂ ದೊರೆಕೊಳ್ವುದು. (ಎನೆ

ವಾಸು. (ಚೇಟಿಯರಿರ್ವರಂ ನೋಡಿ) ದೇವಿಯರ್ಗಱಿಪುವುದು, ಆಮುಂ ಭೋಂಕನೆ ಬಂದಪೆವೆಂದು. (ಎಂಬುದುಂ

ಚೇಟಿಯರಿರ್ವರುಂ (ಮಣಿದು) ಆಳ್ದವರಾಣತಿಗೆಯ್ದಂತೆಪ್ಪುದು.

(ಎಂದು ತೆರಳ್ದರ್)

ವಾಸು. **ಎಲೆ ಕುಚೇಲನೆ, ಆಮುಮಾಯೆಡೆಗೆ ಪೋಪಂ.**

(ಎಂದು ಸಜ್ಜೆಯತ್ತಣಿಂದಿೞಿವಂತೆ ನಟಿಸಿ) **ಎಲೆ ಕುಚೇಲನೆ, ಸಿಂಗರದೋಂಟದ ದಾಱಿಯುಂ ತೋಱಿಸಾ.** (ಎಂಬುದುಂ

ವಿದೂ. (ಮುಂತಣ್ಗಡಿಯಿಟ್ಟು) **ಜೀಯಾ, ಇದೆಸಿಂಗರದೋಂಟದ ಬಾಗಿಲ್. ದೇವರಿತ್ತ ಚಿತ್ತೈಸು.**

[ಎಂದಿರ್ವರುಂ ತೋಂಟದೊಳಗಣ್ಗೆ ಪ್ರವೇಶಂಗೆಯ್ದರ್]

ವಿದೂ. (ಅಚ್ಚರಿಗೊಂಡು) **ಎಲೆ ಜೀಯಾ, ಇತ್ತಿತ್ತ ನೋಡು ನೋಡು. ಈಸಿಂಗರದೋಂಟುಂ ಮೆಲ್ಲಿತಾದ ತೆಂಬೆಲರಿಂದಲ್ಲಾಡುವ ತಳಿರ್ಗಳಮಾವಿನ ಪೂಗೊಂಚಲ ಪುಪ್ಪುಡಿಯ ಮೊತ್ತದಿಂ ತೞ್ತು ಕಾಲ್ದಱಿಗಳಂ ಸುತ್ತಲುಂ ಬಿತ್ತರಿಪ ಬಂಡುಣಿವಿಂಡಿನ ಝುಂಕಾರದ**

ಜಂತ್ರವಾಜನೆಯಿಂದೊಡವೆರೆದು ಬೆಡಂಗುವಡೆದ ಕೋಗಿಲೆಯ ನುಣ್ಚರದ ಗಾನದಿಂಪಿಂದೆಯುಂ ನಿನ್ನ ಬರವಂ ಬಯಸಿರ್ಪಂತೆ ಕಣ್ಗೊಳಿಕುಂ.

ವಾಸು. (ಬಳಸಿ ನೋಡಿ) ಕಟಕಟಾ! ಈಸಿಂಗರದೋಂಟದ ಸೊಬಗೆನಿತ ಚ್ಚರಿವಡಿಸಿರ್ಪುದು! ಇದೇಂ ಈಯುಚೇತನಂಗಳ್ಗಮೀಯುಕ್ಕೆ ವಮುಮ್ಮಹಂ ಪೆರ್ಚಿಳಿಸುತ್ತಿದೆ. ಅಂತೆ ಅಲ್ತೆ :—

ವೃ॥ಸೊಗಸಿಂ ಮೆಲ್ಲಳದೊರ್ಂಬೆಯೊಡ್ಡವಣೆಯಿಂ ಚೆಂಬಣ್ಣಮಂ ತಾ
ಳ್ದು ತುಂ|ಬಿಗಳೊಳ್ಗವರಬಿಂ ತೊದಳ್ನುಡಿಗಳಂ ಕೈಕೊಂಡು ತೆಂ
ಗಾಳಿಯಿಂ ॥ ಮಿಗೆಯಲ್ಲಾಡುವ ಕೊಂಬುಸಂದಣಿಗಳಂ ಸೊರ್ಕ್ಕಟ
ಮಂ ತೋಱುವೀ । ನಗಬೃಂದಂ ಮಧುಸೇವೆಯಿಂ ಬವಣೆಮೀಱ
ರ್ಪಂತಿರೇಂ ತೂಗುಗುಂ! ॥೨೭

ಮತ್ತಂ,

ವೃ॥ಬಕುಳಂ ಗಂಡೂಷಸೇಕಾಸವಕೆ ಪರಿಮಳಂಗೆಯ್ವಪ್ರೊಲ್ಪೂಗಳಂ
ಬೀ|ಱಕುಮೀಚಾಂಪೇಯಮುಂ ಕೆಂಪಿಡಿಯೆ ಯುವತಿವಕ್ತ್ರೇಂದು
ಚೆಂಬೂಗಳಂ ಪ್ರೊ॥ ಣ್ಮಿಕುಮಿಂತೀಭೃಂಗಸಂಘಂ ಮುದದೊದೆವಬ
ಲಾನೂಪುರಧ್ವಾನಮಂ ಕೇ|ಳ್ದು ಕರಂ ತಾಂ ಕಲ್ತಶೋಕಂಗಳೊಳ
ನುಕರಿಪಂತಿಂಪಿನಿಂ ಪಾಡುತಿರ್ಕುಂ ॥೨೭

ವಿದೂ. (ಕೇಳ್ದು) ಜೀಯ್ಯಾ, ನೇಪ್ಪುರದ ಸಬುದಮನನುಕರಿಪ ತುಂಬಿ ವಿಂಡಿನುಲಿಪಲ್ತಿದು; ಮತ್ತೇನೆನೆ, ದಿಟಮಾಗಿ ನಡೆತರ್ಪ ದೇವಿ ಯರ ಪರಿಜನದ ಕಾಲಂದುಗೆಗಳ ನುಣ್ದನಿಯಾಗವೇಳ್ಪುದು. (ಎನೆ

ವಾಸು. ಎಲೆ ವಿದೂಷಕನೆ, ಚೆನ್ನಾಗಿ ತಿಳಿದೈ.

(ಆಬಱಿಕ್ಕೆ ರುಕ್ಮಿಣೀದೇವಿಯುಂ ಸಾರಸ್ವತಿಯುಂ ಸೌದಾಮಿನಿಯುಂ ಪ್ರವೇಶಂಗೆಯ್ದರ್.)

ದೇವಿ. ಎಲೆ ಸೌದಾಮಿನಿ, ಮುಂತೆ ನಡೆದು ಸಿಂಗರದೋಂಟದ ದಾಱ

ಯಂ ತೋಱುಸಾ. (ಎನೆ

ಸೌದಾ. ದೇವಿಯರಿತ್ತ ತ್ತ ಚಿತ್ತೈಸಿಂ. (ಎಂದು ಮುಂತೆ ನೋಡಿ) ಅಮ್ಮಾ ಈವಸಂತಸಮಯದೊಳ್ ಪಲವುರವಳ್ಳಿಗಳೊಳಂಪಿನಿಂ ಪೊರೆಯುತ್ತಿರ್ಪ ಬಂಡುಣಿವಿಂಡುಗಳಂ ತೆಂಬೆಲರಿಂದಲೆವ ಚೆಂದಳಿರ್ಗಳಿಂದೆಸೆವ ಮಕರಂದೋದ್ಯಾನದ ಸಿರಿ ನಿನ್ನನಿತ್ತ ಚಿತ್ತವಿಸೆಂದು ಕರೆವಂತಿರ್ಪುದು ನೋಡಾ.

ದೇವಿ. ಎಲೆ ಕೆಳದಿ, ನೀಂ ಚೆನ್ನಾಗಿ ತೋಱುವಪೆ. (ಎಂಬುದುಂ

ಸೌದಾ. ಮತ್ತಂ, ಚೆನ್ನಸುಗೆಯ ಮೆಲ್ದಳಿರ್ಗಳೆಂಬ ಚೆಂಬಾಯ್ದೆಱೆಯಿಂದೆ ಎಸೆವ ಮಾವಿನ ಪೂಗೊಂಚಲೊಳ್ಸಂಚರಿಪ ಚಂಚರೀಕಂಗಳೆಂಬ ಮುಂಗುರುಳ್ಗಳಿಂ ಸಿಂಗರಂಬೆತ್ತು, ಇಂಪಾದ ಬಂಡುಣಿವಿಂಡಿನ ನುಣ್ದನಿಯೆಂಬಾಳಾಪಂಗೆಯ್ಯುತ್ತು, ರೂಪವತಿಯಂತೆ ಕಣ್ಗೊಳಸುವೀಯೆಳಮೊಂದೋಟದೊಳ್ ಬಸಂತಸಿರಿಯಂ ನೋಡಾ.

ದೇವಿ. ಎಲೆಗೆ ಸೌದಾಮಿನಿ, ಈಯಸುಗೆಯ ಸೊಬಗಿನೊಳೆನ್ನ ದಿಟ್ಟಿಗಳ್ ನಟ್ಟಿರ್ದಪ್ಪು. ಅದಱಿಂದಾಂ ನೋಡಲಿಲ್ಲ. ಇದಂತಪ್ಪುದು. (ಮತ್ತಮಾಯಸಂಗೊಂಡು) ಎಲೆಗೆ, ಅರಲಂಬನ ಪೂಜೆಗೆ ತಾಣಮಪ್ಪ ಅಸುಗೆಯ ಮರಂ ಇನ್ನೆನಿತು ದೂರದೊಳಿರ್ಪುದು ?

ಸೌದಾ. ಇದೇನಮ್ಮಾ, ಇನ್ನೆತ್ತಣದೂರಂ. ಇದೆಕೊಳ್, ಸನಿಯದೊಳೆ ಕಾಣಲ್ಬರ್ಪುದು. ಈಯಸುಗೆಯಂ ನೋಡಾ. ಇದೇ ಅರಸಿಯರಭಿಮಾನಿಸಿರ್ದದಿರ್ಗಂತಿಯೆಳವಳ್ಳಿ ಪೊದೆಱೆದಿದರಲ ಪಸರದಿಂ ಕಡುರಯ್ಯಮಾಗಿರ್ಪುದು. ಮತ್ತಂ ಇದೇ ಮಾರಾಯಂ ಪತಿಕರಿಸಿದ ಜಾದಿವಳ್ಳಿಯಿರ್ಪುದು. ಇದಕ್ಕೆಂತೆ ಅಸಮಯಕುಸುಮಸಮೃದ್ಧಿಯಾಗವೇಳ್ಪುದೆಂದು ನಿಚ್ಚಮುಂ ಕಕ್ಕಸಂಗೊಳ್ಗುಂ ಮಾರಾಯಂ.

ಆದೊಡೇಂ. ಇತ್ತಿತ್ತ ಚಿತ್ತೈಸಾ. (ಎನಿ (ಮುಂತಣ್ಗಡಿಯಿಡುತಿರ್ಪನಂ)

ಇದೆ ಚೆನ್ನಸುಗೆಯ ಮರಂ. ಈಯೆಡೆಯೊಳ್ಳೈಸೆ ದೇವಿಯುರರಲಂಬನ ಪೂಜೆಯಂ ಮಾಳ್ಪುದು.

ದೇವಿ. ಎಲೆ ಕೆಳದಿ ಸೌದಾಮಿನಿ, ಆದೊಡೆನ್ನೀಪೂಜೋಪಕರಣಂಗಳಂ ತರ್ಪುದು. (ಎನೆ

ಸಾರಸ್ವತಿ. (ಸನಿಯಮಂ ಸಾರ್ದು) ಅಮ್ಮಾ, ಇದೆಕೊಳ್, ಎಲ್ಲಮಂ ಸಜ್ಜುಗೊಳಿಸಿದೆಂ.

ದೇವಿ. (ನಿರವಿಸಿ, ತನ್ನೊಳೆ) ಅಕಟಾ! ಎನಿತುಮೋಸವಾದುದು. ಇದೇಂ ಇವಳಂ ಆವನ ದಿಟ್ಟಿಗೆ ಗೋಚರವಾಗದಂತೆ ತಪ್ಪಿಸಿರ್ದೆಂ, ಅವಂಗೆ ಕಾಣ್ಬಂತಾದುದು. ಇನ್ನೇಗೆಯ್ವೆಂ. ಆದೊಡೇಂ, ಇಂತೆಸಗುವೆಂ. (ಎಂದಾಳೋಚಿಸಿ, ಪ್ರಕಾಶಮಾಗಿ) ಎಲೆಗೆ ಸಾರಸ್ವತಿ, ಇದೇಂ ನೀನೇತರ್ಕೆ ಈಗಳರಲಂಬನ ಪೇರುಕ್ಕೆವದೊಳ್ ಪರಿಜನಮನಿತುಂ ತತ್ತರಂಗೊಂಡಿರ್ಪೆಡೆಯೊಳ್ ಗಿಳಿವಱಿಯನುೞಿದು ಬಂದೈ. ನೀನಾ ತಾಣಕ್ಕೆ ಪೋಗು. ನಿನ್ನ ಕಯ್ಯೊಳಿರ್ಪ ಪೂಜೋಪಕರಣಂಗಳನಿತುಮಂ ಸೌದಾಮಿನಿಯ ಕಯ್ಯೊಳಿಮುಚ್ಚು.

ಸಾರ. ಅಮ್ಮನವರಾಣತಿಗೆಯ್ದಂತಕ್ಕೆ. (ಎಂದು ಅನಿತುಮಂ ಸೌದಾಮಿನಿಯ ಕಯ್ಯೊಳಿರಿಸಿ, ಇನಿತು ದೂರಂ ಪೋಗಿ, ತನ್ನೊಳ್) ಆದೊಡೇಂ ಸಾರಿಗೆಯುಂ ಚಂದ್ರಲೇಖೆಯು ಕಯ್ಯೊಳ್ಕೊಟ್ಟಪೆಂ. ಈಯುಕ್ಕೆವಮಂ ನೋಡವೇಳ್ಪುದೆಂದೆನಗಮಾಸೆಯಿಕುಂ. ಎಮ್ಮ ತಂದೆಯುರಮನೆಯೊಳರಲಂಬನ ಪೂಜೆಯೆಂತಕ್ಕುಮಂತೆಯೊ, ಅಲ್ಲದೊಡಿಲ್ಲಿ ಬೇಱಕ್ಕುಮೊ? ಆದೊಡೇಂ. ಮಱೆಗೊಂಡಾನುಮಿದಂ

ನೋಡುವೆಂ. ಆನುಮರಲ್ವಿಲ್ಲನನಿಲ್ಲಿಂದಮೆ ಪೂಜೆಗೆಯ್ವೆಂ. ಅದರ್ಕೆ ಕೆಂಮಲರ್ಗಳಂ ತಿಱಿತರ್ಪೆಂ.

(ಎಂದು ಮುಂತಣ್ಗೆ ನಡೆದು ಪುಷ್ಪಾಪಚಯಮಂ ನಟಿಸುತಿರ್ದಳ್)

ದೇವಿ. ಎಲೆ ಸೌದಾಮಿನಿ, ಆದೊಡೀಚೆನ್ನಸುಗೆಯ ಮರದಡಿಯೊಳ್ ಕುಡುವಿಲ್ಲನ ಪಡಿವರಿಜನಿಟ್ಟು ಪಡಿಮೊಗಂಗೆಯ್. (ಎನೆ

(ಸೌದಾಮಿನಿಯಂತೆಸಗಿದಳ್.)

ವಿದೂ. ಜೀಯ್ಯೋ, ಆಗಳ್ಕಾಲಂದುಗೆಯ ದನಿಯೆಂದೆಂತು ತಿಳಿವೆನಂತು ದೇವಿಯರಸುಗೆಯ ಮರದಡಿಯಂ ಸಾರ್ದರ್.

ವಾಸು. (ಮುಂತಣ್ಗಡಿಯಿಟ್ಟು ನೋಡಿ) ಇದೆಯಿವಳ್ ರುಕ್ಮಿಣಿ.

ಕಂ॥ ಅಲರೊಳ್ಮಲ್ಲೊಡಲಿಂದಂ ।
ಸಲೆ ನೇಮದಿನೊಪ್ಪುಗೊಂಡ ಪಿಡಿಯಸಿನಡುವಿಂ ॥
ಮಲ*ರ್ಗೋಲನ ಕೆಲದೊಳ್ಮಗೆ ।
ನಿಲಿಸಿದ ಬಿಲ್ವಳ್ಳಿಯಂತಿರಿವಳಂದೆಸೆಗುಂ ॥೨೮

ಆದೊಡೆ ಆವುಂ ಅಲ್ಲಿಗೆ ಪೋಪಂ.

(ಎಂದಿರ್ವರುಂ ದೇವಿಯರ ಸನಿಯಮಂ ಸಾರ್ದರ್.)

ದೇವಿ. (ರಾಯನಂ ಕಂಡು) ಎಲೆಮೊಱೆಯನೆ, ಗೆಲವು ಗೆಲವು! ಇತ್ತಲ್ ದಯೆಗೆಯ್ದು ಕುಳ್ಳಿರವೇೞ್ಪುದು. (ಎಂದು ಮೆಲ್ವಾಸಂ ತೋಱಿಸಿದಳ್

(ವಾಸುದೇವನಾ ನಲ್ವಾಸಿನೊಳ್ ಮಂಡಿಸಿದಂ)

ಸೌದಾ. ಎಲೆ ದೇವಿ, ನೀಂ ತಿಱಿತಂದ ಕೆಂಮಲರ್ಗಳಿಂದಮೆ ಇಂಗೋಲ್ವಿಲ್ಲನಂ ಕುಂಕುಮವೆರಸಿದ ಚೆಂಬಾವನ್ನದಣ್ಪಿಂ ಬಣ್ಣಂಗೊಳಿಸಿ ಈಚೆನ್ನಸುಗೆಯೆಡೆಯೊಳ್ ಪೂಜೆಗೆಯ್. (ಎನೆ

ದೇವಿ. ಆದೊಡೆನ್ನ ಪೂಜೋಪಕರಣಂಗಳನಿಲ್ಲಿರಿಸು. (ಎನೆ

(ಸೌದಾಮಿನಿಯಂತೆಸಗಿದಳ್.)

ದೇವಿ. (ಅದೇ ತೆಱದೊಳ್ ಪೂಜೆಗೆಯ್ಯುತಿರ್ಪನಂ.)

ವಾಸು. (ರುಕ್ಮಿಣಿಯಂ ನೋಡಿ, ಮನದೊಳ್)

ವೃ॥ ಚೆಂಗಾವಿಯಂಶುಕದಿನುಜ್ವಳಮಾಗಿಯಾಗಳ್ ।
ತಾಂ ಗೆಯ್ದ ನೀರೆಱತದಿಂ ಸ್ಫುಟಮಾಗಿ ಕಾಣಿ ॥
ಸ್ವಂಗಂಗಳಿಂ ಪವಳವಳ್ಳಿಯ ಚೊಂಬೆಪೊಲ್ ಸಾ ।
ರಂಗಾಕ್ಷಿಯಂಗಜನನರ್ಚನೆಗೆಯ್ಗುಮೀಗಳ್ ॥ ೨೯

ಎಲೆಗೆ ದೇವಿ, ಕಂ॥ ಅರಲಂಬನ ಪೂಜೆಯೊಳೊಡ ।
ವೆರೆದೊಪ್ಪುವ ನಿನ್ನ ಕಯ್ಯ ಚೆಂದಳದಿಂದ ॥
ಚ್ಚರಿ ಯೀಚೆನ್ನಸುಗೆವರಂ ।
ಭರದಿಂ ಪೆಱತೊಂದು ತಳಿರನಾಂತಪೊಲೆಸೆಗುಂ॥ ೩೦

ಮತ್ತಂ, ಕಂ॥ ಇನಿಯಳೆ ನಿನ್ನೀಕಯ್ಯೊಸ್ಪೆಂ ।
ಕಿನ ಪೇರುಕ್ಕೆವಮಿನಿತ್ತುಮಿಲ್ಲದ ಕತದಿಂ ॥
ನನೆವಿಲ್ಲನಿಂದು ತನಗಾ।
ದನಂಗಭಾವಮನೆಱಲ್ದು ಜಱಿಯದೆ ಮಾಣಂ ॥ ೩೧

ಸೌದಾ. ಎಲೆ ದೇವಿ, ಪೂಗಣೆಯನ ಪೂಜೆಯಾದುದು. ಅದಱಿಂದೆ ಇಂ ನಿನ್ನೆಱೆಯಂಗಂ ಪೂಜೆಯನೊಡರಿಸಾ.

ದೇವಿ. ಆದೊಡೆ ಎಲೆ ಸೌದಾಮಿನಿ, ಪೂಜೋಪಕರಣಮನಿತುಮಂ ಸಾರ್ಚು.

ಸೌದಾ. ಇದೆ, ಅನಿತುಮಂ ಸಜ್ಜುಗೊಳಿಸಿ ತಂದೆಂ.

ದೇವಿ. (ಅನಿತುಮಂ ಕೊಂಡು ವಾಸುದೇವನಂ ಪೂಜಿಸುತ್ತಿರ್ಪನಂ)

ಸಾರ. ಅಕಟಕಟಾ! ಆನಿನಿತುಂ ಪೊೞ್ತುಮೀಪೂಗಳ ಸೊಂಪಂ ನೋಡುತ್ತೆ ಬಱಿಗೆಯ್ಮೆಯಿಂ ಕಳೆದೆಂ. ಈಯರಲ್ವಿಲ್ಲನ ಪೂಜೆಗೆಯ್ವದಂ ಪೊಳ್ದಱಿಂ ಮಱಿಗೊಂಡು ನೋಡುವೆಂ. (ಎಂದು ಬಗೆದು ನೋಡಿ)

ಅಚ್ಚರಿ! ಅಚ್ಚರಿ! ಇದೆ, ಈಯರಮನೆಯೊಳದೊಂದತಿಶಯಂ; ನನೆಗೋಲಂ ಪ್ರತ್ಯಕ್ಷವಾಗಿ ಪಡಿಮೊಗಂಗೊಂಡು ಪೂಜೆಯಂ ಕೈಕೊಳ್ಗುಂ. ಎಮ್ಮರಮನೆಯಲ್ಲಿ ಚಿತ್ರಗತನಾಗಿರ್ಪವನನೇ ಪೂಜಿಸುವರ್. ಆನುಮಿಲ್ಲಿಂದಮೆ ಪೂಜೆಗೆಯ್ವೆಂ.

(ಎಂದು ಮಣಿದು ವಾಸುದೇವನಂ ನೋಡಿ)

ಎಲೆ ವಾಸುದೇವನೆ, ನಿನಗೆಱಗುವೆಂ; ನೀನಿನ್ನೆನಗಮೋಘದರ್ಶನನಾಗು.

(ಎಂದು ತಾಂ ತಿಱಿತಂದ ಕೆಂಪಮಲರ್ಗಳಂ ಸೇಱಿಯೊಳಿಟ್ಟು ನೆಲದೊಳ್ ಚೆಲ್ಲಿದಳ್)

ಆದೊಡೀಗಳ್ ನೋಡತಕ್ಕುದನೆಲ್ಲಮಂ ನೋಡಿದೆಂ. ಇನ್ನಾರುಂ ಕಾಣದ ಮುನ್ನಮೆ ತಳರ್ವೆಂ.

(ಎಂದು ಪಿಂತಣ್ಗೆ ನಾಲ್ಕಡಿಯಿಡುತಿರ್ಪನಂ)

ಸಾಧಾ. ಅಯ್ಯಾ ಕುಚೇಲನೆ, ಪೂಜೆಯ ಬಾಯಿನಂಗಳಂ ಕೊಳವೇೞ್ಪುದು. (ಎನೆ

(ವಿದೂಷಕನಿದಿರ್ವಂದು ನಿಂದಂ.)

ದೇವಿ. ಎಲೆ ಕುಚೇಲನೆ, ನಿನಗಿದೇ ಅಣ್ಪು ಪೂಮಾಲೆ ಮೊದಲಾದುವು, ಇದೇ ನಿನಗೀಸ್ವಸ್ತಿವಾಚನಕ್ಕೆ ದಕ್ಷಿಣೆವಸ್ತ್ರಂಗಳ್. (ಎಂದಿತ್ತಳ್)

ವಿದೂ. (ಅವನಿತುಮಂ ಕೈಕೊಂಡು)

ಎಲೆ ದೇವಿ, ನಿನಗೆ ಲೇಸಕ್ಕೆ. (ಎಂದು ಪರಸಿದಂ)

(ಅನಿತಱೊಳೆ ತೆಱೆಯೊಳ್ ಪಾಠಕರ್ ಪೊಗಳ್ದರ್)

ವೃ॥ ಹರಿದಶ್ವಂ ಕದಿರೞ್ಗಿಯಸ್ತಗಿರಿಯಂ ತಾಂ ಸಂಜೆಯೊಳ್ಸಾರೆ ಭೂ।
ವರರಾಸ್ಥಾನಕೆ ಬಂದರಿಂದು ಸಲವಿಂ ಗೋವಿಂದ ನೋಡೀಗಳಾ॥
ದರದಿಂ ಚಂದ್ರನ ಪಾದದಂತೆ ನಯನಕ್ಕಾನಂದಮಂ ತೀವಿ ತಾ।
ವರೆಯುಂ ಕುಂದಿಪ ನಿನ್ನ ಪಾದಮನರಲ್ದಾನಂದದಿಂ ಸೇವಿಸಲ್ ॥೩೦

ಸಾರ. (ಸಂತಸಂದೆತ್ತು, ಮಗುಳೆ ವಾಸುದೇವನಂ ನಿಟ್ಟಿಸುತ್ತೆ)

ಅಚ್ಚರಿ! ಅಚ್ಚರಿ! ಆವಾಸುದೇವನೇ ಇವಂ! ಇವಂಗೈಸೆ ಎನ್ನ ತಂದೆ ಎನ್ನನಿತ್ತಂ. ಆದೊಡಿನ್ನೆಗಂ ಪೆಱರೊಳಗಮೆಂಬಳಗಜ್ಜದಿಟ್ಟೆಡೆಯೊಳ್ ಪಟ್ಟನ್ನ ಬಗೆಯೆ ಬಣ್ಣಂಗುಂದಿದುದು. ಈಗಳೀ ಮಾರಾಯನ ದರ್ಶನದಿಂದೀಬಾೞ್ತೆಯೇೞ್ತರಮಾದುದು.

ವಾಸು. ಎಲೆಲೆ! ಈಯುಕ್ಕೆವದ ಪೆರ್ಕಳದೊಳ್ ಮಿಕ್ಕೊಲಾಡುತಿರ್ಪ ಎಮಗೀಸಂಧ್ಯಾಕಾಲಂ ತಿಳಿಯದತಿಕ್ರಮಿಸಿ ಪೋದುದು.

ಕಂ॥ ಮಸಗಿದ ಬೆಳ್ಪಂ ಮೂಡಣ।
ದೆಸೆ ತೋಱುಕುಮುದಯಗಿರಿಯನಡರದ ಮುನ್ನಂ॥
ಸಸಿಯಂ ಬೆಳರ್ತ ಮೊಗದಿಂ।
ದಸಿಯಳ್ಕನದಿರ್ಪ ನಲ್ಲನಂ ತೋಱುವವೊಲ್॥ ೩೩

ಸಾರ. ಎಲೆಲೆ! ಇನ್ನೇಗೆಯ್ವೆಂ. ಇದೆ ದೇವಿಯರ್ ಪೊಱಮಟ್ಟರ್. ಆಂ ಮುಂಚಿತಾಗಿ ಪೋಗವೇಳ್ಪುದು. (ಎನುತ್ತೆ ವಾಸುದೇವನಂ ನೋಡುತೆ ನಿಡುಸುಯ್ದು) ಇನ್ನೆಂತು ಮಂದಭಾಗ್ಯೆಯಾದೆನಗೆ ನೀಡುಂ ಪೊೞ್ತುಂ ನೋಡುವದರ್ಕಂ ಕೆಱಪಿಲ್ಲ.

(ಎಂದು ಪಿಂದಿರುಗಿ ಪಿಂದಿರುಗಿ ಆಸೆಯಿಂ ವಾಸುದೇವನಂ ನೋಡುತ್ತೆ ತೆರಳ್ದಳ್)

ವಾಸು. (ನಡೆಯುತ್ತೆ, ದೇವಿಯುಂ ನೋಡಿ)

ವೃ॥ ಅರಸೀ ನಲ್ಗಳೆಯೊಂದಿ ಕೆಂದುಗಳೆದೀ ನಿನ್ನಾಸ್ಯಪೂರ್ಣೇಂದುವಿಂ।
ದರವಿಂದಂ ಕಡುಕಂದಿ ಕುಂದಿ ಪೊಳೆವಂ ಬೀಳ್ಕೊಟ್ಟು ಸಂಕೋಚಮಾ॥
ನ್ತಿರೆ ನಿನ್ನೊಳಗವೇಣ್ಗಳಂಪಿನೊರೆವೊಳ್ಪಡಂದವಂ ಕೇಳ್ದನಾ।
ಣ್ಬೆರೆದಂತಲ್ಲಿಯ ಡಂಗುತಿರ್ಕ್ಕಮುಱದಿಂ ಪೆಣ್ದುಂಬಿಗಳ್ ನಿಟ್ಟಿಸಾ॥ ೩೪

(ಎನುತ್ತನಿಬರುಂ ತೆರಳ್ದರ್)

ಇದು ಮೊದಲಂಕಂ ಸಮಾಪ್ತಂ.

## — ದ್ವಿತೀಯಂ ಅಂಕಂ —

---

ಆಬಳಿಕ್ಕೆ ಶಾರಿಕಾಪಂಜರಮಂ ಕಯ್ಯೊಳವಧಾನದಿಂ ಕೊಂಡು ಚನ್ದ್ರಲೇಖೆ ಸಾರ್ತಂದಳ್.

ಚನ್ದ್ರ. ಅಕಟಕಟಾ! ಸಾರಸ್ವತಿಯೀಸಾರಿಗೆಯ ಪಂಜರಮನೆನ್ನ ಕಯ್ಯೊಳಿಟ್ಟಲ್ಲಿಗೆಯ್ದಿದಳೊ, (ಎನುತ್ತೆ ಮುಂತೆ ನೋಡಿ) ಇದಲ್ತೆ ಕಾದಂಬಿನಿಯಿತ್ತಲೇ ಬಂದಳ್; ಇವಳಂ ಬೆಸಗೊಳ್ವೆಂ.

(ಆಬಳಿಕ್ಕೆ ಕಾದಂಬಿನಿ ಬಂದಳ್.)

ಕಾದಂ. ರಾಯನ ವೃತ್ತಾಂತಮಂ ತಿಳಿದೆಂ. ಗಳ್ಕನೆ ಪೋಗಿ ದೇವಿಯರ್ಗೆ ಬಿನ್ನವಿಸುವೆಂ. (ಎಂದು ನಡೆಯುತ್ತಿರ್ದಳ್.

ಚನ್ದ್ರ. ಎಲೆ ಕಾದಂಬಿನಿ, ಅದೇಂ ನೀನೀಗಳ್ಕಟ್ಟಚ್ಚರಿವಟ್ಟು ಬೆಮ್ಮಱಂಗೊಂಡಂತೆ ತೋರ್ಪೆ; ಅದಱಿಂ ಸನಿಯದೊಳೆಯ್ದಿರ್ಪೆನ್ನುಮಂ ನೋಡದತಿಕ್ರಮಿಸುತಿರ್ಪೆ.

ಕಾದಂ. ಎಲೆಲೆ ಚೆಂದ್ರಲೇಖೆ! ಆಂ ಕಾಣದೆ ನಡೆಯುತಿರ್ದೆಂ. ಎಲೆ ಚೆಂದ್ರಲೇಖೆ, ಅದಂತಪ್ಪುದು. ಈಯುಮ್ಮಹಕ್ಕೆ ಕಾರಣಮುಂಟು. ನೀಂ ಚೆನ್ನಾಗಿ ತಿಳಿವಯ್. ಅದೆಂತೆನೆ:— ಈಗಳ್ಬದರಿಕಾಶ್ರಮದತ್ತಣಿಂ ರಾಮಾನಂದನೆಂಬ ಪೆಸರುಳ್ಳ ಸಿದ್ಧಪುರುಷನೊರ್ವಂ ಬಂದಂ. ಅವನಿಂದಕಾಲದೊಳ್ಕುಸುಮಂಗಳನೊಗೆಯಿಸುವ ದೋಹಳದ ಬಿಜ್ಜೆಯಂ ಕಲ್ತು, ಮಹಾರಾಯಂ ತಾಂ ಪತಿಕರಿಸಿದ ನವಮಾಲಿಕೆಗೆ ಈಗಳೇ ಕುಸುಮಸಮೃದ್ಧಿಯಂ ಮಾಳ್ಪೆನೆಂಬೀ ವೃತ್ತಾಂತಮಂ ತಿಳಿಯಲ್ಕೆಂದೆನ್ನಂ ದೇವಿಯರ್ ಕಳುಪಿದರ್. ಅದಱಿಂ ತಿಳಿದೀವೃತ್ತಾಂತಮಂ ದೇವಿಯರ್ಗಱಿಪಲೆಂದು ಪೋಗುತಿರ್ದೆಂ. ನೀನೆತ್ತಲೆಯ್ದುತಿರ್ದೆ?

ಚನ್ದ್ರ. ಎಲೆ ಕಾದಂಬಿನಿ, ಎನ್ನ ಕೆಳದಿ ಸಾರಸ್ವತಿಯನರಸಲ್ಕೆ.

ಕಾದಂ. ಎಲೆಗೆ ಚಂದ್ರಲೇಖೆ, ಸಾರಸ್ವತಿ ಈಗಳ್ ಕಯ್ಯೊಳ್ ಚಿತ್ರಪಟ ಮಂ ಕೊಂಡು ಕಡಂಗುತೆ ಕದಳೀಗೃಹದೊಳಗಣ್ಗೆ ಪೋಗುತಿರ್ದ್ದಳ್; ಆಂ ಕಂಡೆಂ. ನೀನಲ್ಲಿಗೆ ಪೋಗು. ಆಂ ದೇವಿಯರೆಡೆಗೆ ಪೋದಪೆಂ.

(ಎಂದಿರ್ವರುಂ ತೆರಳ್ದರ್.

— ಇದು ಪ್ರವೇಶಕಂ. —

---

(ಆಬಳಿಕ್ಕೆ ವಿರಹವೇದನೆಯುಂ ನಟಿಸುತ್ತೆ ಸಾರಸ್ವತಿ ಸಾರ್ತಂದಳ್)

ಸಾರ. (ತನ್ನ ಮನಮಂ ಕುಱಿತು) ಎಲೆ ಮನವೆ, ಸ್ಥೈರಿಸು ಸ್ಥೈರಿಸು. ನೀನಿಂತು ದುರ್ಲ್ಲಭಜನದೊಳೇತರ್ಕನುರಾಗಮನೆಸಗುತಿರ್ಪೆ ? ಇದ ಱನೇಂ? ಆಯಾಸಮಾತ್ರಂ ಬರ್ಪುದೈಸೆ.

ಮತ್ತಂ, ಕಂ॥ ಮೊದಲೊರ್ಮೆಯಾವನಂ ನೋ।
ಡಿದ ಮಾತ್ರದೆ ನಿನಗೆ ತಾವಮಿನಿತಾಯ್ತವನಂ॥
ಪದೆದು ಮಗುಳೀಕ್ಷಿಸಲ್ ನೀ।
ನೊದವ್ಪುವರೇ? ನಿನ್ನ ಗಾಂಪತನಕೇನೆಂಬೆಂ ॥ ೩೫

ಎಲೆ ಮನವೆ, ನೀಂ ಕಡುಕೂರಮಲ್ತೆ!

ಕಂ॥ ಒಡನೊಗೆದು ನಲಿದು ಬಳೆಯಿಸಿ।
ಯೊಡನಾಡಿರ್ದೆನ್ನನುೞಿದು ನೀನೊರ್ಮೆಯೆ ಕ॥
ಣ್ಗೆಡಸಿದ ಜನಮಂ ಬಳಸಂ।
ದೊಡನೀವರಿ ಪೋಪೆ ನಿನಗೆ ನಾಣಿಲ್ಲಕಟಾ! ॥ ೩೬

ಅಲ್ಲದೊಡೆ ನಿನ್ನಿಂ ತಪ್ಪೇಂ? ಅಲರ್ಗಣೆಯನ ಕೂರಂಬುಗಳಿಂದೆ ಏಱುವಡೆದು ನೀನಿಂತೆಸಗುವೆಯೈಸೆ; ಅದಱಿಂದರಲಂಬನಂ ಜಱೆವೆಂ.

(ಎನುತ್ತೆ ಕಣ್ಬನಿದುಂಬಿ)

ಕಂ॥ ಆರಲಂಬನೆ ನೀಂ ದೇವಾ ।
ಸುರರಂ ಕಡೆಗಣಿಪ ಬೀರನೆನಿಸಿಯುಮಿಂದೀ ॥
ಪರಿಯಿಂದಬಲೆಯೊಳಧಟಂ ।
ವಿರಚಿಸಿ ನಾಣ್ಬಡೆಯದಿರ್ಪುದಚ್ಚರಿಯಲ್ತೇ ॥೩೨

ಏಕೆಱದೊಳಮೀಕತದಿಂದಾದೆಡೆಟ್ ಎನ್ನ ಹರಣಮಂ ಕಡೆಗಾಣಿಸಲ್ಕೆ ಬಂದಿರ್ಕುಂ. ಆದೊಡೀಗಳಾರಾದೊಡಂ ಬಂದು ಕಾಣ್ಬುದರ್ಕೆ ಮುನ್ನಮೇ ಈಚಿತ್ರಪಟದೊಳೆನಗಭಿಮತಮಾದ ಜನಮಂ ಬರೆದು ನೋಡಿ ಆಬಱಿಕೆಳಸಿದಂತೆಸಗುವೆಂ.

(ಎನುತ್ತೆ ಚಿತ್ರಪಟಮಂ ಕಯ್ಯೊಳ್ಕೊಂಡು)

ಕಡುವೇಟದಿಂದೆನ್ನ ಬೆರಲ್ಗಳಲುಗುತ್ತಿದೆ; ಆದೊಡಮವನನೀಕ್ಷಿಸಲ್ಕೆ ಪೆಱತೊಂದು ತೆಱನಿಲ್ಲ. (ಎಂದು ಬರೆಯುತಿರ್ದಳ್)

(ಆಬಱಿಕ್ಕೆ ಸಾರಿಗೆಯ ಪಂಜರಮಂ ಕೊಂಡು ಚಂದ್ರಲೇಖೆ ಸಾರ್ತಂದಳ್)

ಚನ್ದ್ರ. ಇದಲ್ತೆ ಕದಳೀಗೃಹಂ; ಇಲ್ಲಿಗೆ ಪೋಪೆಂ.

(ಎಂದು ಪೊಕ್ಕು, ಮುಂತೆ ನೋಡಿ, ಅಚ್ಚರಿವಡುತ್ತೆ)

ಇದೇನೀಸಾರಸ್ವತಿ ಕಡುವೇಟಕ್ಕೊಳಗಾಗಿ ಮನದೊಳ್ಧ್ಯಾನಿಸುತ್ತೆ ಏನನೋ ಬರೆಯುತಿರ್ದಳ್, ಅದಱಿನಾಂ ಸನಿಯಕ್ಕೆ ಸಾರ್ದೊಡಂ ಎನ್ನಂ ಕಾಣಳ್; ಆದೊಡಿವಳ್ಗೆ ಕಣ್ಮಱೆಯಾಗಿ ನೋಡುವೆಂ.

(ಎಂದು ಪೆಱಗೆ ನಿಂದು ನಿಟ್ಟಿಸುತಿರ್ದಳ್)

ಸಾರ. ಅರಸನಂ ಬರೆದೆಂ; ನೋಡುವೆನೆಂದೊಡೆ, ಎಡೆವಿಡದೆ ಸುರಿವ ಕಣ್ಣೀರ್ವೊನಲಿಂ ಎನ್ನೀದಿಟ್ಟಿಗಳ್ ನೋಡಲೀಯವು. ಇನ್ನೇವೆಂ?

ಚನ್ದ್ರ. ಇದೇನಚ್ಚರಿ! ಇವಳ್ ಮಾರಾಯನ ಪಡಿವರಿಜಂ ಬರೆದಳ್. (ಇದಿರ್ಗೆವಂದು) ಎಲೆ ಸಾರಸ್ವತಿ, ಲೇಸು ಲೇಸು. ಮತ್ತೇನರಸಂಚೆ ತಾವರೆಗೊಳನಂ ಮಾಣ್ದು ಮಗುಱಾವೆಡೆಯಲ್ಲಿ ರಮಿಸುಗುಂ?

ಸಾರ. (ಕಣ್ಬನಿಗಱೆಯುತ್ತೆ ಮೊಗವೆತ್ತಿ ಚನ್ದ್ರಲೇಖೆಯಂ ಕಂಡು)
ಎಲೆ ಚಂದ್ರಲೇಖೆ!

(ಎನುತ್ತೆ ನಾಣ್ಚಿ ಚಿತ್ರಪಟಮಂ ಮೇಲುದಱ ಸೆಱಗಿಂ ಮುಚ್ಚುತಿರ್ದಳ್)

ಚನ್ದ್ರ. (ತನ್ನ ಮನದೊಳ್) ಇವಳೆನ್ನಂ ಕಂಡು ನಾಣ್ಚಿದವಳ್. ಇದ ಕ್ಕಿಂತೆಸಗುವೆಂ. (ಪ್ರಕಾಶಮಾಗಿ) ಎಲೆ ಸಾರಸ್ವತಿ, ಈಚಿತ್ರಪಟ ದೊಳಾವನಂ ಬರೆದೆ?

ಸಾರ. ಎಲೆ ಚಂದ್ರಲೇಖೆ, ಈಮಹೋತ್ಸವಂಗೊಂಡ ಮನ್ಮಥನಲ್ತೆ! (ಎನೆ

ಚನ್ದ್ರ. (ನಗುತ್ತೆ) ಅಚ್ಚರಿಯಾಗಿರ್ಪುದೀನಿನ್ನಜಾಣ್ಮೆ; ಆದೊಡೆ ನಿ ನ್ನೀಚಿತ್ರದ ಬಗೆಯನಾರಯ್ಯೆ, ಇನಿಸು ಕೊಱತೆವೆರೆದಂತಿರ್ಪುದು. ಆದೊಡಾನುಂ ರತಿಯೊಡವೆರೆವಂತೆ ಚಿತ್ರಿಸುವೆಂ.

(ಎಂದು ಚಿತ್ರಪಟಮಂ ಕೊಂಡು ಬರೆದಳ್)

ಸಾರ. (ಆರಯ್ದು ನೋಡಿ ಮುನಿಸುವೆರಸಿ) ಎಲೆ ಚಂದ್ರಲೇಖೆ, ಎನ್ನಂ ಏತರ್ಕಿಲ್ಲಿ ನೀಂ ಬರೆದೆ?

ಚನ್ದ್ರ. (ನಸು ನಗುತ್ತೆ) ಎಲೆ ಸಾರಸ್ವತಿ, ಬಱಿದೆಯೆನ್ನೊಳೇಕೆ ಕನಲ್ವೆ? ನೀನಾವ ಕೆಱದರಲಂಬನಂ ಬರೆದೆಯೋ; ಆಕೆಱದ ರತಿಯನಾಂ ಬರೆ ದೆಂ; ಎಲೆ ಸಿಗ್ಗಾಳಿ, ಎನ್ನನೇಕಿಂತು ಜೀಱೆ ತಿಳಿವೆ? ಸಾಕಿನಿತು. ನಡೆದ ಪರಿಯನಿತುಮಂ ಸೊಲ್ಲಿಸು.

ಸಾರ. (ಮನದೊಳ್ ನಾಣ್ಚಿ) ಇದನನಿತುಮನಿವಳಱಿದಿರ್ಪಳ್.

(ಎನುತ್ತೆ ಪ್ರಕಾಶಮಾಗಿ, ಚನ್ದ್ರಲೇಖೆಯ ಕಯ್ವಿಡಿದು ಕಣ್ಬನಿಗಱೆಯುತ್ತೆ)

ಎಲೆ ಕೆಳದಿ, ಚಂದ್ರಲೇಖೆ, ಎನ್ನ ಮನದೊಳ್ನಾಣ್ಚಿಕೆ ಪೆರ್ಚುತಿದೆ. ಆದೊಡೀಬಗೆಯನಾರುಂ ತಿಳಿಯದಂತೆಸಗವೇಳ್ಪುದು.

ಚನ್ದ್ರ. ಎಲೆ ಸಾರಸ್ವತಿ, ನೀಂ ಲಜ್ಜಿಸವೇಡ; ಈಬಗೆಯ ಕನ್ನೆವೆಣ್ಗೆ ಈಪರಿಯ ರಾಯಕುವರನೊಳೆಳಸಿಕೆಗೊಳ್ವುದುಚಿತಮಕ್ಕುಂ.

ಆದೊಡವಾರುಂ ತಿಳಿಯದಂತೆಸಗುವೆಂ. ಮತ್ತೀನೆನೆ, ಒರ್ಮೆಯೆ ವಿಸ್ಮಯಾಳಾಪದೊಳೊಂದರೆನುಡಿಯಂ ಬಗೆಗೊಂಡು ಆರ ಮುಂ ತಾದೊಡಂ ನುಡಿಗುವೆಂದೀಮೇಧಾವಿನಿಯೆಂಬ ಸಾರಿಗೆಯೊಳನಿತು ಸಂದೆಯಮುಪ್ಪುದು. (ಎನೆ

ಸಾರ. ಆದೊಡೆನಗೀಗಳ್ ಸಂತಾಪಂ ಮಿಕ್ಕು ಮೀಱಿ ಬಾಧಿಸುತ್ತಿದೆ. (ಎಂಬುದುಂ

ಚನ್ದ್ರ. (ಅವಳೆದಿರ್ದೆಯಲ್ಲಿ ತನ್ನ ಕೆಯ್ಯನಿಟ್ಟು) ಎಲೆ ಸಾರಸ್ವತಿ, ಸೈರಿಸು ಸೈರಿಸು. ಆನೀತಣ್ಗೊಳದಲ್ಲಿ ತಾವರೆಯೆಲೆಗಳುಮನಾಗೆಳಸುಗಳುಮಂ ತರ್ಪೆಂ.

(ಎಂದು ಕೊಳದೆಡೆಗಿೞಿದು ಅಂತವಂ ತಂದು ಆತಾವರೆಯೆಲೆಗಳಂ ಪರಪಿಟ್ಟಿರಿಸಿ ಆ ಬಿಸಜಂಗಳಿಂ ಕಂಕಣಹಾರಂಗಳನೆಸಗಿ ಅವಳ್ಗೆ ತುಡಿಸಿ ಮಿಕ್ಕೆಲೆಗಳಂ ಪೊದಿಸಿದಳ್)

ಸಾರ. ಎಲೆ ಕೆಳದಿ, ಈತಾವರೆಯೆಲೆಗೆಳಸುಗಳಂ ತೆಗೆ. ಸಾಕಿವು. ಇವಱನೇಂ? ಬಱಿದೆಯೇತರ್ಕೆನ್ನಂ ಕೋಟಲೆಗೊಳಿಸುವೆ? ಆಂ ನುಡಿವುದನಾಲಿಸು ;

ಕಂ॥ ಅನುರಾಗಂ ದೊರೆಕೊಳ್ವುದ ।
ಜನದೊಳ್ನಾಣ್ಪಿರಿದು ನೋಡೆ ಪರವಶೆಯಾನುಂ ॥
ಮನದಱ್ತು ವಿಗಡಮಿದಱಿಂ ।
ದಿನಗಳಿಪ್ಪೊಂದಲ್ಲದುೞಿವ ತೆಱನಂ ಕಾಣೆಂ ॥೩೮

(ಅನಿತರೊಳ್ ತೆಱೆಯೊಳ್ ಗಲಬೆಯಾದುದು)

ವೃ॥ಕೊರಲೊಳ್ ಕಟ್ಟಿರ್ದ ಪೊಂದಾವುಱ್ ಪರಿದದನೀಳುತ್ತೆ ಬಾಗಿಲ್ಗದಂಗಳ್ । ಬಿಲಿವಂತೊತ್ತುತ್ತೆ ಪೊಂಗಗ್ಗರಗಳುಲಿಯೆ ಪಾದಂಗಳಂ ನರ್ತಿಸುತ್ತುಂ ॥ ದರಮಂ ನೋೞ್ಪುಗೊರ್ಡಚರ್ತ್ತರಮನೆಯೆಡೆ. ಗೀಲಾಯುಧಿಂ ಮೀಱಿ ಬಂದಿತ್ತರರೇ! ಕರ್ಣ್ಗೀಡಗಂ ಭೋಯೆನುತೆ.

ವೆಱಗೆ ಸಾರ್ತರ್ಪಿನಂ ಲಾಯವಳ್ಳಿರ್ ||೩೯

ಮತ್ತಂ, ವೃ||ಭರದಿಂ ಕೋಡಗಮೆಯ್ದೆ ಮೆಯ್ಗರೆದರಣ್ಣಂಗಳ್ವಲಜ್ಜ

ರ್ ಬಿಗು | ತಿರ್ಪರವಂ ಕಾಣದೆ ಗುಜ್ಜರಲ್ಲಿ ನುಗುಳ್ದರ್ ತದ್ವಾರ

ಪಾಣಂಗಳೊಳ್ || ಸರಿದರ್ ತಾಂ ಪೊಱಗಾವಪ.. ಪೆಸಱನಾಂತಿ

ರ್ದಂತೆವ್ರೊಲ್ಬಾಹ್ಯಜ|ತ್ವರವುಂ ತಳ್ಗಿ ಕೂನುಂಗುತುಂ ನಡೆಯು

ತಿರ್ದರ್ ಕೂನರುಂ ಬೇಗದೊಳ್ ||೪೦

ಚನ್ದ್ರ. (ಆಗಲದಿಯಂ ಕೇಳ್ದು ಮುಂತೆ ನೋಡಿ, ಕೋಡಗಮಂ ಕಂಡು, ತನ ಕದಿಂದೆಟ್ಟು ಸಾರಸ್ವತಿಯ ಕಯ್ವಿಡಿದು) ಎಲೆ ಸಾರಸ್ವತಿ, ಪಿಱಿಟ್. ಇದೆ ವಿಗಡವಾದ ಕರ್ಗೋಡಗಮಿತ್ತಲೆಯ್ತರ್ಪುದು ; ಅದಱನಾ ಮುಮಿಲ್ಲಿಂದಂ ಪೊಱಮಟ್ಟು ಕದಳಿಯ ಪೊದಱೊಳ್ ಮಱೆಗಿರ್ಪುದಲ್ಲಿಗೆ ಪೋಪಂ.

(ಎನುತ್ತಿರ್ವರುಮೋಡಿ ಪೋಗಿಯಾಯೆಡೆಯೊಳ್ನುಕ್ಕು ನೋಡುತಿರ್ಪಿನವೊಗಳ್)

ಸಾರ. ಎಲೆ ಚಂದ್ರಲೇಖೆ, ಇನ್ನೇವಂ? ಚಿತ್ರಪಟವುಂ ಬಿಟ್ಟು ಬಂದೆ ವು, ಒರ್ಮೆಯಾರಾನುಮಿದಂ ಕಾಣ್ಬರ್. (ಎನೆ

ಚನ್ದ್ರ. ಎಲೆ ಅಱವಿಲ್ಲದಳೆ, ಈಚಿತ್ರಪಟದಿಂದೇಂ ; ಇದೆಕೊಳ್, ಈ ದುಱುದುಂಬಿಗೋಡಗಂ ಪೊಸರ ಬಟ್ಟಲಾಸೆಯಿಂದೀಪಂಜರದ ಬಾಗಿಲಂ ಪಾಱದೆಗೆದು ಸಾರಿಗೆಯಂ ಪಾಱಸಿಬಿಟ್ಟು ಬಟ್ಟಲಂ ಕೊಂಡೆಯ್ದುದು ; ಇದಲ್ತೆ ಮೇಧಾವಿನಿಯಲ್ಲಿಂದಂ ಪೊಱಮಟ್ಟು ಪಾಱ ಬರುತಿರ್ಕುಂ, ಅದಱಂದದಂ ಪಿಡಿಯಲ್ಪೋಪಂ.

(ಎಂದಿರ್ವರುಂ ನಡೆಯುತ್ತಿರ್ದರ್, ಅನಿತರೊಳ್)

ಸಾರ. (ಪಿಂತಿರುಗಿ ನೋಡಿ ಬಿಗುರ್ಪುಗೊಂಡು)

ಎಲೆ ಚಂದ್ರಲೇಖೆ, ಇತ್ತ ನೋಡಾ, ಆದುಟ್ಟವಾಣರಂ ಬೇಗದಿಂ ಮುಗುಳೆ ಬಂದಪ್ಪುದು. (ಎಂಬುದುಂ

ಚನ್ದ್ರ. (ಹಿಂತಿರುಗಿ ನೋಡಿ, ನಸುನಗುತ್ತೆ) ಎಲೆ ಮರುಳೆ, ಇವಂ ಮಾರಾಯಂಗೆ ನಲ್ಗೆಳೆಯನಾದಯ್ಯಾ ಕುಚೇಲಂ ಬರುತಿರ್ಕುಂ, ನೀಂ ಭಯಮಂ ಬಡಬೇಡ. (ಎಂದಳ್.

(ಆಬಱಿಕ್ಕೆ ಸೋಜಿಗಂಗೊಳುತ್ತೆ ಕುಚೇಲಂ ಸಾರ್ತಂದಂ)

ಕುಚೇಲಂ. ಹಿ ಹಿ! ಅಚ್ಚರಿಯಚ್ಚರಿ! ಭಳರೇ! ರಾಮಾನನ್ದಸಿದ್ಧನೆ, ನಿನ್ನ ಪೆಂಪನೇನೆಂದು ಬಣ್ಣಿಪೆಂ!

ಚನ್ದ್ರ. ಎಲೆ ಸಾರಸ್ವತಿ, ಇವನಂ ನೋಡಿಯೆಮಗೆ ಬರ್ಪುದೇಂ; ಸಾರಿಗೆ ದೂರಂ ಪೋದುದು, ಅದಂ ಪಿಡಿತರ್ಪಂ, ಬಾರಾ.

(ಎನುತಿರ್ವರುಂ ತೆರಳ್ದರ್)

ವಿದೂ. ಎಲೆ ರಾಮಾನಂದನೆ, ನಿನ್ನ ಜಾಣ್ಮೆಯಂ ಮಾರಾಯಂಗೆ ಬಿನ್ನವಂಗೆಯ್ವೆಂ. (ಎಂದು ನಡೆಯುತ್ತೆ) ಇದಲ್ತೆ ಮಾರಾಯಂ, ರಾಮಾನಂದನಿತ್ತ ದೋಹಳದ ಬಿಜ್ಜೆಯ ನಂಬುಗೆಯಂ ಕಾಣ್ಬುದರ್ಕೆ ಮುನ್ನಮೆ, ತಾಂ ಪತಿಕರಿಸಿದ ಜಾದಿವಳ್ಳಿಯಂ ಕಮ್ಮಲರ್ಗೊಂಚಲ್ಗಳಿಂ ಪಸದನಂಗೊಂಡಿರ್ಪುದಾಗಿಯಿದಿಱೊಳ್ನೋಡುತಿರ್ಪನಂತೆ ಹರ್ಷೋತ್ಫುಲ್ಲನಯನನಾಗಿ ಇತ್ತಲೇೞ್ತರ್ಕುಂ. ಅದಱನಿವನ ಸನಿಯಮಂ ಸಾರ್ವೆಂ. (ಎಂದು ನಡೆಯುತಿರ್ದಂ)

(ಆಬಱಿಕ್ಕೆ ವಾಸುದೇವನಂತು ನಿರವಿಸಿದ ತೆಱದಿಂ ಸಾರ್ತಂದಂ)

ವಾಸು. (ತನ್ನ ಮನದೊಳ್)

ವೃ॥ ಮಸಗಿ ಬೆಳರ್ತ ರೂಪದೆ ವಿಜೃಂಭಣದುತ್ಕಲಿಕಾವಿಶೇಷದಿಂ।
ಶ್ವಸನದ ವೇಗದಿಂದಮಲೆವೀಯೆಳೆವಳ್ಳಿಯನಂಗಚೇಷ್ಟೆಯಿಂ॥
ಬಸವಱಿದಿರ್ಪ ಬೇಱನಿಯಳಂತುಱೆ ಕಾಣಿಸಿಯೆನ್ನನಲ್ಲಳು।
ಬ್ಬಸವಡೆದುರ್ಕಿ ಕೋಪದೊಧದಿಂದೆ ಕಟಾಕ್ಷಿಸುವಂತೊಡರ್ಬ್ಬಿವೆಂ॥

ವಿದೂ. (ಸನಿಯಮಂ ಸೋರ್ದು) ಜೀಯಾ, ದೈವಾನುಕೂಲ್ಯದಿಂ ನೀನೆಳಸಿದಂತಾದುದು ; ದೋಹಳವಿದ್ಯೆಯುಂ ನೀನಿಂತೆಸಗಿದ ಮಾತ್ರದೊಳೆ ಜಾದಿವಳ್ಳಿಯಿಂತಾದುದು. ಅದೆಂತೆನೆ :— ಎಡೆವಿಡದೆ ಪೊಣ್ಮುವ ಪೂಗೊಂಚಲ್ಗಳಿಂದೆಡೆಗುಡಿಗಳನೆಲ್ಲಮಂ ಮುರಸಿ ಅರಸಿಯರ್ ಪತಿಕರಿಸಿದ*ದಿರ್ಮುತ್ತೆ, ಅದಿರ್ಗಂತಿಯ ಲತೆಯುಂ ಪರಿಹಾಸಮಂ ಮಾಳ್ಪಂತಿರ್ಪುದು.

ವಾಸು. ಎಲೆ ಕುಚೇಲನೆ, ಅದರ್ಕೆ ಸಂದೆಯಮೇಂ. ಮಣಿಮಂತ್ರೌಷಧಂಗಳ ಮಹಿಮೆಯಚಿಂತ್ಯಮಲ್ತೆ ! ಆದೊಡೆ ನೀಂ ಮುಂತೆ ದಾರಿಯಂ ತೋಱುತ್ತುಂ ನಡೆ. ಆನುಮಾತೆಱನಂ ನೋಡಿ ಕಣ್ಗಳಂ ಸಫಲಂಗೆಯ್ವೆಂ. (ಎಂಬುದುಂ

ವಿದೂ. (ಸಡಗರದಿಂ ನಡೆಯುತ್ತೆ) ಇತ್ತ ನೀಂ ಚಿತ್ತೈಸುವುದು.

ವಾಸು. ಅಕ್ಕೆ, ನಡೆ. (ಎನುತ್ತಿರ್ವರುಂ ನಡೆಯುತ್ತಿರ್ಪಿನಂ)

ವಿದೂ. (ಭಯಂಬಟ್ಟು ತಿರುಗಿ ವಾಸುದೇವನಂ ಕೆಯ್ವಿಡಿದೆಳೆಯುತ್ತೆ) ಎಲೆ ಮಾರಾಯನೆ, ತಿರುಗು ತಿರುಗು, ಓಡಿಪೋಪಂ. ಈಬಕುಳದ ಮಱದೊಳ್ ಪಿರಿದಾದೊಂದು ಭೂತಮಿರ್ದಪುದು. (ಎನೆ

ವಾಸು. ಎಲೆ ಮರುಳೆ ! ನೀಂ ಭಯಂಬಡಬೇಡ, ತೆಪ್ಪನೆ ನಡೆ; ಈ ಯೆಡೆಯೊಳಮೀವರಿಯ ವಿಕಾರಂಗಳೊಳವೆ ?

ವಿದೂ. ಇದೆಕೊಳ್, ವ್ಯಕ್ತಮಾಗಿ ನುಡಿದೋಱುತ್ತಿದೆ. ಎನ್ನೊಳ್ ನಂಬುಗೆಯಿಲ್ಲದಿರ್ದೊಡೆ ನೀಂ ಮುಂದೆ ನಿಂದಾನುಡಿಗಳಂ ಕೇಳ್.

ವಾಸು. (ಮುಂತಣ್ಗೆ ನಡೆದು ನಿಂದು ಕೇಳ್ದು)

ಕಂ॥ ಇದೆಕೊಳ್ಗಳವಱ ಪೆಣ್ಣು ।
ದುಡಱಿಂದನಿದಾಗಿ ತನ್ನೊಡಲ್ಕಿಱಿದಾಗಿ ॥

ಪೆರ್ದಱಿಂ ಮೆಲ್ಲನುಡಿಗೊಂಡಂ |
ದದೆ ಪುಳಕಮಾಗಿಲ್ಲಿ ನುಡಿಗುಮೊಂದಾಂ ತಿಳಿದೆಂ ||೪೦

(ಎನುತ್ತೆ ಮೊಗಮಂ ನೆಗಪಿ ಕೆಂಡಚ್ಚರಿಗೊಂಡು)

ಎಲೆಗೆ ಇದು ದಿಟವಾಗಿ ಸಾರಿಗೆಯಾದುದು.

ವಿದೂ. (ತಾನುಮಳ್ಕಿ ದಿಮೇಲೆ ನೋಡಿ) ನಿಕ್ಕುವಮಾಗಿ ಸಾರಿಗೆಯಾದುದು. ಎಲೆ ಜೀಯ್ಯಾ, ನೀಂ ಕಡುಬಿಗುಪೆರ್ಗೊಂಡಮನ್ನೈಸೆ; ಈಸಾರಿಗೆಯನೇ ಭೂತಮೊಂದು ನುಡಿಯುತಿರ್ಪ್ಪ. (ಎಂಬುದುಂ.

ವಾಸು. ಎಲೆ ಮೂರ್ಖನೆ, ನಿನ್ನ ದೋಷಮನೆನ್ನೊಳೆಂತಾರೋಪಿಪೆ? (ಎನೆ

ವಿದೂ. ಎಲೆ ಮಾರಾಯನೆ, ಇಂತಾದೊಡಿದಱನೇನೆನ್ನಂ ತಡೆಯಲ್ವೇಡ, ಆನಿದಂ ತಿಳಿವೆಂ. (ಎಂದೊಂದು ಕಟ್ಟಿಗೆಯಂ ಕೊಂಡು.)

ಎಲೆ ತೊಳ್ಳಿನ ಮಗುವೆ! ನೀನೆಂತು ತಿಳಿದಪೆ? . ನಿಕ್ಕುವಮಾಗಿ ನುಡಿ. ವಸಂತಕನೆ ಭೀರುವೋ, ಈಮಾರಾಯನೋ? ಅಲ್ಲದೊಡೆ, ನಿನ್ನನೀದುರ್ಜನಹೃದಯದಂತೆ ಕುಟಿಲಮಾಗಿರ್ಪ ಕಟ್ಟಿಗೆಯಿಂ ಕುಟ್ಟಿ ಬಕುಳದ ಮಱವತ್ತಣಿಂ ಪಕ್ವಮಾದ ಬೆಳವಣ್ಣಂತೆ ಕೆಡಪುವೆಂ.

ವಾಸು. (ತಡೆದು) ಎಲೆ ಮೂರ್ಖನೆ, ಈಸಾರಿಗೆಯೇನನೋ ರಮಣೀಯಮಾಗಿ ನುಡಿಯುತಿರ್ಪುದು ಕೇಳ್ವೆಂ. ಇದನೇಕೆ ಬೆಗಱಿಸುವೈ? (ಎನೆ

ವಿದೂ. ಆದೊಡೆ ಮಾಣ್ದೆಂ.

(ಬಱಿಕ್ಕಿರ್ವ್ವರುಂ ಕೇಳುತ್ತಿರ್ದರ್.)

(ಮಱಗೋಡಿನೊಳೆ ಸಾರಿಗೆ ತನ್ನೊಳೆ ತಾಂ.)

"ಎಂನನೇತರ್ಕಿಲ್ಲಿ ನೀಂ ಬರೆದೆ? ನೀನಾವ ಕೆಱಹರಲಂಬನಂ ಬರೆದೆಯೋ ಆಕೆಱದ ರತಿಯನಾಂ ಬರೆದೆಂ. "ಬಱದೆ ಎನ್ನೊಳೇಕೆ ಕನಲ್ವೆ?"

ವಿದೂ. ಎಲೆ ಜೀಯ್ಯಾ, ಅಸಂಬದ್ಧಮಂ ನುಡಿಗುಂ, ಇದಱನೇಂ?

ವಾಸು. ಅಂತಲ್ತು.

ವಿದೂ. ಅಂತಲ್ಲದೆ ಮತ್ತೇಂ ?

ವಾಸು. ಆವಳೊರ್ವಳ್ ಆವನೊರ್ವನೊಳೋ ಬೇಟಂಗೊಂಡು ಅವನಂ ಚಿತ್ರದೊಳ್ಬರೆದು ಅರಲುಂಬನ ನೆವಂಗೊಂಡು ಬರ್ವಳ್ದ ತಪ್ಪಿಸಿದಳ್. ಆ ಸಖಿ ತಿಳಿಯಲಸದಳವಾದಾ ಪರಿಯಂ ಚದುರತನದಿಂ ತಿಳಿದು ಆ ಚಿತ್ರದೊಳವಳನೇ ಬರೆದು ರತಿಯೆಂಬ ನೆವದಿಂ ತಪ್ಪಿಸಿದಳ್, ಎಂಬುದು ನುಡಿಯುತಿರ್ಕುಗಮೆಂದಾನಿಂತು ತಿಳಿದಪೆಂ. (ಎನೆ

ವಿದೂ. (ಸಾರಿಗೆಯುಂ ವಾಸುದೇವನಂ ತಿರುತಿರುಗಿ ನೋಡುತೆ ಬೆರಲ್ಗಳಿಂ ಚಿಟುಂಕೆ ನಿಡುತೆ ಸೋಜಿಗಂಗೊಂಡು) ಅದಪ್ಪುದಪ್ಪುದು. (ಎನೆ

ವಾಸು. ಎಲವೊ ಗಲಬೆಗೆಯ್ಯದೆ ಸುಮ್ಮನಿರು, ಮತ್ತಂ ನುಡಿಯುತ್ತಿದೆ ಕೇಳ್ವಂ.

ವಿದೂ. ನೀಂ ನುಡಿದಂತಕ್ಕೆ. (ಎನುತ್ತೆ ತೆಪ್ಪನಿರ್ದ ಮೇಲೆ)

ಸಾರಿಗೆ. "ಎಲೆ ನೀಂ ಲಜ್ಜಿಸವೇಡ, ಈಬಗೆಯ ಕನ್ನೆವೆಣ್ಗೆ ಈಪರಿಯ ರಾಯಗುವರನೊಳೆಳಸಿಕೆಗೊಳ್ವುದು ಚಿತಮಕ್ಕುಂ."

ವಿದೂ. ಎಲೆ ಜೇಯ್ಯಾ, ನೀಂ ಬಲ್ಲವನೆಂಬ ಗರ್ವಮಂ ತಳೆಯದಿರು. ಆನಿಂತು ವಕ್ಕಣಿಸುವೆಂ. ಆವ ಕನ್ನೆವೆಣ್ಣಿಲ್ಲಿ ಬರೆದಿರ್ದಳವಳಂ ಕಾಣವೇೞ್ಪುದು.

ವಾಸು. ಎಲೆ ವಿದೂಷಕ, ಅವಧಾನದಿಂ ಕೇಳವೇೞ್ಪುದು; ನೀಂ ಸುಮ್ಮನಿರು. ಕೌತುಕಕ್ಕವಕಾಶಮುಂಟು.

ಸಾರಿಗೆ. (ಬಾನೊಳ್) "ಎಲೆ ಕೆಳದಿ, ಈತಾವರೆಯೆಲೆಗೞಸುಗಳಂ ತೆಗೆ. ಸಾಕಿವು. ಇವಱಿನೇಂ? ಬಱಿದೆಯೇತರ್ಕೆನ್ನಂ ಕೋಟಲೆಗೊಳಿಸುವೆ?'

ವಿದೂ. ಎಲೆ ಜೇಯ್ಯಾ, ಇದೇಂ ಪೇೞ್ದಪ್ಪುದು? ಅದಂ ನೀಂ ಕೇಳ್ದಪಯೋ?

ವಾಸು. ಕೇಳ್ದಮಾತ್ರಮೆ ಅಲ್ತು, ಅದಱಭಿಪ್ರಾಯಮುಮಂ ತಿಳಿದೆಂ.

ವಿದೂ. ನಿಲ್ ನಿಲ್ ಇನ್ನುಮೇನನೋ ಗೊಣಗುತಿರ್ಪುದು. ಇವೆಲ್ಲಮಂ ಚೆನ್ನಾಗಿ ನಿರವಿಸಿ ಬಱಿಕ್ಕೆ ವಕ್ಕಣಿಸುವೆಂ.

ವಾಸು. ಅಂತಪ್ಪುದು; ಚೆನ್ನಾಗಿ ವಚಿಸಿದೈ. ಇನ್ನುಂ ಕೇಳ್.

ವಿದೂ. ಇದೆಕೊಳ್, ಈತೊಱ್ತಿನ ಮಗು ಸಾರಿಗೆ ಚತುರ್ವೇದಿಯಾದ ಪಾರ್ವನಂತೆ ಬುಕ್ಕುಗಳನೋದುತ್ತಿದೆ. (ಎನೆ

ವಾಸು. ಆಂ ಪರಾಕಿನಿಂ ಕೇಳ್ದುದಿಲ್ಲ, ಅದೇನೆಂದಪ್ಪುದದಂ ಪೇೞ್.

ವಿದೂ. "" ಕಂ॥ ಅನುರಾಗಂ ದೊರೆಕೊಳ್ವದ |
ಜನದೊಳ್ ನಾಣ್ಪಿರಿದು ನೋಡೆ ಪರವಶೆಯಾನುಂ॥
ಮನದಱ್ತು ವಿಗಡಮಿದಱಿಂ |
ದಿನಗಱಿಪ್ಪೊಂದಲ್ಲದುಱುವ ತೆಱನಂ ಕಾಣೆಂ ॥ ೮೩"

ಇಂತೆಂದು ನುಡಿದುದು.

ವಾಸು. ಭಳಿರೇ ! ಮಹಾಬ್ರಾಹ್ಮಣನೆ ! ನಿನ್ನನುಱಿದು ಬುಕ್ಕುಗಳ ಪರಿಯಂ ತಿಳಿದವರಾರ್ ?

ವಿದೂ. ಆದೊಡಿದು ಮತ್ತೇಂ ?

ವಾಸು. ಇದು ಆವಳೋ ಕಡುಜವ್ವನವೆಣ್ಣೊರ್ವಳ್ ಮನದಿನಿಯನಂ ನೇಱಲ್ತಱನಂ ಕಾಣದೆ ತನ್ನ ಹರಣದೊಳಾಸೆ ಪಱಿದು ನುಡಿವ ಪದ್ಯಮಲ್ತೆ.

ವಿದೂ. (ಕೇಳ್ದು, ಪಕಪಕನೆ ನಕ್ಕು, ಕೈತಪ್ಪಳೆಯನಿಟ್ಟು ನಗುತ್ತೆ,) ಎಲೆ ಜೀಯಾ, ಇದೇನೀತೆಱದ ಕೊಂಕುನುಡಿಗಳನೇತರ್ಕೆ ನುಡಿವೆ ? ಆವಳೋ ಒರ್ವಳ್ ಕನ್ನೆವೆಣ್ ನಿನ್ನಂ ಕಂಡು ನೇಱುವದರ್ಕೆ ತೆಱನಂ ಕಾಣದೆ ಪೇೞ್ದಳೆಂದು ನುಡಿಯಬಾರದೆ ? ಅಲ್ಲದೊಡೆ ಮನ್ಮಥನ ತೆಱದೊಳ್ ಬೇಱಾವನಂ ಬಣ್ಣಿಸಲ್ಕಕ್ಕುದು?

ವಾಸು. (ಮೇಲೆ ನೋಡಿ) ಫಡಫಡ! ಎಲೆ ಮೂರ್ಖನೆ ಪಕಪಕನೆ ನಗುತೆ ನೀಂ ಗಲಬೆಗೆಯ್ಯೆ, ಭಯದಿಂದಾಸಾರಿಗೆಯೆೞ್ದು ಪಾಱಿ ಪೋದುದು.

(ಎನುತ್ತೆ ನೋಡುತ್ತಿರ್ಪನಂ)

ವಿದೂ. (ನೋಡಿ) ಎಲೆ ಜೀಯ್ಯಾ, ಇದೆಯಾಸಾರಿಗೆ ಕದಳೀಗೃಹದೆಡೆಗೆ ಪೋದುದು. ಆಮುಮುಱವೊಳಲ್ಲಿಗೆ ಪೋಪಂ.

ವಾಸು. ಅಂತಕ್ಕೆ. (ಎನುತ್ತಿರ್ವರುಂ ನಡೆಯುತ್ತಿರ್ದಪರ್)

ವಾಸು. ಕಂ॥ ಅಲರಂಬನ ಕೂರ್ಗೆಯ್ಮೆಯಿ।
ನಲಿವಡುತೆ ಸಖಿಯರೊಳೊಲ್ದು ನುಡಿಯುತ್ತಿರ್ಪಾ॥
ಲಲನೆಯ ನುಡಿಯಂ ಮಗುೞ್ದಱ।
ನಲವಿಂದೊರೆವ ಗಿಳಿವಾತುಗೇಳ್ವಂ ಧನ್ಯಂ ॥ ೪೪

ವಿದೂ. ಇದೆ ಕದಳೀಗೃಹಂ. (ಎಂದಿರ್ವರುಂ ಪವ್ರೇಶಂಗೆಯ್ದರ್) ಎಲೆ ಜೀಯ್ಯಾ, ಆಸಾರಿಗೆಯಿಂ ಬರ್ಪುದೇಂ? ಈಯೆಡೆಯೊಳ್ಮೆಲ್ಲತಾಗಿ ಬೀಸುವ ತೆಂಬೆಲರಿಂದಲೆವೆಳವಾೞೆಯೆಲೆಗಳಿಂ ತಣ್ಪಾಗಿರ್ಪುದು; ಈಯೆಡೆಯೊಳನಿಸು ಪೊೞ್ತು ಕುಳ್ಳಿರ್ಪಂ. (ಎನೆ.

ವಾಸು. ಎಲೆ ವಿದೂಷಕ, ನಿನ್ನ ಮನಕ್ಕೆ ಬಂದಂತೆ.

(ಎಂದಿರ್ವರುಂ ಕುಳ್ಳಿರ್ದಪರ್.)

ವಿದೂ. (ಕೆಲನಂ ನೋಡಿ) ಎಲೆ ಜೀಯ್ಯಾ, ಇದೆಕೊಳ್, ಆಸಾರಿಗೆ ಈ ತೆಱೆದ ಬಾಗಿಲ ಪಂಜರದಿಂ ಪೊಱಮಟ್ಟು ಪೋಗಿರ್ಪುದಾಗವೇೞ್ಪುದು. ಇದುಮಾ ಚಿತ್ರಪಟಮಪ್ಪುದು.

ವಾಸು. ಎಲೆ ಕುಚೇಲನೆ, ನೀಂ ನೋಡಾ. (ಎನೆ

ವಿದೂ. (ಎೞ್ದು ಚಿತ್ರಪಟಮಂ ಕೈಗೆ ತೆಗೆದುಕೊಂಡು ನೋಡಿ, ಹರಿಸಂದಾಳ್ದು) ಎಲೆ ಜೀಯ್ಯಾ, ದೈವಾನುಕೂಲದಿಂ ನಿನಗೆ ಲೇಸಾದುದು. (ಎನೆ

ವಾಸು. (ಕೌತುಕಂಗೊಂಡು) ಅದೇಂ ಪೇೞ್; ಅದಱೊಳಿರ್ಪುದೇಂ?

(ಎನೆ

ವಿದೂ. ನಿನ್ನನೀಪಟದೊಳ್ಬರೆದಿರ್ಕುಂ. ಅಲ್ಲದೊಡಲರಂಬನ ನೆವಂಗೊಂಡು ಮತ್ತಾವನನಂಗೀಕರಿಸುವರೆಂದು ಮುನ್ನಾಂ ಪೇೞ್ದಂತಿರ್ಪುದು. (ಎನೆ

ವಾಸು. (ಹರಿಸಂದಳೆಯುಂ, ಮೊಗಮುಂಬಾಗಿ) ಎಲೆ ಕುಚೇಲನೆ, ಇತ್ತಿತ್ತ.
(ಎಂದು ಕೈಗಳಂ ನೀಡಿದಂ.)

ವಿದೂ. ಎಲೆ ಜೀಯಾ, ಆನಿದಂ ನಿನಗೆ ತೋಱಿಸೆಂ. ಇದಱಲ್ಲಿ ಆವಳನೋರ್ವಳಂ ಬರೆದಿರ್ಪುದು, ಅದಱಿಂದೆನಗುಡುಗೊರೆಯನೀಯದೆ ಇಂತಪ್ಪ ಕನ್ನೆರನ್ನೆಯಂ ತೋಱುವೆನೆ? (ಎಂಬುದುಂ.

ವಾಸು. (ಬಲ್ಮೆಯಿಂ ಸೆಳೆದು, ಚಿತ್ರಪಟಮಂ ಕೈಯೊಳ್ಕೊಂಡಚ್ಚರಿವಟ್ಟು, ನಿಟ್ಟಿಸಿ) ಎಲೆ ಕುಚೇಲನೆ! ನೋಡು ನೋಡು! ಈಕನ್ನೆವೆಣ್ ಚಿತ್ರಗತೆಯಾಗಿಯುಂ,

ಕಂ॥ ಕಮಲಾಕೃತಿಯಂ ಲೀಲಾ।
ಕ್ರಮದಿಂ[ಕೀೞ್ಗ]ಯ್ದು ಪಕ್ಷಪಾತಮನೆನ್ನೊಳ್॥
ಸಮೆಯಿಸುತಿರ್ಪಳ್ಮನಸ।
ಕಮರ್ಕೆಯಿಂ ಪ್ರೊಕ್ಕು ರಾಜಹಂಸಿವೊಲಮಮಾ! ॥೮೫॥

[ಅಬೞಿಕ್ಕಾಯೆಡೆಗೆ ಚಂದ್ರಲೇಖೆವೆರಸು ಸಾರಸ್ವತಿ ಸಾರ್ತಂದಳ್.]

ಸಾರ. ಎಲೆ ಕೆಳದಿ, ಎಮಗೆ ಸಾರಿಗೆ ಸಿಲ್ಕಿದುದಿಲ್ಲ. ಈಕದಳೀಗೃಹದೊಳ್ ಚಿತ್ರಪಟಮನಾದೊಡಂ ಕೊಳ್ವಂ ಬಾ. (ಎನೆ

ಚನ್ದ್ರ. ಅಂತೆಸಗುವಂ. (ಎಂದಿರ್ವರುಂ ಬಂದರ್.)

ವಿದೂ. ಎಲೆ ಜೀಯಾ, ಇದೇನೀಚಿತ್ರಪಟದೊಳವಳ್ಕಂಬನಿದುಂಬಿಯಿರ್ಪಳಂತೆ ತೋರ್ಪಳ್.

ಸಾರ. ಎಲೆ ಕೆಳದಿ, ಇಲ್ಲಿ ಕುಚೇಲನ ನುಡಿ ಕೇಳಿಸುತ್ತಿದೆ. ಅದಱಿಂದಿಲ್ಲಿ ಮಹಾರಾಯನುಮಿರವೇೞ್ಪುದು. ಆದೊಡಾವುಮೀಬಾೞೆಯ

ಪ್ರೊದಱೊಳ್ ಮಱೆಗೊಂಡು ನೋಡುವಂ. (ಎಂದು ನೋಡುತ್ತಿರ್ಪನಂ)

ಚನ್ದ್ರ. ಎಲೆ ಸಖ, ನಿನಗೆ ದೈವಾನುಕೂಲದಿಂ ಲೇಸೊದವಿರ್ಪುದು. ಅದೆಂತೆನೆ:— ಇದೆ ನಿನ್ನ ಮನದಿನಿಯಂ ನಿನ್ನನೆ ಚಿತ್ರದೊಳ್ನೋಡುತ್ತೆ ಬಣ್ಣಿಸುತ್ತಿರ್ಪಂ.

ಸಾರ. (ನಸುನಾಣ್ಚುತೆ) ಎಲೆ ಕೆಳದಿ, ಇದೇನೆನ್ನ ನಾಳಗೊಂಡಿಱಿಕೆಗೆಯ್ವೆ!

ವಿದೂ. (ವಾಸುದೇವನಂ ಕೈಸೋಂಕಿನಿಂದೆಚ್ಚರಿಸಿ) ಎಲೆ ಜೀಯಾ, ಇದಲ್ತೆ ಆಂ ಬೆಸಗೊಳುತಿರ್ಪೆಂ; ಇವಳೇತರ್ಕೆ ಕಣ್ಬನಿದುಂಬಿದಂತೆ ಚಿತ್ರಪಟದಲ್ಲಿ ಕಾಣಿಸುತ್ತಿರ್ಪಳ್? ಎಂದು.

ವಾಸು. ಎಲೆ ಕುಚೇಲನೆ, ಆಗಳ್ಕೇಳ್ದಾವದ್ಯದಿಂದಮೇ ಇದೆಲ್ಲಂ ತಿಳಿದಿರ್ಪುದೈಸೆ.

ಚನ್ದ್ರ. (ನಸುನಗುತ್ತೆ) ಆಯ್ತಲ್ತೆ! ಸಾರಿಗೆ ಮೇಧಾವಿನಿ ತನ್ನ ಮೇಧಾವಿತನಮಂ ತೋಱಿತಲಾ.

ವಿದೂ. ಎಲೆ ಜೀಯಾ, ಇವಳೇಂ ನಿನ್ನ ಕಣ್ಗಳ್ಗೆ ಸೊಗಂಗೆಯ್ವಳೆ? (ಎನೆ

(ಆನುಡಿಯಂ ಸಾರಸ್ವತಿ ಕೇಳ್ದು ಬಿಗುರ್ತು ತನ್ನ ಮನದೊಳ್)

ಸಾರ. ಆದೊಡೀಮಹಾರಾಯನೇನಂ ನುಡಿವನೋ (ಎಂದು,) ಅನಿತಱೊಳೆ ಆನಱಿವುಬಾಷ್ಪಗಳೆಡೆಯೊಳ್ನಿಂದಿರ್ಪಂ.

ವಾಸು. ಎಲೆ ಕುಚೇಲನೆ, ಕಣ್ಗಳ್ಗೆ ಸೊಗಂಗೆಯ್ವಳೆಂಬುದನೊರೆವುದೆಂತು!

ವೃ॥ ಅಡಿಯಿಂ ನುಣ್ಮೊಡೆಗಂಬಕೇಱಿ ಪೊಱವಾಱೊಳ್ ಮಿಕ್ಕು ಸುತ್ತಾ
ಡಿಯೊ। ಳ್ನಡುವೊಳ್ಸಲ್ಕಿ ವಳಿತ್ರಯಂಗಳೆಡೆಯೊಳ್ ಪಟ್ಟೆಬ್ದರೋ
ಜಂಗಳಂ ॥ ಪಿಡಿದೀಯೆನ್ನಯ ದಿಟ್ಟಿ ಬಾಯುಱಿಕೆಗೊಂಡೀನಲ್ಲಳಾ

ಸ್ಯೇನ್ದುವಿಂ| ಬಿಡದುರ್ವ್ವಿಂಬಿಱುತಿರ್ಪ ನಲ್ಸೊಸದೆಯುನೀಂಟಲ್ಕೀಗಳಂ
ಗೈಸುಗುಂ ||೪೬

ಚನ್ದ್ರ: ಎಲೆ ಸಾರಸ್ವತಿ, ಕೇಳ್ದಿಯಾ ? (ಎನೆ

ಸಾರ. (ನಗುತ್ತೆ) ಎಲೆ ಕೆಳದಿ, ನೀಂ ತಾನೆ ಕೇಳ್. ನಿನ್ನ ಚಿತ್ರದ ಚಾ
ತುರ್ಯ್ಯಮಂ ಬಣ್ಣಿಸುತಿರ್ಕುಂ.

ವಾಸು. ಕಂ|| ಅರಲಿಚನಿವಳಾನನಹಿಮ |
ಕರನಂ ವಿರಚಿಸೆ ಬೞಿಕ್ಕೆ ಮುಗುಳಾದುದು ತಾ ||
ವರೆಯುದಱಿತ್ತುವ ಮೊನೆಯೊಳ್ |
ಪಿರಿದಾಯುಸಗೊಂಡು ಮುಂಡಿಸಿರ್ಕುಂ ಸತ್ಯಂ ||೪೭

ಕುಚೇಲಂ. (ಚಿತ್ರಪಟಮಂ ನೋಡಿ) ಎಲೆ ಜೀಯಾ, ಇಂತಪ್ಪ ಕನ್ನೆರನ್ನೆ
ಈಪಟದೊಳಿರ್ಪ ನಿನ್ನಾಕೃತಿಯುಂ ಕೂರ್ತು ನೋಡಿ ನಿನ್ನ ಸಮಾ
ಗಮಮನಿಂತು ಕಡುಮನ್ನಣೆಗೆಯ್ದಪಳ್. ಈನಿನ್ನೊಳ್ನನಗೆ ಕೊಱ
ತೆಯೇನುಂಟು ? ನೀನೇತರ್ಕೆ ನಿನ್ನ ಪಡಿವರಿಜು ನೋಡುತಿರ್ಪೆ?
(ಎನೆ

ವಾಸು. (ನೋಡಿ) ಎಲೆ ಕುಚೇಲನೆ, ಎನ್ನನಿವಳ್ತನ್ನಕೈಯಾರೆ ಬರೆದ
ಳೆಂಬುದಱಿಂದಮೆಯೆನ್ನೊಳ್ ಬಹುಮಾನಮುಪ್ಪುದು. ಅದಱಿಂದೆ
ನ್ನನೇತರ್ಕೆ ನೋಡದಿರ್ಪೆಂ?

(ಎಂದು ತನ್ನ ಪಡಿವರಿಜಂ ಚಿತ್ರದೊಳ್ನೋಡುತ್ತೆ)

ಎಲೆ ಕುಚೇಲನೆ, ನೋಡು ! ನೋಡು !

ಕಂ|| ಸುದತಿಯ ಕಣ್ಣೀರ್ವನಿ ಚಿ |
ತ್ರದೊಳಂತಲ್ಲಲ್ಲಿ ಸಿಡಿದು ನೆಲೆಗೊಂಡಿರ್ಕುಂ ||
ಚದುರೆಯ ಕೈಸೋಂಕಿನೊಳೆನ |
ಗೊದವಿದ ಸಿಂಗರದ ಸೇದೆವನಿಯವ್ರೊಲೀಗಳ್ ||೪೮

ಸಾರ. (ತನ್ನೊಳ್) ಎಲೆ ಮನವೆ, ಸ್ಥೈತಿರು ಸ್ಥೈತಿರು; ನಿನ್ನ ನಲ್ಗೆಯ್ಮೆ
ಯ್ಮೆಸಿರಿಯಿನಿತು ಪೆರ್ಕೞಕ್ಕಿರವಾದುದು.

ಚನ್ದ್ರ. ಎಲೆ ಸಾರಸ್ವತಿ, ನೀನೊರ್ವಳೆ ಜಗದೊಳತಿಶಯಂಬಡೆದಿರ್ಪೆ;
ಅದಱಿಂ ಮಾರಾಯಂ ಮೊದಲಾಗಿ ಇಂತು ಪೊಗೞುತ್ತಿರ್ಕುಂ.

ವಿದೂ. ಎಲೆ ಜೀಯಾ, ಇದೆಕೊಳ್, ಇತ್ತಲಿದೆ ಬೀಱೊಂದು, ಸರಸ
ಮಾದ ತಾವರೆಯೆಲೆಯಂ ಪರಪಿದ ಪಾಸಿಕೆ; ಇದಾನಾರಿಯ ವಿರಹ
ವೇದನೆಗೆ ಸೂಚಕವಾಗಿರ್ಪುದು. (ಎನೆ

ವಾಸು. ಎಲೆ ಕುಚೇಲನೆ, ನೀಂ ಚೆನ್ನಾಗಿ ಕಂಡೆ, ಅದೆಂತಪ್ಪುದಲ್ತೆ:—

ವೃ॥ ಘನವಕ್ಷೋಜನಿತಂಬಸಂಘಟನದಿಂ ಕಂದಿರ್ಕುಮೆತ್ತಾಣದೊಳ್।
ತನುಮಧ್ಯಂ ನಸುಸೋಂಕದಚ್ಚವಸುರಿಂ ಬೆರ್ಚಿರ್ಕುಮೆತ್ತಾಣ
ದೊಳ್॥ ತೊನೆದೀಡಾಡುವ ತೋಳ್ಗಳಂ ಕೆದಱುಗೊಂಡಿರ್ಪಬ್ಜಿನೀ
ಪತ್ರದಿಂ। ದನುವೆತ್ತೀಶಯನಂ ವಧೂವಿರಹತಾಪೋದ್ರೇಕಮಂ
ಸೂಚಿಕ್ಕುಂ ॥೪೯　　ಮತ್ತಂ,

ವೃ॥ ತರುಣಿಯುರದೊಳಾಗಳ್ಪತ್ತುಗೊಂಡಿರ್ದ ಪೆದಾ।
ವರೆಯೆಲೆಯಿದು ತನ್ನೊಳ್ತೆತ್ತ ವೃತ್ತಾಂಕದಿಂ ತ॥
ದ್ಗುರುಕುಚಪರಿಣಾಹಂದೋಱಿಪ್ಪೊಂದಂದದಿಂ ಬಿ।
ತ್ತರಿಕುಮವಳ ತಾಪೋದ್ರೇಕಮಂ ನೋಡೆಯೀಗಳ್॥೫೦

ವಿದೂ. (ತಾವರೆಗೆಬಿಸಿನಿಂದೊಡರ್ಚಿದ ಹಾರಮಲ್ಲಿರೆಯದಂ ಕೊಂಡು)
ಎಲೆ ಜೀಯಾ, ಇದಲ್ತೆ, ಕೋಮಳಮಾಗಿಯಾಲಲನೆಯ ಪೆರ್ಮೊ
ಲೆಯ ಬಿಣ್ಪಿನಿಂ ಕಂದಿಪ್ಪುದೀಮೃಣಾಳಹಾರಮಂ ನೋಡಾ.

ವಾಸು. (ಕೈಯೊಳದಂ ಕೊಂಡು ನೋಡಿ) ಎಲೆ ಬಿಸಜಹಾರಮೆ, ನೀಂ
ಜಡಪ್ರಕೃತಿಯಲ್ತೆ. ಅದೆಂತೆನೆ:—

ಕಂ॥ ಮಡದಿಯ ಪೆರ್ಮೊಲೆಯೆಡೆಯಿಂ ।
ಸಡಿಲ್ದನೆಂದೇಕೆ ಕಂದಿದಪೆ ಪೇೞ್ನಿನ್ನ ॥
ಲ್ಲಿಡಿದಿರ್ಪ ಸೆಣ್ಬೊಳೆಯುಮ ।
ಲ್ಲಿಡಿಯದು ನಿನಗೆಂತು ತಾಣಮಾಯೆಡೆಯಕ್ಕುಂ ? ॥೫೧

ಚನ್ದ್ರ. (ತನ್ನ ಮನದೊಳ್) ಅಕಟಕಟಾ! ಈಮಾರಾಯಂ ಪೆರ್ಗಳಸಿದಬ್ಬಱಿಂ ಕಿರ್ಕಿಱಿದ ಚಿತ್ತಂಗೊಂಡು ಅಸದೃಶವಾಗಿ ನುಡಿಯುತ್ತಿರ್ದಂ. ಅದಱಿಂದಿನ್ನುಪೇಕ್ಷೆಗೆಯ್ವುದುಚಿತಮಲ್ತು.
(ಪ್ರಕಾಶವಾಗಿ) ಸಾರಸ್ವತಿ, ನೀನಾವಕಜ್ಜಮನೆಳಸಿ ಬಂದೆ, ಆಕಜ್ಜಮಿದಿರೊಳೆ ಇರ್ಪುದು.

ಸಾರ. (ಇನಿಸು ಮುಳಿಸುಗೊಂಡು) ಎಲೆ ಚಂದ್ರಲೇಖೆ, ಆನಾವಕಜ್ಜಮನೆಳಸಿ ಬಂದೆಂ ?

ಚನ್ದ್ರ. (ನಸುನಗುತೆ) ಎಲೆ ಸಾರಸ್ವತಿ, ನಿನಗೆ ಬಱುಸಂದೆಯಮೇತರ್ಕೆ ? ನೀಂ ಚಿತ್ರಪಟಕ್ಕೆ ಬಂದೆಯಲ್ತೆ. ಅದಱಿಂದಿದಂ ಕೈಕೊಳ್.

ಸಾರ. (ಕನಲ್ದು) ಎಲೆ ಚಂದ್ರಲೇಖೆ, ನಿನ್ನ ಕವಡುನುಡಿಗಳಿಂದೆನ್ನಂ ಕರಡುಗೊಳಿಸುತಿರ್ಪೆ. ಅದಱಿನಾನಿಲ್ಲಿಂದಂ ಪೋಪೆಂ.
(ಎಂದೆರಡಡಿಯನಿಡುತಿರ್ಪನಂ)

ಚನ್ದ್ರ. (ಸಾರಸ್ವತೆಯಂ ಕೈವಿಡಿದು ನಿಲಿಸಿ) ಎಲೆ ಮುನಿಸುಗಾತಿ, ನೀನಿಲ್ಲಿನಿಸು ಪೊೞ್ತು ನಿಂದಿರ್. ಅನಿತಱೊಳಾನೀಕದಳೀಗೃಹದಿಂ ಚಿತ್ರಪಟಮಂ ತರ್ಪೆಂ. (ಎಂದು ಕದಳೀಗೃಹಮಂ ಪೊಕ್ಕಳ್.)

ವಿದೂ. (ಅವಳಂ ಕಂಡು ಕದುಬುಗೊಂಡು) ಎಲೆ ರಾಯಾ, ಈಚಿತ್ರಪಟಮಂ ಮಱಸು, ಮಱಸು. ಇದಲ್ತೆ, ರುಕ್ಮಿಣೀದೇವಿಯೊಳಗವೆಣ್ಣೀಚಂದ್ರಲೇಖೆ ಸಾರ್ದಪಳ್.

ವಾಸು. ಅಂತಕ್ಕೆ. (ಎಂದು ಚಿತ್ರಪಟಮಂ ಸೆಱಂಗಿನೊಳ್ ಮುಚ್ಚಿದಂ)

ಚನ್ದ್ರ. (ವಾಸುದೇವನ ಸಮೀಪಮಂ ಸಾರ್ದು) ಎಲೆ ಮಹಾರಾಯನೆ ಜಯಿಸು ಜಯಿಸು! (ಎಂಬುದುಂ

ವಾಸು. ಎಲೆ ಚಂದ್ರಲೇಖೆ, ಆಮಿಲ್ಲಿರ್ಪುದಂ ನೀನೆಂತು ತಿಳಿದೆ?

ಚನ್ದ್ರ. ಎಲೆ ಮಹಾರಾಯನೆ, ನಿನ್ನ ಮಾತ್ರಮೆ ಅಲ್ತು; ಮತ್ತಂ ಚಿತ್ರಪಟವೃತ್ತಾಂತಮಂ ಮುಂಕೊಂಡು ಅನಿತುಮಂ ತಿಳಿದಿರ್ದೆಂ. ಅದಱಿಂದನಿತುಮನರಸಿಯರ್ಗೆ ಬಿನ್ನಪಂಗೆಯ್ವೆಂ.

ವಿದೂ. (ವಾಸುದೇವನೊಡನೆಕ್ಕಟಿಯೊಳ್) ಎಲೆ ಮಹಾರಾಯನೆ, ಇವಳ್ ಪೇೞ್ವುದನಿತುಂ ನಿಕ್ಕುವಮಪ್ಪುದು. ಇವಳ್ ಪ್ರಿಯಾಳಿ. ಅದಱಿಂದಿವಳ್ಗೇನಾನುಂ ಕೈಕೊಳಿಸಿ ಸಂತೈಸವೇೞ್ಪುದು. (ಎನೆ

ವಾಸು. ಎಲೆ ವಿದೂಷಕನೆ, ಚೆನ್ನಾಗಿ ನುಡಿದೈ.

(ಎಂದು ಚಂದ್ರಲೇಖೆಯುಂ ಕರೆದು, ಮುಡಿಯಂ ತಡವಿ ತನ್ನ ಕೊರಲೊಳಿರ್ದ ಮುತ್ತಿನ ಜವಳಿಸರಮಂ ತೆಗೆದವಳ್ಗೆ ಕೊಟ್ಟು) ಎಲೆ ಚಂದ್ರಲೇಖೆ, ಆಂ ಬಱಿಬಿನದಂಗೆಯ್ವುತಿರ್ದೆಂ. ಅದಱಿಂದೆ ನೀಂ ಬಱಿದೆ ಅರಸಿಯರ್ಗೆ ಕೋಪಮನಾಗಿಸವೇಡ. (ಎನೆ

ಚನ್ದ್ರ. (ಪೊಡಮಟ್ಟು ನಸುನಗುತ್ತೆ) ಎಲೆ ಮಹಾರಾಯನೆ, ನಿನಗೆ ಸಂದೆಯಂ ಬೇಡ. ದೇವರ ದಯೆಯಿರ್ಪುದಱಿಂದಾಂ ಬಿನದದಿಂದೆರಡು ನುಡಿಗಳನಾಡಿದೆಂ. ಎನಗೇತರ್ಕೀ ಮುತ್ತಿನ ಜವಳಿಸರಮನೀವುದು? ಇದಱತ್ತಣಿಂದೆಯುಂ ಬೇಱೆ ದೇವರ ಪ್ರಸಾದಮೇ ಎನಗೆ ನಲ್ತೊಡವಕ್ಕುಂ. ಎನ್ನನೇಕೆ ಸಂತೈಪುದು? ಮತ್ತೇನೆನೆ, ಎನ್ನ ಸಖಿ ತಾಂ ತನ್ನನೇತರ್ಕೀ ಪಟದೊಳ್ ಬರೆದೆಯೆಂದು ಮುಳಿಸುಗೊಂಡು ಈಕದಳೀಗೃಹದ ಸನಿಯದೊಳಿರ್ದಳ್. ಅವಳಂ ದೇವರೇ ಚಿತ್ತೈಸಿ ಸಂತೈಸವೇೞ್ಪುದು. (ಎನೆ

ವಾಸು. ಅವಳೆಲ್ಲಿರ್ದಳೆಲ್ಲಿರ್ದಳ್? ತೋಱು ತೋಱು.

(ಎಂದು ಗಳ್ಕನೆೞ್ದು ನಿಲ್ವಿನಂ)

ವಿದೂ. (ಆ ಚಿತ್ರಪಟಮಂ ಕೈಯೊಳ್ಕೊಂಡು, ತನ್ನೊಳ್) ಇವನಾಂ ಕೈಸೋಲವಿಸಿರ್ದೆಂ, ಇದಱಿಂದೊಂದಾನುಮೊಂದು ವೇಳೆ ಏನಾನುಮೊಂದು ಕಜ್ಜಮಪ್ಪುದು.

ಚನ್ದ್ರ. ಎಲೆ ನಾರಾಯಣನೆ, ಇದೆಕೊಳದೆಕೊಳ್, ಇಲ್ಲಿರ್ದಳ್. (ಎನೆ

(ಅನಿಬರುಂ ಕದಳೀಗೃಹದಿಂ ಪೊಱಮಟ್ಟರ್)

ಸಾರ. (ಆಸೆಗೊಂಡು ವಾಸುದೇವನಂ ನೋಡಿ, ತನ್ನ ಮನದೊಳ್)
ಕಟಕಟಾ! ಈಗಳೀನಾರಾಯಣನಂ ನಿಟ್ಟಿಪುದುಂ, ತೊಡೆ ನಡುಕಂಗೊಂಡು ಒಂದಡಿಯನಾದೊಡಮಿಡಲೀಯದೇಗೆಯ್ವೆಂ! ಇನ್ನೇವೆಂ! (ಎನುತ್ತಿರೆ

ವಿದೂ. (ಸಾರಸ್ವತಿಯಂ ನೋಡಿ) ಕಟಕಟಾ! ಅಚ್ಚರಿಯಚ್ಚರಿ! ಈ ಪರಿಯಂದಮಾದ ರೂಪಮುಂ ಮನುಷ್ಯರೊಳೆಲ್ಲಿಯುಂ ಕಾಣಲಿಲ್ಲ. ಎಲೆ ಜೀಯಾ, ಆದೊಡಿವಳ ಸೃಜಿಸಿದ ನಾಲ್ಮೊಗಂಗಮಚ್ಚರಿಯಪ್ಪುದೆಂದಾಂ ತಿಳಿದೆಂ.

ವಾಸು. ಎಲೆ ಕುಚೇಲನೆ, ಎನ್ನ ಮನಕ್ಕಮಂತೆ ತೋಱುತಿರ್ಪುದು.

ವೃ॥ ಇಳೆಯೊಳ್ಪೆಂಡಿರ ತೊಂಡಿಲೊಳ್ಮಣಿಯನೀಚಂದ್ರಾಸ್ಯೆಯಂ ಸೃಷ್ಟಿಗೆ|ಯ್ದುಳಮಿಂ ನೋಡಿಯುರಲ್ಬಿ ಕಣ್ಗಳನಜಂ ತಾಂ ವಿಸ್ಮಯಂದಾಳ್ದಿಯುಂ ॥ ಗುಳಿಯುಂ ಮೂಗಿನ ಮೇಲಮರ್ಚೆ ತಲೆಯಂ ತೂಗುತ್ತೆ ಸಂತೋಷದಿಂ | ಭಳಿರೇ! ಪ್ರೂತು! ಮಝ್ಝಾಗೆ! ಭಾಪೆನುತೆ ನಾಲ್ಕಾಸ್ಯಂಗಳಿಂ ಬಣ್ಣಿಕುಂ॥೫೦

ಸಾರ. (ಚಂದ್ರಲೇಖೆಯಂ ಕೞುಂಬುತನದಿಂ ನೋಡಿ) ಎಲೆ ಚಂದ್ರಲೇಖೆ, ನೀನೀತೆಱದ ಚಿತ್ರಪಟಮಂ ತಂದೆ. (ಎನುತ್ತೆ ನಡೆಯುತಿರ್ದಳ್)

ವಾಸು. (ಆ ಸಾರಸ್ವತಿಯಂ ನೋಡಿ)

ವೃ॥ ಮುಳಿಸಿಂ ದಿಟ್ಟಿಯನೀಳ್ದವೈಯೆಲೆಗೆ ನೀನೆಂತಾನುಮಾದಿಟ್ಟತಂ।
ನಳವಿಂ ಸ್ನೇಹವೆ ನಾಂದು ಕೂರ್ವನಿನಿಸಾನುಂ ತಾಳದಿರ್ಕುಂ ತ್ವರಾ॥
ಕುಳಿಯಾಗೀ ಪರಿಯೋಡಿ ಪೋಪರೆ ಗುರುತ್ವಂದಾಳ್ದಿ ದೀಶ್ರೋಣಿಮಂ
ಡಳದುರ್ಬಂ ನೆಱೆ ನೋಡಿಯೆನ್ನ ಹೃದಯಂ ಕಟ್ಟುಬ್ಬಸಂದಾಳ್ದಗುಂ॥

ಚನ್ದ್ರ. ಎಲೆ ಮಾರಾಯನೆ, ಇವಳ್ ಕಡುಮುನಿಸುಗಾರ್ತಿ, ಇವಳಂ ಕೈವಿಡಿದು ನಿಲಿಸು.

ವಾಸು. (ಚೆನ್ನಾಗಿಯಾರಯ್ದು ನೋಡಿ) ಎಲೆ ಚಂದ್ರಲೇಖೆ, ನೀಂ ಸೊಲ್ಲಿಸಿದಂತಕ್ಕೆ.

(ಎಂದು ಸಾರಸ್ವತಿಯಂ ಕೈವಿಡಿದು ಸೋಂಕಿನ ಸೊಗಮಂ ತಾಳ್ದಿದಂ.)

ವಿದೂ. ಎಲೆ ಮಾರಾಯನೆ, ನೀನೀಗಳ್ಬೇಱೊಂದು ಪೊಸಸಿರಿಯಂ ಪಡೆದೈ.

ವಾಸು. ಎಲೆ ಕುಚೇಲನೆ, ನಿಕ್ಕುವಮಿದಂತಪ್ಪುದು. ಅದೆಂತೆನೆ:—

ಕಂ॥ ಸಿರಿಯಿವಳೇ ಸರಿಯಿವಳೇ।
ಕರತಳಮುಂ ಪಾರಿಜಾತಪಲ್ಲವಮಕ್ಕುಂ॥
ಪರಿಕಿಸೆಯುಂತಲ್ಲದೊಡೇ।
ಪರಿ ಪನಿಗುಮೆ ನೇದೆಯೆನಿಸುವಮರ್ಜನ ಪನಿಗಳ್॥೫೩

ಎಲೆಗೆ ನಲ್ಲಳೆ, ಸೈರಿಸು, ಈತೆಱದೊಳ್ ನಲ್ಗಳದಿಯೊಡನೆ ಕಡುಮುಳಿಸಂ ತಳೆವುದು ತಕ್ಕುದಲ್ತು.

ಚನ್ದ್ರ. ಎಲೆ ಸಾರಸ್ವತಿ, ನೀನೀಗಳ್ ಧನ್ಯೆಯಲ್ತೆ, ಆವ ನಿನ್ನನೀಮಾರಾಯಂ ಕೈವಿಡಿದೊಡಂಬಡಿಸಿ ಮುಳಿಸಂ ತಿಳಿಪುತಿರ್ದಂ.

ಸಾರ. (ಚಂದ್ರಲೇಖೆಯಂ ನೋಡಿ, ಪುರ್ಬುಗಳಿಂ ಜರ್ಬುತೆ.)

ಎಲೆ ಕೆಳದಿ, ಇನ್ನುಂ ನಿನ್ನ ಬಗೆಯಂ ಮಾಣೆಯಾ?

ವಿದೂ. ಎಲೆ ಮಾರಾಯನೆ, ಇದೆಕೊಳ್ ಪಟ್ಟದರಸಿ ರುಕ್ಮಿಣೀದೇವಿಯೆ

ಬಂದಪಳ್.

ವಾಸು. (ಬಿಗುರ್ಪುಗೊಂಡು ಕಡುಬಿನಿಂ ಸಾರಸ್ವತಿಯ ಕೈಯಂ ಬಿಟ್ಟಂ.)

ಸಾರ. ಎಲೆ ಚಂದ್ರಲೇಖೆ, ಈಗಳನ್ನೇವೆಂ?

ಚನ್ದ್ರ. ಇದೆ ಈಕದರ್ಳಿಯ ಪೊದಱು ಮಱೆಗೊಂಡು ಪೋಪೆಂ.

ಸಾರ. ಅಂತೆಕ್ಕೆ. (ಎಂದಿರ್ವರುಂ ತೆರಳ್ದರ್.)

ವಾಸು. (ಇರ್ಕೆಲದೊಳ್ನೋಡಿ) ಎಲೆ ಕುಚೇಲನೆ, ರುಕ್ಮಿಣೀದೇವಿಯೆತ್ತ ಬಂದಪಳ್?

ವಿದೂ. ಎಲೆ ಮಹಾರಾಯನೆ, ಕಡುಮುಳಿಸುಗೊಂಡಿರ್ಪುದಱುದಿವಳನೆ ರುಕ್ಮಿಣಿದೇವಿಯಾದಳೆಂದು ನುಡಿದೆಂ.

ವಾಸು. ಛಡಛಡ! ಎಲೆ ಮೂರ್ಖನೆ,

ಕಂ॥ ಸುಲಲಿತಗುಣದಿಂ ಮುಕ್ತಾ ।
ವಲಿಯಂತೆಪೊಲೆಸೆವ ಕಾಂತೆ ಭಾಗ್ಯದೆ ಕೈಯೊಳ್ ॥
ಸಲೆ ಸಿಲ್ಕಿದಳವಳಂ ನೀಂ ।
ತೊಲಗಿಸಿದೈ ಬಱೆದೆ ಕಂಠಕಮರದ ಮುನ್ನಂ ॥೫೫

(ಆಬಟಿಕ್ಕೆ ಸೌದಾಮಿನಿವೆರಸು ರುಕ್ಮಿಣೀದೇವಿ ಬಂದಳ್)

ದೇವಿ. ಎಲೆ ಸೌದಾಮಿನಿ, ರಾಯಂ ಪತಿಕರಿಸಿದ ನವಮಾಲಿಕೆ ಇನ್ನೆನಿತು ದೂರದೊಳಿರ್ಪುದು?

ಸೌದಾ. ಎಲೆ ದೇವಿ, ಇದೆಕೊಳ್, ಈಕದಳೀಗೃಹದ ಕಡೆಯೊಳ ಕಣ್ಗೊಳಿಪುದು. ಅದಱುದಲ್ಲಿಗೆ ಪೋಪೆಂ, ನಡೆ.

(ಎನುತ್ತಿರ್ವರುಂ ನಡೆತಂದರ್.)

ವಾಸು. ಇನ್ನಾವೆಡೆಯೊಳನಿಯುಳಂ ಕಾಣ್ಬೆಂ.

ಸೌದಾ. ಇದೆಕೊಳ್, ಮಹಾರಾಯಂ ನುಡಿವ ನುಡಿ ಕೇಳಿಸುತ್ತಿದೆ. ಅದಱಿಂ ನಿನ್ನ ಬರವಂ ಕಾಣುತ್ತೆ ನಿನ್ನ ವಿಷಯಮಪ್ಪಾಲಾಪವಂ

ಗೆಯ್ವುತಿರ್ಕುಂ, ಎಂದು ನಿಶ್ಚಯಮಾಗಿಯಾಂ ತಿಳಿದಪೆಂ ; ಅದಱಿಂದಾಮುಮಾಯೆಡೆಗೆ ಪೋಪಂ.

(ಎಂದಿರ್ವರುಂ ವಾಸುದೇವನ ಸಮೀಪಮಂ ಸಾರ್ದರ್)

ದೇವಿ. ಎಲೆ ಅರಸನೆ, ನಿನಗೆ ಲೇಸಕ್ಕೆ!

ವಾಸು. ( ಕುಚೇಲನಂ ನೋಡಿ ಎಕ್ಕಟಿಯೊಳ್ )

ಚಿತ್ರಪಟಮಂ ಮುಚ್ಚು ಮುಚ್ಚು. (ಎನೆ

(ವಿದೂಷಕಂ ಚಿತ್ರಪಟಮಂ ಕಾಂಕುಳೊಳಿಟ್ಟು ಉತ್ತರೀಯದಿಂ ಮುಚ್ಚಿದಂ)

ದೇವಿ. ಎಲೆ ಅರಸನೆ, ನಿನ್ನ ನವಮಾಲಿಕೆ ಪೂತುದು.

ವಾಸು. (ಅಚ್ಚರಿಗೊಂಡು) ಆಂ ಮುನ್ನಮೆ ಬಂದೊಡಂ ನೀಂ ಬರ್ಪುದು ತಡಮಾದುದಱಿಂ ನಿನ್ನೊಡವೆರಸು ನೋಡುವಮೆಂದಿನ್ನುಂ ನೋಡಲಿಲ್ಲ. ಆಮುಂ ನೋಡಲ್ಪೋಪಂ.

ದೇವಿ. ಎಲೆ ಆಣ್ಮನೆ, ನಿನ್ನ ಮೊಗದನುರಾಗದಿಂದಮೆ ಆನವಮಾಲಿಕೆ ಪೂತುದೆಂದಾಂ ತಿಳಿದೆಂ, ಆನಲ್ಲಿಗೇಕೆ ಬರ್ಪುದು, ತಿಱುಗಿ ಪೋಪೆಂ.

ವಿದೂ. ಎಲೆ ಮಾರಾಯನೆ, ಆದೊಡೆಮಗೆ ಗೆಲವಾದುದು.

(ಎಂದು ಕೈಯೆತ್ತಿ ಕುಣಿದಾಡುತ್ತೆ, ಕಾಂಕುಳಿಂ ಸಡಿಲ್ದು ನೆಲಕ್ಕೆ ಬಿೞ್ದ ಚಿತ್ರಪಟಮಂ ನೋಡಿ ಕಡುಬಿಸುರ್ದನಭಿನಯಿಸಿದಂ.)

ವಾಸು. (ಮುಳಿಗೊಂಡು ಬೆರಲ ಸನ್ನೆಯಿಂ ಚಿತ್ರಪಟಮಂ ತೋಱಿ ವಿದೂಷಕನಂ ಕೊನೆನೋಟದಿಂ ನೋಡಿದಂ)

ವಿದೂ. (ವಾಸುದೇವನೊಡನೆಕ್ಕಟಿಯೊಳ್) ಎಲೆ ಮಾರಾಯನೆ, ಎನ್ನೊಳ್ಮುಳಿಯಲ್ವೇಡ ; ಇದನಾಂ ತಪ್ಪಿಸಲ್ಬಲ್ಲೆಂ.

ಸೌದಾ. (ಚಿತ್ರಪಟಮಂ ಗಕ್ಕನೆ ಕೈಯೊಳ್ಕೊಂಡು) ಎಲೆ ರಾಣಿ, ನೋಡು ನೋಡು, ಇದಱೊಳೇನೋ ಬರೆದಿರ್ಪುದು.

ದೇವಿ. (ಪಟಮಂ ಕೈಯೊಳ್ಕೊಂಡು ನಿರವಿಸಿ, ಸೌದಾಮಿನಿಯೊಡನೆಕ್ಕಟಿಯೊಳ್)

ಎಲೆ ಸೌದಾಮಿನಿ, ತಿಳಿದೆಂ; ಇವಂ ಮಾರಾಯಂ; ಇದೆ ಇವಳ್ ಸಾರಸ್ವತಿ. ಇದೇನಚ್ಚರಿ!

ಸೌದಾ. ಎನಗಮಿಂತೆ ತೋರ್ಪುದು. (ಎನೆ

ದೇವಿ. (ಮುಳಿಸುಗೊಂಡು, ಪ್ರಕಾಶವಾಗಿ) ಎಲೆಯೊಱೆಯನೆ, ಇದೇನೀಚಿತ್ರದ ಪರಿ?

ವಾಸು. (ನಸುನಗೆಯಿಂ ತಳ್ನೋರ್ಟಂಗೊಂಡು ವಿದೂಷಕನೊಡನೆಕ್ಕಟಿಯೊಳ್) ಎಲೆ ಕುಚೇಲನೆ, ಇದರ್ಕೆಂತು ಪಡಿನುಡಿಗುಡುವೆಂ?

ವಿದೂ. ಎಲೆ ಜೀಯಾ, ನೀನಿದರ್ಕೆ ಚಿಂತಿಸಬೇಡ, ನೀನುಸಿರದಿರ್. ಆನೇ ಪಡಿನುಡಿವೆಂ, (ಪ್ರಕಾಶವಾಗಿ) ಎಲೆ ಮಾರಾಯತಿ, ತನ್ನಂ ತಾನೇ ಬರೆವುದರಿದೆಂದಾಂ ನುಡಿಯೆ, ರಾಯಂ ತನ್ನ ಪರಿಜಂ ತಾನೆ ಬರೆದಂ.

ದೇವಿ. ಇದು ಕುಚೇಲನ ಚದುರತನಂ. ಎಲೆಯಾಣ್ಮನೆ, ನಿನ್ನ ಪಡಿಪರಿಜನ ಸನಿಹದೊಳ್ಬರೆದಿರ್ದಳಾವಳವಳ್? ಇದರ್ಕೆ ಕುಚೇಲನ ಜಾಣ್ಮೆಯೆಂತಪ್ಪುದು?

ವಾಸು. (ತಳವೆಳಗಾಗುತ್ತೆ) ಎಲೆ ಅರಸಿ, ನೀಂ ಬೇಱೆಣಿಕೆಗೆಯ್ಯಲ್ವೇಡ. ಇದೊಂದು ಪೆಣ್ಣಂ ಇಚ್ಛೆಗೆ ಬಂದಂತೆ ಬರೆದೆಂ; ಮುನ್ನೆಲ್ಲಿಯುಂ ಕಂಡ ರೂಪಲ್ತು.

ವಿದೂ. ಎಲೆ ದೇವಿ, ಇದು ನಿಕ್ಕುವಂ. ಎನ್ನ ಜನ್ನದಾರದಾಣೆ, ಈ ಪರಿಯ ರೂಪಾತಿಶಯಮುಂಟಾದವಳಂ ಮತ್ತೊರ್ವಳಂ ಕಂಡುದಿಲ್ಲ.

ಸೌದಾ. (ಎಕ್ಕಟಿಯೊಳ್) ಎಲೆ ದೇವಿ, ಕುಟ್ಟ್ವೃಟು ಕೋಱೊವೊಡೊಂದಕ್ಕರಮಾಗಿ ತೋರ್ಪಂತೆ ಏನಾನುಮೊಂದಱನ್ರೋಲೊಂದಪ್ಪುದು; ಅದರ್ಕೆ ನೀಂ ಕನಲಲ್ವೇಡ.

ದೇವಿ. ಎಲೆ ಮರುಳೆ, ಇವಂ ಕುಚೇಲನೆನ್ನೈಸೆ, ಇವನ ಕೊಂಕುನುಡಿಯ ಬಿಂಕಂ ನಿನಗೆ ತಿಳಿವುದೇ?

(ಪ್ರಕಾಶವಾಗಿ, ವಾಸುದೇವನಂ ನೋಡಿ)

ಎಲೆ ಅರಸನೆ, ಈಚಿತ್ರದ ಪರಿಯಂ ನಿಟ್ಟಿಸಿ ಎನಗೆ ತಲೆವೇನೆ ನೆಲೆಗೊಂಡುದು ; ಆನಿಲ್ಲಿಂದಂ ಪೋಪೆಂ. (ಎಂದು ತಿಱುಗಿ ನಡೆದಳ್)

ವಾಸು. (ರುಕ್ಮಿಣೀದೇವಿಯ ಮುಂಜೆಱಗಂ ಪಿಡಿದು)

ವೃ॥ ಒಸೆ ನೀನೆಂಬೆನೆ ದೋಷವಿಲ್ಲದುದಕಂ ತಾನಕ್ಕುಮೆಂತೀ ವಚಂ ।
ಮಸಗಿಂನೊರ್ಮೆಯುಮಿಂತೊಡರ್ಚೆನೆನೆ ಎನ್ನೊಳ್ದೋಷಮೊಂ
ದುಣ್ಮುಗುಂ ॥ ಪೊಸತಪ್ಪೆನ್ನೊಳಗಿಲ್ಲಿನಿಪ್ಪ ಪರಿಯಂ ನೀಂ ಬಲ್ಲೆ
ಯಿಂತೊಂದಿದು । ಬ್ಬಸದೊಳ್ನೊನ್ನಡನೆಂತು ಸೊಲ್ಲಿಸುವೆನಿನ್ನೇ
ಗೆಯ್ವೆನೇಂ ಚಿಂತಿಪೆಂ ? ॥೫೬

ದೇವಿ. (ವಿನಯದಿಂ ಸೆಱಗಂ ಬಿಡಿಸಿಕೊಂಡು) ಎಲೆ ಯಾಣ್ಮನೆ, ಬೇಱೆನ್ನೊಳ್ಸಂದೆಯಂಗೆಯ್ಯಲ್ವೇಡ, ನಿಕ್ಕುವವಾಗಿ ತಲೆಬೇನೆ ನೆಲೆಗೊಂಡಿದೆ

(ಎನುತ್ತೆ ತೆರಳ್ದಳ್)

ವಿದೂ. ಎಲೆ ಜೀಯಾ, ಎಮಗೆ ಬಂದಪಮೃತ್ಯು ದೈವಾನುಕೂಲದಿಂ ತೊಲಗಿದುದು ; ಮುಳಿಸಿಲ್ಲದೆ ದೇವಿ ಸಂತಸದಿಂ ಪೋದಳ್.

ವಾಸು. ಫಡ! ಫಡ! ಎಲೆ ಮೂರ್ಖನೆ! ನೀಂ ಸಂತಸಂಬಡದಿರ್ ; ಅರಸಿ ತನ್ನ ಗರುವಿಕೆಯಿಂ ಮುಳಿಸಂ ಮಱಸಿದಳ್ , ಆಪರಿಯಂ ನೀಂ ತಿಳಿದುದಿಲ್ಲ; ಅಂತಲ್ತೆ :—

ವೃ॥ಬಿಗಿಪಿಂ ಗಂಟಿಡೆ ಪುಬ್ಬುಗಳ್ ಮಣಿದವಳ್ವಕ್ತ್ರಾಬ್ಜಮಂ ಕೊಂ
ಕಿನಿಂ। ನಗೆಯಂ ಚಾಱಿಸಿದಳ್ ಕರಂ ಕಠಿನವಾಕ್ಯಂದೋಱಿಸಳ್ ಮ
ತ್ತದಿ॥ ಟ್ಟಗಳೊಳ್ಕಣ್ಬನಿದುಂಬುವಳ್ ಕಡುಗಿ ನೋಡಳ್ಪಿಂಪಿ
ನೆನ್ನೋವಳೀ । ಪಗೆಯಂ ಪೊಣ್ಮಿಸಿ ಕೋಪಮಂ ವಿನಯಮಂ

ತಾಂ ಮಾಣಳೆಂತಾದೊಡಂ ॥೫೨

ಆನುಂ ರುಕ್ಮಿಣೀದೇವಿಯ ಸನಿಯುಮಂ ಸಾರ್ವೆಂ.

(ಎಂದಿಬರುಂ ತೆರಳ್ದರ್)

ಇದು ಎರಡನೆಯ ಅಂಕಂ

— ಮೂಱನೆಯ ಅಂಕಂ —

[ ಆಬಳಿಕ್ಕೆ ಮದಯಂತಿ ಸಾರ್ತಂದಳ್.]

ಮದ. (ಆಗಸಮಂನೋಡಿ) ಎಲೆ ದ್ವಾರವತಿಪಟ್ಟಣಮೆ! ರಾಯನ ಸನಿಯದೊಳ್ ಸೌದಾಮಿನಿಯುಂ ಕಂಡೆಯಾ? (ಕಿವಿಯನೋಸರಿಸಿ ಕೇಳಿ) "ಅವಳಾಗಳೇ ಬಂದು ಪೋದಳ್" ಎಂದು ನುಡಿದಪೆಯೊ? ಆದೊಡವಳನಾವೆಡೆಯೊಳ್ಕಾಣ್ಬೆಂ? (ಎನುತ್ತೆ, ಮುಂತೆ ನೋಡಿ) ಇದೆಕೊಳ್ ಸೌದಾಮಿನಿ ಯಿತ್ತಲೆ ಬಂದಪಳ್; ಅವಳ ಸನಿಯಕ್ಕೆ ಪೋಪೆಂ.

[ಆಬಳಿಕ್ಕೆ ಸೌದಾಮಿನಿ ಬಂದಳ್.]

ಸೌದಾ. (ತಾನೆ) ಭಳಿರೆ! ಮಂತ್ರಿಗಳರಸಾ! ಕುಚೇಲನೆ! ಭಾಪುರೆ! ಸಂಧಿವಿಗ್ರಹವ್ಯವಹಾರದಿಂದುದ್ಧವನಂ ಕಡೆಗಣಿಸಿದೈ.

ಮದ. (ಸನಿಯಮಂ ಸಾರ್ದ್ದನಸುನಗುತೆ) ಎಲೆ ಸೌದಾಮಿನಿ, ಅದೇನಂ ಕುಚೇಲನೆಸಗಿದಂ? ಏತಱಿಂದವನನಿಂತು ಕೊಂಡಾಡುವೆ? (ಎನೆ

ಸೌದಾ. ಎಲೆ ಮದಯಂತಿ ಇದಂ ನೀಂ ಬೆಸಗೊಳಲ್ಬೇಡ; ಈರಹಸ್ಯಮಂ ಕಾಪಿಡಲಱಿಯೆ. (ಎನೆ

ಮದ. (ತವಕಂಗೊಂಡು) ಎಲೆ ಸೌದಾಮಿನಿ, ದೇವಿಯರಡಿಯಾಣೆ, ಇದನಾಂ ಬಯಲ್ಗೆಯ್ವುದಿಲ್ಲ, ಇದಂ ಕೇಳಲಾಶೆಯೆನಗಿರ್ಕುಂ. (ಎನೆ

ಸೌದಾ. ಅಂತಾದೊಡೆ ಪೇಳ್ವೆಂ ಕೇಳ್. ಅಂ ರಾಯನ ಚಾಕಿಗೆಯಿಂ

ತಿಱುಗಿ ಬರ್ಪಾಗಳ್, ಚಿತ್ರಮಂಟಪದ ಬಾಗಿಲಲ್ಲಿ ಕುಚೇಲನುಂ ಚಂದ್ರಲೇಖೆಯುಮೊರ್ವರೊಳೊರ್ವರ್ ನುಡಿಗುಡುತಿರ್ದರ್.

ಮದ. ಅದೆಂತುಟೋ ?

ಸೌದಾ. ಅವರೊಳ್ ಕುಚೇಲನಿಂತು ನುಡಿದಂ. ಎಂತೆನೆ:— " ಎಲೆ ಚಂದ್ರಲೇಖೆ, ರಾಯಂಗೆ ಸಾರಸ್ವತಿಯಲ್ಲದೆಯಾಬೇನೆಗೆ ಕಾರಣಮಾವುದುಮಿಲ್ಲ ; ಅದರ್ಕೆ ಪಡಿಗಜ್ಜಮಂ ನೀಂ ಯೋಚಿಸಲ್ವೇಱ್ಪುದು."

ಮದ. ಅದರ್ಕೆ ಚಂದ್ರಲೇಖೆಯೇಂ ನುಡಿದಳ್ ?

ಸೌದಾ. ಅದರ್ಕೆ ಚಂದ್ರಲೇಖೆ " ಎಲೆ ಕುಚೇಲನೆ, ಈಗಳ್ಚಿತ್ರಪಟದ ವೃತ್ತಾಂತದಿಂ ಶಂಕಿತೆಯಾಗಿ ದೇವಿಯರಾಸಾರಸ್ವತಿಯಂ ರಾಯಂ ಕಾಣದಂತೆ ಕಾಪಿಡಲೆಂದೆನ್ನ ವಶಂಗೆಯ್ದು ತನ್ನ ತೊಡವುಗಳನೆನಗೊಲ್ದಿತ್ತಳ್ ; ಆತೊಡವುಗಳಂ ದೇವಿಯರ ವೇಷದಿಂ ಸಾರಸ್ವತಿಯಂ ಪಸದನಂಗೆಯ್ದು ಆನುಂ ಸೌದಾಮಿನಿಯ ವೇಷಮಂ ತಳೆದು ಈಸಂಜೆಮಬ್ಬಿನೊಳಾಮಿರ್ವರುಮಿಲ್ಲಿಗೆ ಬರ್ಪೆವು ; ನೀನುಮಾಸಮಯದೊಳಿಲ್ಲಿಯೇ ಕಾದಿರ್ ; ಆಬೞಿಕ್ಕೆ ಸಿಂಗರದೋಂಟದ ಜಾದಿವಳ್ಳಿಯ ಮಂಟಪದೊಳ್ ರಾಯಂಗಮಿವಳ್ಗಂ ಸಮಾಗಮಮನೊಡರ್ಚುವಂ." ಎಂದು ನುಡಿದಳ್.

ಮದ. ಎಲೆ ಚಂದ್ರಲೇಖೆ, ನೀಂ ದುರ್ಜನೆಯಲ್ತೆ ! ಅದಱಿಂ ನಿನ್ನೊಳಿನಿತು ನಂಬುಗೆ ನೇಹಂಗೊಂಡಿರ್ಪ ದೇವಿಯರನೀಪರಿ ವಂಚಿಸುವೆ !

ಸೌದಾ. ಎಲೆ ಮದಯಂತಿ, ನೀನೆಲ್ಲಿಗೆ ಪೋಗುತಿರ್ಪೆ ?

ಮದ. ಎಲೆ ಸೌದಾಮಿನಿ, " ರಾಯಂಗೀಪರಿಯೊಡಲೊಳಡಿದ ಬೇನೆಗೆ ಕಾರಣಮೇನೆಂದು ವಿಚಾರಿಸಿ ಕೊಂಡು ಬಾರೆಂದು ಸೌದಾಮಿನಿಯಂ

ಕಳುಹಿದೆಂ ; ಅವಳ್ಪೋಗಿ ನೀಡುಂ ಪೊೞ್ತಾದುದು ; ಅದೇಕೆ, ನೋಡು ಪೋಗು." ಎಂದು ದೇವಿಯರ್ ಕಳುಹಿದರ್ ; ಅದಱಿಂ ಬಂದೆಂ.

ಸೌದಾ. (ನಗುತ್ತೆ) ದೇವಿಯರಿನ್ನುಂ ಕವಡನರಿಯರ್ ; ಅದಱಿಂದಿಂತು ನಂಬುಗೆವೆತ್ತಿರ್ಪರ್; ರಾಯನೀವರಿ ಬೇನೆಯ ನೆವಂಗೊಂಡು ಪ್ರಾಗೋಲನಪ್ಪ್ಯಳಿಯುಂ ಮಱಸಿಕೊಂಡು ಜಂತದ ಚೌಕಿಯೊಳಿರ್ದಪಂ. ಆದೊಡೀವೃತ್ತಾಂತಮಂ ದೇವಿಯರ್ಗಱಿಪುವಂ.

ಮದ. ಅಂತಕ್ಕೆ. (ಎಂದಿರ್ವರುಂ ತೆರಳ್ದರ್)

—ಇದು ಪ್ರವೇಶಕಂ.—

---

[ಆಬಱಿಕ್ಕೆ ಕಾಮನ ಬೇನೆಗೊಂಡು ವಾಸುದೇವಂ ಬಂದಂ.]

ವಾಸು. (ನಿಡುಸುಯ್ದು)

ವೃ॥ ನನೆಗೋಲಗ್ಗಿಯ ತಾಪಮಂ ಹೃದಯಮೇ ನೀಂ ಸೈರಿಸಾ ಬೇಱ
ಧ। ಕಿನಿತುಂ ತಪ್ಪಿಪ ದಾಱಿಯಿಲ್ಲ ಬಱಿಯಿಂತೇಕಾಯಸಂಗೊಳ್ವೆ
ಯಾ॥ ಯಿನಿಯಳ್ಪಕ್ಕದೊಳಾಗಳೊಪ್ಪಿರೆಯುಮಾಂ ಗಾಂಪೇಱಿ
ಭಾವನ್ನದ। ಣ್ಪಿನವೋಲ್ತಣ್ಪಿಪ ತತ್ಕರಾಬ್ಜಮನೆ ನಿನ್ನೊಳ್ಪಾ
ರ್ಚ್ಚತಿಲ್ಲೀವೆ ನೀಂ ? ॥೫೪

ಅಕಟಾ ! ಇದೇನಚ್ಚರಿ !

ಕಂ॥ ಹೃದಯಂ ಸಾಜದೆ ಚಂಚಲ।
ಮಿದು ಗುಱಿಗೊಳಗಾಗದನಿಶಮೊರ್ವಂಗಂ ದಲ್॥
ಮದನಂ ತನ್ನನಿತುಂ ಬಾ।
ಣದೆ ತಪ್ಪದೆ ಸದೆಗುಮೀಗಳೆಂತೀಮನಮಂ ! ॥೫೫

ಮತ್ತಂ,

ವೃ॥ಮುನಿಸಿಂ ಲೆಕ್ಕಕೆ ಬಾರದಂತೆ ಮದನಾ ನೀನೆಚ್ಚ ಬಾಣಂಗಳಂ।
ಜನದೊಳ್ಪಂಚತೆಯಂ ನೆಗಲ್ಚಿ ಮಿಗೆ 'ಕಾಮಂಗೈದು ಕೋಲಂತವ॥
ಕೆನಿತೋ ಎನ್ನವೊಲಿರ್ಪವಂ ಗುಱಿ' ಯೆನುತ್ತಂ ಲೋಗರೊ
ಲ್ವಾಡುವೀ। ಯನುವಾತಂ ತಳಮೋಲೊಡರ್ಚದೆ ಗಡಾ! ನಿನ್ನಾರ್ಪ
ನೇಂ ಬಣ್ಣಿಪೆಂ ! ॥೬೦

ಆದೊಡೀಗಳೆನಗಾಂ ಚಿಂತಿಸೆಂ ; ಮತ್ತೀನೆನೆ, ಆಪರಿಯ ಕೋಪ ಮನೊಳಗೆ ಪ್ರದ್ಯುಂಗೊಳಿಸಿಕೊಂಡಿರ್ಪ ರುಕ್ಮಿಣೀದೇವಿಯ ಬಸದೊಳ್ ಬಿದ್ದು ಕೋಟಲೆಗೊಳ್ವಸಿಯಳೆಂತಪ್ಪಳೆಂದು ಚಿಂತಿಪೆಂ :—

ವೃ॥ತಿಳಿವರ್ ಸಬ್ಬಱುಮೆನ್ನನೆಂದು ಮೊಗಮಂ ನಾಣಿಂ ಕರಂ ಬಾಗುತುಂ।
ಬಳಸಿರ್ಪರ್ ನುಡಿದಾಡೆಯಾನುಡಿ ತನತ್ತಂದಳ್ಕನಿಂ ಸುಕ್ಕುತುಂ॥
ಕೆಳೆವೆಣ್ಗಳ್ನಗೆಪೋಱ್ ಚೆಕ್ಕಸವಡುತ್ತೀಪಾಂಗಿನಿಂದೀಗಳೊಂ।
ದಳವಿಂದೆನ್ನಿನಿಯಳ್ಬಗುರ್ತದೆಯೊಳಂತೇಂ ತಲ್ಲಳಂಗೊಳ್ವ
[ಳೋ ! ॥೬೧

ಆದೊಡವಳ ವೃತ್ತಾಂತವಂ ತಿಳಿದು ಬರಲ್ ಕಳುಹಿದ ಕುಚೇಲನೇಕಿಂತು ತಡಂಮಾಡಿದಂ ?

(ಅಬಱಿಕ್ಕೆ ಕುಚೇಲಂ ಬಂದಂ.)

ಕುಚೇ. (ಸಂತಸಂಗೊಂಡು) ಹಿಹಿ ! ! ಆದೊಡೀಮಾರಾಯಂಗೀಗಳಾನೊರೆದ ನುಡಿಯನಾಳಿಸಿ ಸಮನಿಸುವ ಸಂತಸಂ ಮುನ್ನೀದ್ವಾರಕಾ ಪತ್ತನಕ್ಕೆ ಪಟ್ಟಂಗಟ್ಟಿದಾಗಳುಮಿಲ್ಲೆಂದು ನಿಕ್ಕುವಂಗೆಯ್ವೆಂ.

(ಎಂದೆಣಿಕೆಗೆಯ್ಯುತ್ತೆ, ರಾಯನಂ ನೋಡಿ)

ಇದೆಕೊಳ್ ಮಾರಾಯನೆನ್ನ ಬರವನೇ ಪಾಱುತ್ತೀಯೆಡೆಗೆ ಪಡಿಮೊಗವಾಗಿಯೆನ್ನನೇ ನೋಡುತಿರ್ಕುಂ; ಅದಱಿಂ ಪೋಪೆಂ.

(ಎಂದು ವಾಸುದೇವನ ಸಮೀಪಮಂ ಸಾರ್ದು)

ಎಲೆ ಮಾರಾಯನೆ, ದೈವಾನುಕೂಲದಿಂದೊಸಗೆ ನಿನಗಕ್ಕುಂ; ಈಗಳ್ನೀನೆಳಸಿದ ಕಜ್ಜಮೆಲ್ಲಂ ಸಜ್ಜಾದುದು.

ವಾಸು. ಎಲೆ ಕುಚೇಲನೆ, ಏನೆನ್ನ ನಲ್ಲಳ್ಗೆ ಪದುಳಮೆ ?

ಕುಚೇ. ಗಳ್ಕನೆ ನೀನೇ ತಳ್ಕೈಸಿ ಕಾಣ್ಬೈ.

ವಾಸು. (ಸಂತಸದಿಂ ಪೆರ್ಚಳಿಸಿ) ಏಂ ಸಾರಸ್ವತಿಯ ಸೌಂದರ್ಯನಂ ಸಮನಿಕುಮೆ ?

ವಿದೂ. (ಗರ್ವದಿಂ) ನಿನಗೆ ಸುರಗುರುವಿನಱಿವನೞ್ಗೆಯ್ವನ್ನಮಾದಿಗಂ ಕೆಳೆಯನಾಗಿರೆ, ಅದೆಂತಾಗದಿರ್ಪುದು ?

ವಾಸು. ಅದಱಿಂದೆಲೆ ಕುಚೇಲನೆ, ನಿನ್ನ ನುಡಿಯೊಳನಿತುಂ ಸಂದೆಯಮಿಲ್ಲ, ಆದೊಡೆಂತಪ್ಪುದೆಂದು ಬೆಸಗೊಳಲೆಳಸುವೆಂ.

ಕುಚೇ. (ಎಕ್ಕಟಿಯುಂ ಕಿವಿಯೊಳಿಂತಿಂತೆಂದು ನಡೆದ ತೆಱನಂ ಬಣ್ಣಿಸಿದಂ.)

ವಾಸು. (ಆಲಿಸಿ) ಭಾಪು ! ಭಾಪು ! ಎಲೆ ಕುಚೇಲನೆ, ನಿನಗಿದು.

(ಎಂದು ತನ್ನ ಕೈಯೊಳಿರ್ದ ರನ್ನಗಡಗಮನೀಳ್ದು ಕುಚೇಲಂಗಿತ್ತಂ.)

ಕುಚೇ. (ಕಡಗಮಂ ಕೈಯೊಳ್ತೊಟ್ಟು ತನ್ನಂ ಕೊಂಡಾಡುತೆ)

ಎಲೆ ಮಾರಾಯನೆ, ಇದೆಕೊಳ್, ಪಲರನ್ನಂಗಳಂ ಕುಂದಣದೊಡನೆ ಪುದುಂಗೊಳಿಸಿ ರಯ್ಯಮಾದೀಕಡಗಮಂ ತೊಟ್ಟನ್ನಂದಮಂ ಮನೆಗೆಯ್ದಿ ಎನ್ನ ಮಡದಿಗೆ ತೋಱಿಸಿ ಬರ್ಪೆಂ.

ವಾಸು. ಎಲೆ ಕುಚೇಲನೆ, ಬೞಿಕ್ಕೆ ತೋಱಿಸುವೈ; ಈಗಳ್ಸಂಜೆಗೆನಿತು ಪೊೞ್ತಿರ್ಪುದೆಂದು ನಿರವಿಸು.

ವಿದೂ. (ನೋಡಿ) ಎಲೆ ಮಾರಾಯನೆ, ಇದೇಂ ನೀಂ ನೋಡಲಿಲ್ಲವೆ ? ಇದೆಕೊಳ್, ಈಗಳ್ಬಿಸುಗದಿರಂ ಬಹಳಾನುರಾಗಂಬಟ್ಟು ಸಂಜೆವೆಣ್ಣೊಳ್ಸಂಕೇತಂಗೊಂಡಂತೆವೊಲ್ ಪಡುವೆಟ್ಟನ ಗವಿಯನನುಸರಿ

ನುತಿರ್ಕುಂ.

ವಾಸು. (ನೋಡಿ) ಇದೆ ಪಗಲ್ಪರೆಪುದು ; ಅಂತ್ಯೆಸೆ! ಅದೆಂತೆನೆ :—

ವೃ॥ ಪುದಿದೊಂದೇಗಾಲಿಯುನ್ನಿೞರಥಕಿದು ಪಿರಿದುಂ ಬಟ್ಟೆಯುಂ ಸು
ತ್ತಿ ಸಾರ್ದರ್ | ತ್ತದಱಂ ನಾಳಂಗೆ ಸೊಂಪಿಂದಳವಡದೆನುತಾದಿತ್ಯ
ನೀಚಿಂತೆಯಿಂ ಬೇ॥ ಗದೆ ಬೋೞ್ಕುಸುತ್ತೆ ತನ್ನೊಳ್ಪುದುಗಿದ ಕರ
ಸಂದೋಹದಿಂ ನೇಮಿಯುಂ ಕಂ | ಡಿಪಿರೊಳ್ದಕ್ಬಕ್ರಮಂ ಪಶ್ಚಿ
ಮಗಿರಿಶಿಖರಕ್ಕೆೞ್ದನೆಂಬಂತೆ ತೋರ್ಕುಂ ॥೬೦

ಮತ್ತಂ, ವೃ॥ ನಲಪಿಂದಮಾ ಮುಗುಱ್ ಬಂದೆಲೆ ಪದ್ಮಿನೀ ನೀಂ |
ಮಲಗಿರ್ದೊಡಂ ಭರಪಿನೆೞ್ಬುಮೆಂ ದಲೇಕಿಂ ॥
ತಲೆಗೊಳ್ವೆ ನಂಬಿರೆನುತಸ್ತಮಹೀಧ್ರದುಕ್ಕಿಂ |
ತಲೆಮುಟ್ಟೆ ಸೂರುಳಸುವಂತಿನನೊಪ್ಪಿ ತೋರ್ಕುಂ ॥೬೧

ಆದೊಡಾಮುಮಾಮಾಧವೀಲತೆಯ ಪೊದಱ ಮಣ್ಟಪಮಂ ಪೊ
ಕ್ಕನಿಯುಳ ಬರವಂ ಪಾರುತಿರ್ಪಂ

ವಿದೂ. ಎಲೆ ಮಾರಾಯನೆ, ಚೆನ್ನಾಗಿ ಸೊಲ್ಲಿಸಿದ್ಯೆ.

(ಎನುತ್ತಿರ್ವರುಮೆೞ್ದು ನಡೆಯುತ್ತಿರ್ದರ್.)

ವಿದೂ. ಎಲೆ ಮಾರಾಯನೆ, ಇದೆಕೊಳ್ ಪಟ್ಟಗೆಸೆಱೊಳಟ್ಟೞಿಸಿ ಪಟ್ಟ
ಪೊಱಮಟ್ಟ ಕಾಟ್ಟಂಡಿಗೋಣಂಗಳ ತಟ್ಟನಂತೆ ಕಱದಾಗಿಡಿಕಿಱದ
ಕರ್ಗಟ್ಟಲೆಯ ಮೊತ್ತಮಿಾಸಿಂಗರದೋಂಟದ ಬರಿಗಳಂ ತುಱಗಿ
ನುತ್ತೆ ಮೊತ್ತಮೊದಲ್ ಬರ್ಲದೆಱಪುನ ದೆಸೆಯುಂ ಮುಸುಂಕು
ತಿದೆ.

ವಾಸು. ( ಸುತ್ತಲುಂ ನೋಡಿ) ಅಂತ್ಯೆಸೆ !

ವೃ॥ ಇದೆಕೊಳ್ ತೊಡಿಯ ಕಂಠನಾಳರುಚಿಯುಂ ಕಿೞ್ಗಿಯ್ವ ಪೆಮ್ರ್

ಬರ್ಗ ತಾಂ | ಮೊದಲೊಳ್ಮೂಡಣ ದಿಕ್ಕನಾವರಿಸಿ ಮತ್ತೆಲ್ಲಾ ದಿಶಾ
ಚಕ್ರಮಂ ॥ ಪದಪಿಂ ತೀವುತೆ ಬೆಟ್ಟುತಾಱ್ಪೊಲನೊಕ್ಕೈಸು
ತ್ತೆ ಪೆಂಪೇಱೆ ಲೋ | ಕದ ನೋಟಂಗಳಡರ್ಪನಳ್ಗಿಸುತಮಿಂತೀ
ಮಬ್ಬಿನಿಂ ಪರ್ಬುಗುಂ ! ॥೬೪

ಆದೊಡೊಳಪೊಕ್ಕು ನಡೆವಂ. (ಎನೆ

ವಿದೂ. ಎಲೆ ಮಹಾರಾಯನೆ, ಇತ್ತಿತ್ತ ಚಿತ್ತೈಸಾ.

(ಎನುತ್ತಿರ್ವರುಂ ನಡೆಯುತ್ತಿರ್ದರ್.)

ವಿದೂ. ಎಲೆ ಮಹಾರಾಯನೆ, ಇದೇಕೊಳ್ತುಱುಗಿ ತಳರ್ತ ಮಱವಳ್ಳಿಗಳ ಗಡಣದಿಂದೊಟ್ಟುಗೂಡಿ ರಾಶಿಗೆಯ್ದ ಮಬ್ಬಿನಂತೆ ತೋರ್ಕುಮಿಾ ಯುಜ್ಜಾಣಂ; ಅದಱನಿಲ್ಲಿ ಬಟ್ಟೆಯುಂ ಕಾಣ್ಬುದೆಂತು ?

ವಾಸು. ನಡೆನಡೆ, ಅಂಧಕಾರಮಾದೊಡಮಿದು ತಿಳಿದ ತಾಣಮಲ್ತೆ !

ವೃ॥ ಇದೆ ಪಕುಳಾಳಿ ಮತ್ತಮಿದೆ ಪಾದರಿ ಸಂಪಗೆವಂತಿ ಸಿಂಧುವಾ |
ರದ ಗಡಣಂ ಬಱಿಕ್ಕೆ ಸುರಹೊನ್ನೆಗಳೊಳ್ಗೆಸೆನಿಪ್ಪ ಚಂದಮಂ ॥
ಪದೆದವಱೊಂದು ಸೂಸವಮನೀಕ್ಷಿಸೆ ಮುನ್ನಳವಿಂದೆ ಕಂಡ ವೃ |
ಕ್ಷದ ಕುಱುಪಿಂದವಿಾಸರಣಿ ತೀವಿದ ಮಬ್ಬಿನೊಳಂ ಪ್ರಕಾಶಿಕುಂ॥

ವಿದೂ. ಎಲೆ ಮಹಾರಾಯನೆ, ಇದೇಕೊಳ್ತೆಂಬಲರಿಂದುದಿರ್ದ ಪೂಗಳ ಸೂಸವದಿಂ ಪತ್ತುಂದೆಸೆಯುಂ ಮಗಮಗಿಸುವುದಱಿಂ, ಪಚ್ಚೆಗಲ್ಲ ಗಲಿಯಿಂದೆಮ್ಮ ಪಜ್ಜೆಗಳ್ಸೊಗಂಬಡುವುದಱಿಂದಮುಂ ಇದೆ ಆಮಾಧವೀಮಣ್ಟಪಮೆಂದು ತಿಳಿಯಲಾದುದು. ಆದೊಡೆ ನೀನೊಂದಿನಿಸು ಪೊೞ್ತು ಮಾತ್ರಮೆಯಿಲ್ಲಿ ಸ್ಥೈರಿಸು ; ದೇವಿಯರ ವೇಷಮಂ ತಾಳ್ದ ಸಾರಸ್ವತಿಯನಾಂ ಕರೆದೊಡಗೊಂಡು ಬರ್ಪೆಂ.

ವಾಸು. ಆದೊಡೆ ಬೇಗಬೇಗಮಕ್ಕೆ.

ವಿದೂ. ಎಲೆ ಮಾರಾಯನೆ, ನೀಂ ತವಿಸಬೇಡ, ಆಂ ಬೇಗದಿಂ ಬರ್ಪೆಂ.

(ಎಂದು ತೆರಳ್ದಂ.)

ಮಾಸು. ಆದೊಡಾನೀವಚ್ಚಗಲ್ಜಗಲಿಯ ಮೇಲಿನಿಯಳ ಬರವಂ ಪಾರುತಿರ್ಪೆಂ. (ಎಂದು ಕುಳ್ಳಿರ್ದು) ಅಕಟಕಟಾ! ಇನಿಯಳ ಬಗೆಗೆ ಬೆಗಡಂ ಪುಟ್ಟಿಸುವೆನಗೀಗಳೆನ್ನ ಸವೆಸೊಣ್ಣಳೆನಿತು ಪಕ್ಷಪಾತಂ; ಆವರಿಯಲ್ಕೆ :—

ವೃ॥ ಮೊಗದೊಳ್ನೇಹದ ನಾಂದ ದಿಟ್ಟಿಯನಿಡಳ್ನಿಶ್ಶಂಕೆಯಿಂದೊರ್ಮೆ
ಯುಂ । ಬಿಗಿದೊತ್ತಾಳ್ನಾಲೆಬಿಣ್ಪನಿಂದೆರ್ದೆಯ ಕಂಠಾಲಿಂಗನ
ಕ್ಕೈದಿಯುಂ ॥ ನೊಗಸಿಂದಂ ಪಿಡಿದೊಯ್ದೊಡಂ ಬಿಡುಬಿಡೆಂದೇ
ನೇಳ್ವಳಂತಾದೊಡಂ । ಮಿಗೆ ಸಂಕೇತಕೆ ತಟ್ಟು ಪೆಣ್ಣಕಟನಿತ್ತಾ
ನಂದಮಂ ಬೀಱುವಳ್ ॥೬೬

ಅದೇಂ ಕುಚೇಲಂ ಇನಿತುಂ ಪೊಱ್ತಾಗಿಯುಂ ಬಾರದಿರ್ಪಂ; ಅಲ್ಲದಿದೊರ್ಡೀವೃತ್ತಾಂತಮನರಸಿಯಱಿತಳೋ?

(ಆಬೞಿಕ್ಕೆ ಸೌದಾಮಿನಿಯೊಡಗೂಡಿ ರುಕ್ಮಿಣಿದೇವಿ ಬಂದಳ್.)

ದೇವಿ. ಎಲೆ ಸೌದಾಮಿನಿ, ಸಾರಸ್ವತಿ ಎನ್ನ ವೇಷಮಂ ತಾಳ್ದು ಅರಸನಿಂದಭಿಸರಿಕುಮೆಂಬೀವೃತ್ತಾಂತಮೇಂ ದಿಟಮೆ?

ಸೌದಾ. ಅದರ್ಕೆ ಸಂದೆಯಮೇಂ? ಅಂತಲ್ಲದಿದೊರ್ಡಾನೆಂತು ದೇವಿಯರ್ಗೆ ಬಿನ್ನವಿಸುವೆಂ? ಮತ್ತಂ, ಚಿತ್ರಾರದ ಬಾಗಿಲೊಳ್ ಕುಚೇಲನೇ ಪ್ರತ್ಯಕ್ಷವಾಗಿ ದಿಟಂಗೊಳಿಸುವಂ.

ದೇವಿ. ಆದೊಡಲ್ಲಿಗೆ ಪೋಪಂ. (ಎಂದಿರ್ವರುಂ ನಡೆತಂದರ್)

(ಆಬೞಿಕ್ಕೆ ಕರ್ಬಟ್ಟೆಯುಂ ಮುಸುಂಕಿ ಕುಚೇಲಂ ಬಂದಂ.)

ಕುಚೇ. (ಕಿವಿಯನೋಸರಿಸಿ) ಇದೆಕೊಳ್ ಚಿತ್ರಾರದ ಬಾಗಿಲೊಳ್ಪಜ್ಜೆದನಿ

ಕೇಳಿಸುತ್ತಿದೆ. ಅದುಂ ಸಾರಸ್ವತಿ ಸಾರ್ತಂದಳೆಂಬುತೆ ತಿಳಿಯು
ತ್ತಿದೆ.

ಸೌದಾ. ಎಲೆ ದೇವಿ, ಇದೆಕೊಳ್ಚಿತ್ರಶಾಲೆಯ ಬಾಗಿಲ್ ; ಇಲ್ಲಿ ಕುಚೇಲ
ನಂ ಸನ್ನೆಗೆಯ್ವಂ. (ಎನುತ್ತೆ ಚಿಟುಕೆನಿಕ್ಕಿದಳ್.)

ವಿದೂ. (ಎಚ್ಚು ಕಂಡಚ್ಚರಿಗೊಂಡು) ಎಲೆ ಚಂದ್ರಲೇಖೆ, ನೀಂ ಸೌದಾಮಿ
ನಿಯಂತಾದೆ ; ಸಾರಸ್ವತಿಯೆಲ್ಲಿ ?

ಸೌದಾ. (ಕೈಸನ್ನೆಯಿಂ ರುಕ್ಮಿಣೀದೇವಿಯಂ ತೋಱಿಸಿದಳ್.)

ವಿದೂ. (ನೋಡಿ ವಿಸ್ಮಯಂಗೊಂಡು) ಇವಳ್ ಮೊದಲ ರುಕ್ಮಿಣೀದೇವಿಯೆ
ಅಲ್ತೆ !

ದೇವಿ. (ಬಿಗುವುರ್ವೆತ್ತು ತನ್ನೊಳ್) ಇನ್ನೇವೆಂ ? ಇವನೆನ್ನಂ ತಿಳಿದಂ.

ವಿದೂ. (ಚಿಟುಕಿಡುತ್ತೆ,ಮೆಲ್ಲಮೆಲ್ಲನೆ) ಸಾರಸ್ವತಿ ಇತ್ತಿತ್ತ ಚಿತ್ತೈಸಾ.

ದೇವಿ. (ನಸುನಗುತ್ತೆ ಸೌದಾಮಿನಿಯ ಮೊಗಮಂ ನೋಡಿದಳ್.)

ಸೌದಾ. (ಮಱಿಮಱಿಯಾಗಿ ವಿದೂಷಕನಂ ಗಿರಲ್ಸನ್ನೆಯಿಂ ಮೂದಲಿಸುತ್ತೆ)
ಎಲೆ ಕೇಡಾಳಿಯೆ, ಈದುರುದುಂಬಿತನವುಂ ಮಱಿಯದಿರ್.

ವಿದೂ. ಬೇಗಬೇಗಂ ಬನ್ನಿಂ. (ಎಂದು ಮುಂದೆ ನಡೆಯುತ್ತಿರ್ದಂ.)

ವಾಸು. ಇದೇನಚ್ಚರಿ ! ಇನಿಯಳ ಸಮಾಗಮಂ ಸನಿಯಕ್ಕೆ ಸೇಱ
ದೊಡಮೆನ್ನ ಬಗೆ ತಲ್ಲಳಂಗೊಳ್ವುದು ; ಅಲ್ಲದಿರ್ದೊಡೀ
ಪರಿಯುಲ್ತೆ !

ಕಂ॥ ಪದೆದೀಕ್ಷಿಪಿನಂ ಮಱಿಗೊದ ।
ವಿದ ದಿವಸಂ ಪಿರಿದು ಸೆಗೆಯನೊಡರಿಪ ತೆಱದೊಳ್ ॥
ಮದನಂ ತಾಪಮನೆಂತೊದ ।
ವಿದ ಕಜ್ಜದೊಳೇಗುಮಂತು ಮೊದಲೊಳ್ಕವಿಸಂ ॥೭೭

ವಿದೂ. (ಕಿವಿಯನೊಸಸಿ ಕೇಳ್ದು) ಎಲೆ ಸಾರಸ್ವತಿ, ವಾಸುದೇವಂ ನಿನ್ನ ಬರವನೇ ಪಾರುತ್ತೆ ಅೞ್ತಗೊಂಡು, ಏನೇನನೋ ನುಡಿಯುತಿರ್ಕುಂ. ಆದೊಡೆ ನಿನ್ನ ಬರವಂ ಬಿನ್ನವಿಪೆಂ.

(ಎಂದು ಮುಂತೆಕ್ಕೆ ನಡೆದು)

ಎಲೆ ಮಹಾರಾಯನೆ, ಇದೆಕೊಳ್ಸಾರಸ್ವತಿ ಸಾರ್ತಂದಳ್.

ವಾಸು. (ಗಕ್ಕನೆೞ್ದು) ಅವಳೆಲ್ಲಿರ್ದಪಳ್ ?

ವಿದೂ. ಇದೆ ಇದೆ ಇವಳ್.

ವಾಸು. ಎಲೆ ಇನಿಯಳೆ ! ಸಾರಸ್ವತಿ !

(ಎನುತ್ತೆ, ದೇವಿಯಂ ಕೈವಿಡಿದು ಮೊಗಮಂ ನೆಗಪಿ ನೋಡುತ್ತೆ)

ವೃ॥ ಮೊಗಮಿದು ಚಂದಿರಂ ನಯನಮುತ್ಪಲಮಾ ಭುಜಯುಗ್ಮಮೋ
ಬಿಸಂ । ಬಗೆಯೆ ಕರದ್ವಯಂ ಕಮಲಮೂರುಯುಗಂ ಕದಳೀಪ್ರ
ಕಾಂಡಮಾ॥ ಬಗೆಯೊಳೆ ತಣ್ಪುಗೊಂಡವಯವಂಗಳನಪ್ಪಿ ಮನೋ
ಜತಾಪದಿಂ । ಮಿಗೆಯುಱುವೆನ್ನೊಡಲ್ಗೆ ಕಡುದಣ್ಪನೊಡರ್ಚಲೆ
ಚೆಲ್ಲಗಾರ್ತಿ ನೀಂ ॥೬೮

ದೇವಿ. (ಸೌದಾಮಿನಿಯೊಡನೆಕ್ಕಟಿಯೊಳ್) ಎಲೆ ಸೌದಾಮಿನಿ, ರಾಯನೀ ಪರಿಯೊಳ್ನುಡಿದುಂ ಮತ್ತಮೆನ್ನೊಳ್ ನಲ್ಮಾತನಾಡುತಿರ್ಪನೆಂಬುದಚ್ಚರಿಯಲ್ತೆ !

ಸೌದಾ. ಎಲೆ ದೇವಿ, ಇದಿಂತಪ್ಪುದು, ಅಲ್ಲದಿರ್ದೊಡೆ ಸಾಹಸಿಕರೇನನೆಸಗರ್ ?

ವಿದೂ. ಎಲೆಗೆ ಇನ್ನೆವರೆಗಂ, ನಿಚ್ಚಮುಂ ಮುಳಿಸುಗೊಂಡ ದೇವಿಯ ಕಡುಕೊರ್ಮಾತುಗಳಂ ನೊಂದು, ರಾಯನ ಕಿವಿಗಳುಬ್ಬೆಗಂಗೊಂಡಿರ್ಕುಂ, ಇನ್ನಾದೊಡಂ ಸಂತಸಂದಾಳ್ಗ, ಸೊಗಮಾತುಗಳನನುಗೊಳಿಸು.

ದೇವಿ. (ಕಡುಮುಳಿಸುವಡೆದು, ಎಕ್ಕಟಿಯೊಳ್) ಇಂತು ನುಡಿದೈಸೆ ಕುಚೇಲಂ ಕೆಳೆಯನಾದಂ.

ವಿದೂ. (ಮುಂತೆ ನೋಡಿ) ಎಲೆ ಮಾರಾಯನೆ, ಇದೆಕೊಳ್ಮುನಿಸುಗೊಂಡ ವನಿತೆಯ ಗಲ್ಲದವೊಲ್ ಕೆಂಪಡರ್ದು ಎಲ್ಲಮಂ ಪ್ರಕಾಶಂಗೆಯ್ಯುತ್ತೆ ತಣ್ಗದಿರನುದಯಕ್ಕೆ ಪಡಿವೋಗವಾದಂ ನೋಡಾ !

ವಾಸು. (ಅಚ್ಚುವಡುತ್ತೆ) ಎಲೆಗೆ ನಲ್ಲಳೆ ! ನೋಡು ನೋಡು !

ಕಂ|| ಉದಯದೊಳಮಿಂದುವಿನ ಸಿರಿ |
ಯೊದವಂ ನಿನ್ನಾಸ್ಯಮಪಹರಿಪಿನಮುದರ್ಕೆ ||
ತ್ತಿದ ಕರದಿಂ ಮೊರೆಯಿಡಲೇ |
ನೊದಗಿದನೆಂಬಂತೆ ತೋರ್ಕುಮುದಯಿಪ ಚಂದ್ರಂ ||೬೯

ಮತ್ತಂ, ಚಂದ್ರಂ ತಾನುದಯಿಪ್ಪುದಱಿಂ ತನ್ನ ಜಡತ್ವಮನೆ ನೆಗಳ್ಚಿದಂ. ಅದೆಂತೆನೆ :—

ವೃ|| ಪದಪಿಂ ತಾವರೆನೋಂಪನೇಂ ತವಿಸದೇ ? ಕಣ್ಗಿಂಪನೇಂ ಗೆಯ್ಯದೇ ? | ಮದನಂಗೇಂ ಕರಮೀಯದೇ ಗೆಲವನಾಲೋಕಂಗಳಿಂ ಪೆಂಪಿನಿಂ || ದುದಯಂಗೊಂಡಿರೆ ನಿನ್ನ ವಕ್ತ್ರಶಶಿ ಬೇಱೆಯಿಂದುವೇಂ ಕೊರ್ವುಗುಂ ? | ಸೊದೆಯಿಂ ಗರ್ವಮೆ? ನಿನ್ನ ಚೆಂದುಟಿಯೊಳೇ ನೀಂ ಪೇೞದೇನಿಲ್ಲಮೋ ? ||೭೦

(ಎಂದು ರುಕ್ಮಿಣೀದೇವಿಯ ಗಲ್ಲಮಂ ಪಿಡಿದು,
ನೆಗಪಿ ನೋಡಿ ಬಿಗುರ್ತು ಎಕ್ಕಟಿಯೊಳ್)

ಕೆಟ್ಟಿತು ಕೆಟ್ಟಿತು ಕಜ್ಜಂ! ಕಷ್ಟಮಾದುದು ! ಇದೇನಿವಳ್ದೇವಿಯಲ್ತೆ ! ಎಲೆ ಕುಚೇಲನೆ, ಇದೇಂ ? (ಎನುತ್ತೆ ಬೇಱಾಗಿ ನಿಂದಂ)

ವಿದೂ. (ಮೊಗಮಂ ಕಿಱಿದುಗೆಯ್ದು) ಎಮ್ಮ ಹರಣಮುೞಿವುದರ್ಕೆ ಸಂದೆಯಂ ಸಮನಿಸಿದುದು.

ವಾಸು. (ಕೈಯಂ ಮುಗಿದು) ಎಲೆ ಅರಸಿ, ಸೈರಿಸು ಸೈರಿಸು.

ದೇವಿ. (ವಾಸುದೇವಂಗೆ ಪಡಿಮೊಗಮಾಗಿ) ಎಲೆ ಎಱೆಯನೆ, ನೀನಿಂತು ನುಡಿಯಬೇಡ, ನಿನ್ನ ಬಾಯ್ದಱೆ ಪೆಱತೊಂದು ತೆಱನಾಗಿರ್ಕುಂ.

ವಿದೂ. (ತನ್ನೊಳೆ) ಈಯೆಡೆಯೊಳೆನ್ನೇಗೆಯ್ವೆಂ ? (ಎನುತ್ತಾಳೋಚಿಸಿ) ಆವೊಡಿಂತೆಸಗುವೆಂ ; ಎಲೆ ದೇವಿ, ನೀಂ ಮಹಾನುಭಾವೆಯಲ್ತೆ, ಈಮಾರಾಯನೊಳಿದೊಂದಪರಾಧಮಂ ಸೈರಿಸವೇೞ್ಪುದು.

ದೇವಿ. ಅಯ್ಯಾ ಕುಚೇಲನೇ, ಇದೆಕೊಳ್ ಮೊತ್ತಮೊದಲ್ ಸಮಾಗಮದೊಳೆಡಱನೊಡರಿಸಿದಾತ್ಮೈಸೆ ಈಮಾರಾಯಂಗೆ ತಪ್ಪನೆಸಗಿದೆಂ.

ವಾಸು. ಈಪರಿಯೊಳಧಿರಾಗಿ ತಪ್ಪಂ ಪ್ರೊತ್ತಾನೇನೆಂದಱಿಪ್ಪುವೆಂ ? ಆದೊಡೆ,

ವೃ॥ ಮುಡಿಯಿನಡಿಯ ಲಾಕ್ಷಾರಾಗಮಂ ಕೊರ್ಮೆಯಿಂದಾಂ।
ತೊಡೆದು ಬಿಡಿಸಲಾರ್ಪೆಂ ನಿನ್ನವಕ್ತ್ರೇಂದುವೊಳ್ಪತ್ ॥
ಗಡುಪಿನಿಡಿದ ಕೆಂಪಂ ನಿನ್ನ ಕಾರುಣ್ಯಮೆನ್ನೊಳ್ ।
ಮುಡಿಯಿಡಲದು ತಾನೇ ಮಾಣ್ಕುಂ ಮಾನಿನೀ ಡಲ್ ॥೩೧

(ಎಂಬುದುಂ

ದೇವಿ. ಸಾಕು ಸುಮ್ಮನಿರಿ. ಜನಂ ನಾಣ್ಚುಕೆಗೆಟ್ಟುದಲ್ತೆ. ಅದೆಂತೆನೆ:— ಮಾರಾಯನ ಬಗೆಯಿಂತಿರ್ಪುದೆಂಬ ನೆಲೆಯಂ ತಿಳಿಯದೆ ಮುಳಿಯಲಪ್ಪುದೆ ; ನೀನಿಂ ಸೊಗದೊಳಿರ್, ಆಂ ಪೋಪೆಂ.

(ಎಂದು ನಡೆಯುತ್ತಿರ್ದಳ್.)

ಸೌದಾ. ಎಲೆ ಮಾರಾಯಿತಿ, ಈಗಳೇಮಾರಾಯನನೊಡಂಬಡಿಸಾ ; ಈಪರಿಯೊಳ್ ದುಡುಕಿನಿಂ ಪೋದೊಡೆ ಅವಶ್ಯವಾಗಿ ಪಶ್ಚಾತ್ತಾಪಮಪ್ಪುದು.

ದೇವಿ. ಬಿಡು ಬಿಡು, ಎಲೆ ಮರುಳೆ, ಈಗಳೇನೊಡಂಬಡಿಸುವುದು ?

ಅದಱನುಸಿಕಂ ಪೋಪೆಂ.

ಸೌದಾ. ಆದೊಡೆ ನಿನ್ನ ಚಿತ್ತಂ. (ಎಂದಿರ್ವರುಂ ತೆರಳ್ದರ್)

ವಾಸು. ಎಲೆ ಅರಸಿತಿ, ಪ್ರಸನ್ನೆಯಾಗು, ಪ್ರಸನ್ನೆಯಾಗು.

ವಿದೂ. ಮಾಣ್ಮಾಣ್ ಈಗಳೆಲ್ಲಿರ್ಪಳರಸಿತಿ? ಆಗಳೆ ಕಡುದೂರಂ ಪೋದಳ್, ನೀಂ ಬಱಿದೆಯರಣ್ಯರೋದನಂಗೆಯ್ವೆ.

ವಾಸು. ಅಕಟಾ! ಅರಸಿತಿ ಪ್ರಸಾದಂಗೆಯ್ಯದೆ ಪೋದಳ್.

ವಿದೂ. ದೇವಿ ಹಸಾದಂಗೆಯ್ಯಲಿಲ್ಲವೆ? ಅದೆಂತೆನೆ:— ಒಡಲೊಳೞು ಪಡೆಯದೆ ಸೊಗದೊಳಿರ್ಪವೈಸೆ!

ವಾಸು. ಎಲೆ ಮೂರ್ಖನೆ, ಇದೇನೀಗಳೆನ್ನಂ ಪರಿಹಾಸಂಗೆಯ್ವೆ? ಈಯನರ್ಥಮನಿತುಂ ನಿನ್ನಿಂದಾದುದೈಸೆ! ಅದೆಂತೆನೆ:—

ವೃ॥ ಇನೆಯಳ್ನಲ್ಮೆಯೊಳೆನ್ನಗಂ ಪ್ರಣಯಸನ್ಮಾನಂಗಳಂ ಪೆಂಪುವೆ
ತ್ತನುವಿಂದೊರ್ಮೆಯುಮಿಲ್ಲದೀಯೆಡಱನೆನ್ನೊಳ್ಕೊಂಡು ತಾಂ ರೋ
ಸದಿಂ ॥ ತನುವಂ ಮಾಣಲೆ ಪೋಣ್ದಪಳ್ ದಿಟಮದಂತಲ್ತೀ ಕರಂ
ಬಲ್ಪಿನಿಂ। ಮನದೊಳ್ಬೇರ್ವರಿದಿರ್ಪ್ಪ ಸ್ಮೈರಿಸದಿನಿತ್ತುಂ ತಪ್ಪನೆಂತಾ
ದೊಡಂ ॥೨೦

ವಿದೂ. ಎಲೆ ಮಹಾರಾಯನೆ, ದೇವಿಯೆಂತಪ್ಪಳೋ ಅದನಾನಱಿಯೆಂ, ಸಾರಸ್ವತಿಗಾದೊಡೆ ಜೀವಿಪ್ಪುದಱಿವೆಂದೇ ತಿಳಿದಪೆಂ.

[ಅಬಳಿಕ್ಕೆ ಸಾರಸ್ವತಿ ಸಾರ್ತಂದಳ್]

ಸಾರ. (ಉದ್ವೆಗಂಗೊಂಡು) ಈದೇವಿಯ ವೇಷಮಂ ತಾಳ್ದು, ಆರುಂ ತಿಳಿಯದಂತೆ ಚಿತ್ರಾಗಾರದ ಶೌಕಿಯತ್ತಣಿಂ ಪೊಱಮಟ್ಟಂ; ಆದೊಡಿನ್ನೇಗೆಯ್ವೆಂ?

(ಎಂದು ಕಣ್ಬನಿಗಱೆಯುತ್ತೆ ಚಿಂತಿಸುತಿರ್ದಳ್)

ವಿದೂ. ಎಲೆ ಮಹಾರಾಯನೆ, ಇದೇಂ ನೀಂ ಬಱಿದೆ ಗಾಂಪನಂತಿರ್ಪೆ?

ಇದರ್ಕೆ ಪಡಿಗಟ್ಟುವುಮಂ ಚಿಂತಿಸು.

ವಾಸು. ಎಲೆ ವಿದೂಷಕನೆ, ಇದೆಕೊಳಾನುಮದನೆ ಚಿಂತಿಸುತಿರ್ದೆಂ.

ಸಾರ. ಈಗಳಾನುದ್ಬಂಧನಂಗೆಯ್ದೊಡಲಂ ನೀಗುವೆಂ ; ಅದೊಡೀಗಳ್ ವಿವಾಹಸಂಕೇತವೃತ್ತಾಂತಮಂ ದೇವಿ ತಿಳಿದು ಚಂದ್ರಲೇಖೆಯಂ ನೊಕ್ಕಳಿಕಿಕ್ಕಿದಳ್, ಅದಱಿಂದಾನೀಯುಸುಗೆಯ ಮಱದಡಿಯೊಳ್ ನ್ನಳಸಿದಂತೆಸಗುವೆಂ.

ವಾಸು. ಅರಸಿತಿಯ ಹಸಾದಮೊಂದಲ್ಲದೆ ಬೇಱೆ ತೆಱನಂ ಕಾಣೆಂ ; ಎಲೆ ಕುಚೇಲನೆ, ಆಮುಮಾಯೆಡೆಗೆ ಪೋಪಂ.

(ಎನುತ್ತಿರ್ಪ್ಪರುಮೆಬ್ದಡಿಯಿಡುತಿರ್ಪಿನಂ.)

ವಿದೂ. (ಕಿವಿಯನೋಸರಿಸಿ ಕೇಳ್ದು) ಎಲೆ ಮಾರಾಯನೆ, ಒಂದಿನಿಸು ನಿಲ್, ಇಲ್ಲಿ ಪಜ್ಜೆದನಿ ಕೇಳಿಸುತ್ತಿದೆ ; ಆದೊಡೆ ನೀನಡಿಗೆಱಗಿದುದರ್ಕೆ ಪ್ರಸನ್ನೆಯಾಗಿ ಮುಂ ತಾಂ ಮುಳಿಸಿನೆಸಗಿದೞಗಜ್ಜಕ್ಕೆ ಪಶ್ಚಾತ್ತಾಪಂಗೊಂಡು ಬರ್ಪ ದೇವಿಯಾಗವೇೞ್ಪುದು.

ವಾಸು. ಅರಸಿತಿ ಮಹಾನುಭಾವೆಯಲ್ತೆ ! ಒಂದಾನುಮೊಂದು ವೇಳೆ ಇಂತಾದೊಡಮಪ್ಪುದು ; ಆದೊಡೆ ಬೇಗದಿಂ ನಿರವಿಸು.

ವಿದೂ. ನೀಂ ಬೆಸಸಿದಂತಕ್ಕೆ. (ಎನುತ್ತೆ ನಡೆಯುತ್ತಿರ್ದಂ)

ಸಾರ. ಇದೆಕೊಳೀಮಾಧವಿಲತೆಯುಂ ನೇಣ್ಗೆಯ್ವೆಂ. (ಎಂದಂತುಗೆಯ್ದು) ಹಾ ತಂದೆಯೆ ! ಹಾ ತಾಯೆ ! ಇದೆಕೊಳಾನೀಗಳಶರಣೆಯಾಗಿ ಪೋಗುತಿರ್ಪೆಂ.

ವಿದೂ. (ನೋಡುತ್ತೆ) ಇವಳಾವಳ್ ?

(ಎಂದು ಬೆನ್ನಾಗಿ ನಿರವಿಸಿ) ಇದೇಂ ದೇವಿ ತಾಂ ಮಡಿಯಲುಜ್ಜುಗಿಸುತ್ತಿರ್ಪಳ್ ?

(ಎಂದು ಕಣ್ಬನಿದುಂಬಿ ಕೂಗಿಡುತ್ತೆ)

ಎಲೆ ಮಹಾರಾಯನೆ! ಸಲವು ಸಲವು! ಇದೆಕೊಳ್ದೇವಿ ತಾನೆ ಮಡಿ
ಯುತಿರ್ಪಳ್.

ವಾಸು. (ಬೆರ್ಚುತ್ತೆ, ಕೆದುಬುಗೊಂಡು, ಸುಯ್ಯುಮಂ ನೋಡುತ್ತೆ)
ಎಲೆ ಕುಚೇಲಾ, ಅವಳೆಲ್ಲಿಯೆಲ್ಲಿ ?

ವಿದೂ. ಎಲೆ ಮಹಾರಾಯನೆ, ಇದೆಕೊಳ್, ಇವಳೀಗಳ್.

ವಾಸು. (ಸುಯ್ಯುಮಂ ನೋಡುತ್ತೆ, ಕೊರಲ್ಗಾನಿಸಿದ ನೇಣಂ ಪಱಿದಿಟ್ಟು)
ಎಲೆ ನಲ್ಲಳೆ, ಅಲ್ಲದ ಕಜ್ಜಕುಜ್ಜುಗಂದಾಳ್ವೆ ?

ವೃ॥ ದಾವು ನಿನ್ನ ಕೊರಲೇಱಿತೆನ್ನಗಂ ।
ಜೀವಮೆನ್ನ ಕೊರಲೇಱಿತೆನ್ನಗಂ ॥
ಏವನೇವೆನಿನಿತೇಕೆ ಸಾಹಸಂ? ।
ಭಾವೆಯಿಲ್ಲಿ ಬಱಿದಿಂತು ಪ್ರಾಣ್ದಪ್ಪೈ ! ॥೭೩

ಸಾರ. (ಹರಿಸಂಗೊಂಡು, ತನ್ನೊಳ್) ಇದೆಕೊಳ್ಮಹಾರಾಯನುಂ ಕಂಡಾನೀಗ
ಳ್ ಕೃತಾರ್ಥೆಯಾದೆಂ ; ಇಂ ನೋಗದಿಂ ಹರಣಮಂ ಕಳೆವೆಂ.
(ಪ್ರಕಾಶವಾಗಿ) ಎಲೆ ಮಹಾರಾಯನೆ, ಈಜನಂ ಪರಾಧೀನಮೈಸೆ ;
ಎನಗಿಂತಪ್ಪ ಸಮಯಮೊಂದಿಂಗೆ ದೊರೆಕೊಳ್ವುದು.
(ಎನುತ್ತೆ ಮತ್ತೆ ನೇಣಂ ತನ್ನ ಕೊರಲ್ಗೆ ಸಾರ್ಚಿದಳ್)

ವಾಸು. (ಹರಿಸಂಗೊಂಡು) ಇದೆಕೊಳಿವಳೆನ್ನಿನಿಯಳ್ ಸಾರಸ್ವತಿ !
(ಎನುತ್ತೆ ನೆಳ್ನೇಣಂ ಸೆಳೆಯುತ್ತೆ)

ವೃ॥ ಎಲೆಲೆ ! ಬಱಿದಿನಿತ್ತೀಂ ಸಾಹಸಂ ಸಾಕು ಸಾಕಿಂ ।
ನಲಿವಡಿಸದೆ ಬೇಗಂ ಪಾಶಮಂ ಬೀಸಿಡೆನ್ನೀ ॥
ಚಲಿಸುವಸುಗಳಂ ನೀನೊಂದಿಸಲ್ಕೆನ್ನ ಕಂಠ ।
ಕ್ಕೊಲವಿನಮರಸಿಂ ದೋರ್ದಾಮಮಂ ಪ್ರಾಣಕಾಂತೇ ! ॥೭೪

(ಎನುತ್ತೆ ಸಾರಸ್ವತಿಯುನಪ್ಪುಱಿಂ ತಳ್ಕೈಸಿ)

ಎಲೆ ಕುಚೇಲಾ, ಕಟಕಟಾ! ಮುಗಿಲನುಱಿಪಿಱಿತೆರ್ದಮರ್ದನ
ಮೞೆಯುಲ್ತೆ !

ವಿದೂ. ಅಪ್ಪುದಪ್ಪುದು ; ಬೀಸಿದ ಬಿಱುಗಾಳಿಯವೊಲ್ ಭೀಷ್ಮಕ
ಸುತೆಯೆತ್ತಾನುಮಿವಳನೊತ್ತರಿಸದಿರ್ದಪಳೆ.

[ಆಬೞಿಕ್ಕೆ ಸೌದಾಮಿನಿಯೊಡನೆ ದೇವಿ ಪ್ರವೇಶಂಗೆಯ್ವಳ್]

ದೇವಿ. ಎಲೆ ಸೌದಾಮಿನಿ, ರಾಯನಾವಾಂಗಿನೊಳೆನ್ನಡಿಗೆಱಗಿದೊಡಂ
ಸತ್ತಿಗಿಕ್ಕದೆ ಕಡೆಗಣಿಸಿ ಬಂದುದಱಿಂ ಕಡುಕೋರ್ಕಜ್ಜಮಂ ಮಾಡಿ
ದೆನಲ್ತೆ ; ಅದಱಿನೀಗಳಾನೆ ಪೋಗಿ ಸೈಪಿಡುವೆಂ.

ಸೌದಾ. ಅಮ್ಮಾ ನಿನ್ನನುಱಿದೀಪರಿಯ ಮಾತಂ ನುಡಿವವರಾರೊಳರ್?
ಆದೊಡೆ ಅಂತಕ್ಕೆ, ಅವರ ಧುರುಳತನಮವರಲ್ಲಿಯೇ ನಿಲ್ಕೆ.

(ಎನುತ್ತಿರ್ವರುಂ ನಡೆಯುತ್ತಿರ್ದರ್)

ವಾಸು. ಎಲೆ ಮುಗುದೆ, ಇದೇನಿನ್ನುಂ ಮಧ್ಯಸ್ಥೆಯಾಗಿ ನೀನೆಮ್ಮ
ಬಯಕೆಯನೇಕೆ ಬಯಲ್ಗೆಯ್ವೆ ?

ಸೌದಾ. ಎಲೆ ದೇವಿ, ಇದೆಕೊಳ್ ರಾಯಂ ನುಡಿಯುತಿರ್ಕುಂ ; ಅದ
ಱಿಂ ನಿನ್ನನೇ ಸೈತಿಡಲ್ ಬರುತಿರ್ಕುಮೆಂದಾಂ ತಿಳಿದೆಂ.

ದೇವಿ. (ಹಸಂಗೊಂಡು) ಅಂತಾದೊಡಾನೆ ರಾಯಂ ತಿಳಿಯದಂತೆ ಪೆಱಗೆ
ಪೋಗಿ ತಳ್ಕೈಸುವೆಂ.

ವಿದೂ. ಎಲೆ ಸಾರಸ್ವತಿ, ನೀನೇಕೀಪರಿಯೊಳ್ಮೋನದೊಳಿರ್ಪೆ ?
ರಾಯನೊಡನೆ ಪಂಪಿನಿಂದಿಂಪಿನ ಮಾತುಗಳಂ ಸೊಲ್ಲಿಸಾ.

ದೇವಿ. (ಆಲಿಸಿ, ಅಬ್ಬಲ್ಪು) ಎಲೆ ಸೌದಾಮಿನಿ, ಇದೆಕೊಳೀಯೆಡೆಯೊಳೆ
ಸಾರಸ್ವತಿ ಇರ್ದಪಳ್ ; ಅದಱಿಂ ಮಱೆಗೊಂಡು ಈಸಂಬುಗೆಯ
ಕೆಳನುಂ ಕೇಳ್ವೆಂ. (ಎನುತ್ತಂತೆಸಗಿದಳ್)

ರಾಯಂ. ವೃ॥ ಮಡದಿ ಪೞಿವು ನಾಣಂ ಕಾವನಿಂ ಬೇಯುತಿರ್ಪೆ ।
ನ್ನೊಡಲನೊಲವಿನಿಂ ತಳ್ಕೈಸಿ ತಣ್ಪಿಟ್ಟು ನಿನ್ನೊ ॥
ಳ್ನುಡಿಸೊದೆಗೞ್ ಪನ್ನೀರಾಂತ ಕುಂಭಂಬೊಲೈಕಿ ।
ಲ್ವಿಡಿದ ಮೊಲೆಯಿನೆನ್ನೀವಕ್ಷಕಾಹ್ಲಾದಮಂ ಗೆಯ್ ॥೨೫

ಸಾರ. ಎಲೆ ಮಹಾರಾಯನೆ, ಈಪ್ರಸಿವಗೆಯ ದಾಕ್ಷಿಣ್ಯದಿನೇಂ ? ಬೞಿಕೆ ಯೇತಕ್ಕೆ ಹರಣದತ್ತಣಿಂದೆಯುಂ ಪ್ರಿಯೆಯಾದ ರುಕ್ಮಿಣಿದೇವಿಗೆ ತಪ್ಪನೆಸಗಿ ಅಪರಾಧಿಯೆನಿಸುವೆಯ್ ? (ಎನೆ

ವಾಸು. ಎಲೆಗೆ, ನೀಂ ಪ್ರಸಿನುಡಿಕಾರ್ತಿಯಲ್ತೆ ! ಅದೆಂತೆನೆ :—

ವೃ॥ ನಿಡುಸುಯ್ಯಿಂದವಿರ್ದೆಂ ಕುಚಂ ನಡುಗೆ ಮೌನಂದೋೞ್ ನಲ್ವಾ
ತುಮಂ । ನುಡಿದೆಂ ಕೋಪದೆ ಪ್ರಬುರ್ಗಳ್ಮಣಿಯೆ ತತ್ಪಾದಾಬ್ಜ
ದೊಳ್ಮೊಗ್ಗಿದೆಂ॥ ತೊಡರ್ದೀವಾಂಗಿನಿನಳ್ಕಿಯುಳಗಮನೇ ತೇರ್ಕೈ
ಸಿದೆಂ ದೇವಿಗಾಂ । ಮಡದೀ ಎನ್ನನುರಾಗಮೋ ಎನೆ ಅದೋರಂ
ತೊಂದುಗುಂ ನಿನ್ನೊಳ್ ॥೨೬

ರುಕ್ಮಿ. (ಮುಳಿಸುಗೊಂಡುಜವಣಿಯಿಂ ವಾಸುದೇವನ ಸನಿಯಮಂ ಸಾರ್ದು) ಎಲೆ ರಾಯಾ ! ತಪ್ಪಿದಿದಂತಪ್ಪುದು.

ವಾಸು. ಎಲೆ ಅರಸಿ, ನೀಂ ಬೞಿವೆಯೆನ್ನೊಳೇತಕ್ಕೆ ಕನಲ್ವೆ ? ನಿನ್ನ ಸೇವಚ್ಛ್ವದಿಂ ನೀನೆಂದೇ ತಿಳಿದು ಇಂತು ಮೋಸವ್ರೋಗಿ ಆನಿಲ್ಲಿಗೆ ಬಂದೆಂ, ಅಂತಾದೊಡಮಕ್ಕೆ, ಇದನೆಂತಾನುಂ ಸೈರಿಸಾ.

(ಎಂದು ಕೈಗಳಂ ಮುಗಿದಂ)

ದೇವಿ (ಕಡುಮುಳಿದು) ಎಲೆ ಎಱೆಯನೆ! ಬಿಡುಬಿಡೇನೀಯುಳಗುಂಗೆಯ್ವ ದುಗುಡಮನೇತಕಾರ್ಂಪೆ ?

ವಾಸು. (ಮನದೊಳ್) ಹಾ ಹಾ ! ಇದುಮಂ ಕೇಳ್ದಳ್ ; ಇನ್ನೇತೞ

ದೊಳಮರಸಿಯನೊಡಂಬಡಿಸುವ ದಾಱಿಯನಿತುಮಂ ಕಾಣೆಂ.

(ಎಂದಾಳೋಚಿಸಿ ತಲೆವಾಗಿ ನಿಂದಂ)

ಕುಚೇ. ಎಲೆ ದೇವಿ, ನೀಂ ಮಾಡಿಯುತಿರ್ಪೆಯೆಂದು ನಿನ್ನ ವೇಷಸಾದೃ
ಶ್ಯದಿಂದಱಿಯದೆ ನೀನೆಂದೇ ಬಗೆದಾಂ ನುಡಿದು, ವಾಸುದೇವನನಿಲ್ಲಿ
ಗೀಳ್ದು ತಂದೆಂ ; ಆದೊಡೆ ನೀನುಂ ನೋಡು.

(ಎನುತ್ತೆ ಪಾಶಮಂ ಕೈಯೊಳೆತ್ತಿ ತೋಱಿಸಿದಂ.)

ದೇವಿ. ಎಲೆ ಸೌದಾಮಿನಿ, ಈದಾವಿನಿಂದಮೀ ಈಯುಳಿವಾರ್ವನಂ
ಕಟ್ಟು ತಾರಾ. (ಎಂದೆರ್ದೆವಟ್ಟು ತರ್ಜಿಸಿ)
ಮತ್ತಂ, ಈಕಪಟಗನ್ನೆಯುಂ ಇವನ ಮುಂತೆ ನಡೆಯಿಸು.

ಸೌದಾ. ದೇವಿಯರಾಣತಿಗೆಯ್ದಂತಕ್ಕೆ.

(ಎನುತ್ತೆ ಕುಚೇಲನ ಕೊರಲ್ಗೆ ದಾವಂ ಬಿಗಿದು)

ಎಲೆ ಕೇಡಾಳಿಯೆ, ನಿನ್ನ ಕೇಡಿಗತನಕ್ಕೆ ತಕ್ಕ ಫಲವನನುಭವಿಸು ;
ಎಲೆ ಸಾರಸ್ವತಿ, ನೀನುಂ ಮುಂದೆ ನಡೆ.

ಸಾರ. (ತನ್ನೊಳ್) ಹಾ ಹಾ ! ಪುಣ್ಯಮಿಲ್ಲದೆನಗೆಯೆನ್ನಿಚ್ಚೆವಂದಂತೆ
ಮಡಿಯಲುಂ ತೆಱನಿಲ್ಲದೆ ಪೋದುದು.

ಕುಚೇ. (ದುಗುಡದಿಂ ವಾಸುದೇವನಂ ನೋಡಿ)
ಎಲೆ ನಾರಾಯಣನೆ, ನೀನಿನ್ನೆನ್ನಂ ಮಱಯದಿರ್ ; ಇವೆಕೊಳ್ಸೆಱಗೆ
ಸಿಲ್ಕಿ ಪೋದಪೆಂ. (ಎಂದಂ

(ದೇವಿ ಅವರ್ವರುಮನೆಳೆದುಕೊಂಡು ಸೌದಾಮಿನಿಯೊಡನೆ ತೆರಳ್ದಳ್)

ವಾಸು. (ದುಗುಡಗೊಂಡು) ಹಾ ಕಷ್ಟಂ ಕಷ್ಟಂ !

ವೃ॥ ಮುಳಿದು ಸುರುಳ್ದು ಗುಟಡಿದ ರಾಣಿಮೊಗಕ್ಕಱ ಚಿಂತೆಗೆಯ್ವೆ
ನೋ ! । ತಳವೆಳಗಾಗುವೆನ್ನಿನಿಯಳುಬ್ಬೆಗಕುಬ್ಬಸಗೊಂಡಟಿರ್ವೆ

ನೋ! ॥ ಕೆಳೆಯನ ಬಂಧಿಯೊಂದಿರವನಾಂ ಬಗೆದಿರ್ಪೆನೊ ಮೇಣಿನಿ
ತ್ತುಮಂ । ತಿಳಿವಿನಮಾವ ಪಾಂಗಿನೊಳಗೆನ್ನೆರ್ದೆಗಿನ್ನನುವಪ್ಪು
ದುತ್ಸವಂ ! ॥೨೨

(ಎನುತ್ತನಿಬರುಂ ತೆರಳ್ದರ್)

ಇದು ಮೂಱನೆಯ ಅಂಕಂ.

## — ನಾಲ್ಕನೆಯ ಅಂಕಂ —

[ಆಬಳಿಕ್ಕೆ ಚಂದ್ರಲೇಖೆ ಕಣ್ಬನಿಗಱೆಯುತ್ತೆ ಸಾರ್ತಂದಳ್]

ಚಂದ್ರ. ಹಾ ನಲ್ಗೆಳದಿ! ಹಾ ಸಿಗ್ಗಾಳ! ಹಾ ಉದಾರಶೀಲೆ! ಹಾ ಕೆಳದಿಯರೊಲ್ಮೆಗಾರ್ತಿ! ಸಾರಸ್ವತಿ! ಮಗುೞ್ ನಿನ್ನನಾವೆಡೆಯೊಳ್ ಕಾಣ್ಬೆಂ.

(ಎಂದಳುತ್ತೆ, ಮೇಲೆ ನೋಡಿ, ನಿಡುಸುಯ್ದು,)

ಹಾ ಕಿಡುಕುದೆವ್ವಮೆ! ನೀನೇತರ್ಕೆ ಆತೆಱದಿಂ ಪೆಱತೊರ್ವರೊಳೆಲ್ಲಿಯುಮಿಲ್ಲದ ಚೆಲ್ವಿಕೆಯ ಪೆರ್ಚುಗೆಯನಮರ್ಚಿದೆ? ಅಮರ್ಚಿಯುದರ್ಕೆನಿತೆಡಱನೊಡರಿಸಿದೆ?

( ಮತ್ತಂ ಕೈಯೊಳಿರ್ದ ತಾರಾವಳಿಯುಂ ನೋಡಿ )

ಎನ್ನ ಕೆಳದಿ ಸಾರಸ್ವತಿ ತನ್ನ ಹರಣದ ಮೇಲಣೊಳಸಿಕೆಯನುೞಿದು, ಈತಾರಾವಳಿಯನಯ್ಯಕುಚೇಲಂಗೀವುದೆಂದು ಪೇೞ್ದೆನ್ನ ಕೈಯೊಳಿತ್ತಳ್. ಆದೊಡಾನಾಪಾರ್ವನಂ ಕಾಣೆಂ.

(ಎಂದು ನಡೆಯುತ್ತೆ ನೋಡಿ)

ಇದೆಕೊಳ್ ಅಯ್ಯಕುಚೇಲನಿತ್ತಲೆ ಬಂದಪಂ ; ಇವಂಗಿದನೀವೆಂ.

[ಆಬಳಿಕ್ಕೆ ಸಂತಸಂಗೊಂಡು ಕುಚೇಲಂ ಬಂದಂ]

ಕುಚೇ. ಹಿಹಿ ! ಆದೊಡೀಗಳ್ ಮಾರಾಯನೊಡಂಬಡಿಸೆ, ದೇವಿ ಮುಳಿಸನುಳಿದು, ಹಸಾದಂಗೆಯ್ದು, ಎನ್ನ ಸೆಱೆಯುಂ ಪರಿಹರಿಸಿ, ತನ್ನ ಕೈಯಿಂದಮೆ ಪೂರಣಗಡುಬನಿತ್ತಳ್ ; ಅವಱಿಂ ಪಿರಿದಾದೆನ್ನ ಪೊಡೆಯೊಡೆಯಂ ತುಂಬಿದೆಂ ; ಮತ್ತಂ ಇದೆಕೊಳ್ ಕೈಗಡಮುಂ ಕಿವಿವಚ್ಚುಮುಂ ಪಟ್ಟುಡೆಯೆರಡುಮುಂ ಕೊಟ್ಟಳ್; ಅದಱಿಂದಿನ್ನುಂ ರಾಯನಂ ಕಾಣವೇಟ್ಕುಂ. (ಎಂದು ನಡೆಯುತ್ತಿರೆ)

ಚಂದ್ರ. (ಅಳುತೆ ಕುಚೇಲನ ಸನಿಯಮಂ ಸಾರ್ದು)

ಅಯ್ಯಾ ಕುಚೇಲ, ಒಂದಿನಿಸು ನಿಲ್ ನಿಲ್.

ವಿದೂ. ಎಲೆಗೆ ಚಂದ್ರಲೇಖೆ, ನೀನೇತರ್ಕಳುತಿರ್ಪೆ ? ಸಾರಸ್ವತಿಗೆ ಮತ್ತೇನಾನುಂ ಭಯಮಿಲ್ಲಲ್ತೆ !

ಚಂದ್ರ. ಎಲೆ ಕುಚೇಲನೆ, ಈವಗೆಯುಂ ಪೇೞ್ವೆಂ ಕೇಳ್ ; ದೇವಿಯಾ ಕಡುಬಡವೆಯಾದ ಸಾರಸ್ವತಿಯುಂ ಕುಂಡಿನೀಪಟ್ಟಣಕ್ಕೆ ಕಳುಪಿದೆನೆಂದೊಂದು ಸುದ್ದಿಯಂ ಪುಟ್ಟಿಸಿ, ಅವಳನಂತಪುರದೊಳೇ ಅವಿಸಿದಳ್ ; ಅದಱಿಂದವಳಾಯೆಡೆಯೊಳೆಂತಪ್ಪಳೊ ಎಂದಳುತಿರ್ಪೆಂ.

ವಿದೂ. (ಉದ್ವಿಗಂಗೊಂಡು) ದೇವಿಯೆನಿತು ಕಡುಕೂರ್ಪುಗಾರ್ತಿಯಾದಳ್ !

ಚಂದ್ರ. ಎಲೆ ಅಯ್ಯಾ, ಸಾರಸ್ವತಿ ತನ್ನ ಹರಣದುೞಿವಿನೊಳಾಸೆಗಳೆದು, ಈಮುತ್ತಿನ ಹಾರಾವಳಿಯಂ " ಅಯ್ಯಕುಚೇಲಂಗೀವುದು" ಎಂದೆನ್ನ ಕೈಯೊಳ್ಕಳುಪಿದಳ್ ; ಅದಱಿಂ ನೀನಿದಂ ಕೊಳ್ವುದು.

ವಿದೂ. (ಕಣ್ಬನಿಗಱೆಯುತ್ತೆ) ಈವಗೆ ಪ್ರಸ್ತಾವದೊಳ್, ಇದಂ ಕೊಳ್ವದರ್ಕೆನ್ನ ಕೈಯ್ಗಳ್ ಮುಂದುವರಿಯವು.

(ಎಂದಿರ್ವರುಂ ಅಳುತಿರ್ದರ್)

ಚಂದ್ರ. ಅಯ್ಯಾ ಕುಚೇಲನೆ, ಅವಳ್ಗನುಗ್ರಹಂಗೆಯ್ವಂತಾದೊಡಿದಂ ಕೊಳ್ವುದು.

ವಿದೂ. (ಆಲೋಚಿಸಿ) ಅಂತಾದೊಡಿದಂ ತಾರಾ, ಸಾರಸ್ವತಿಯ ವಿರಹದಿಂ ಪರಿತಾಪಂಗೊಂಬ ರಾಯನ ದುಗುಡಮಂ ಇದಂ ತೋಱಿಸಿ ಮಾಣಿಪೆಂ. (ಎಂಬುದುಂ

(ಚಂದ್ರ. ತಾರಾವಳಿಯಂ ಕುಚೇಲಂಗಿತ್ತಳ್.)

ವಿದೂ. (ಆಮುತ್ತಿನೊಚ್ಚರಮಂ ಕೈಗೆ ತೆಗದುಕೊಂಡು ನಿರವಿಸಿ ಬಿಸವಂದಂಬಡೆದು) ಎಲೆ ಚಂದ್ರಲೇಖೆ, ಅವಳ್ಗಿಂತಪ್ಪ ಬೆಲೆಯಿಲ್ಲದ ನೇವಚ್ಚಮೆತ್ತಣದು? (ಎನೆ

ಚಂದ್ರ. ಆನುಮಿದೇ ತೆಱದಿಂ ಕೌತುಕಂಗೊಂಡು ಅವಳಂ ಬೆಸಗೊಂಡೆಂ.

ವಿದೂ. ಅದರ್ಕವಳೇನೆಂದಳ್?

ಚಂದ್ರ. ಆಬೞಿಕ್ಕವಳ್ ನೀಡುಂ ಬಿಸುಸುಯ್ದು, ಈವಗೆಯ ಕಥೆಯಂ ಪೇೞ್ದುದಱಿಂದೇನೆಂದು ನುಡಿದು, ಬಱಿದೆ ಅವಳುಜ್ಜುಗಿಸಿದಳ್.

ವಿದೂ. ಮತ್ತೇಂ? ಪೆಱರ್ಗೆ ದೊರೆಕೊಳ್ಳದ ನೇವಚ್ಚದಿಂದೆಯುಂ, ಅವಳ ಕಡುನಾಣಿಂದೆಯುಂ, ಪೇೞ್ದಂತೆ ಆದುದು; ಆವ ಬಗೆಯೊಳಮವಳ್ಮಹಾಕುಲದೊಳುದಿಸಿದವಳೇ ಆಗವೇೞ್ಪುದು.

ಚಂದ್ರ. (ನೋಡಿ) ಎಲೆ ಕುಚೇಲನೆ, ಇದೆಕೊಳ್ಮಹಾರಾಯಂ ರುಕ್ಮಿಣೀದೇವಿಯರಮನೆಯಂ ಪೊಱಮಟ್ಟು ಪಳುಕಿನ ಪಾಸರೆಯೊಳ್ಕುಳ್ಳಿರ್ದಪಂ, ನೀನಲ್ಲಿಗೆ ನಡೆ; ಆನುಂ ರುಕ್ಮಿಣೀದೇವಿಯರ ಸನಿಯಕ್ಕೆ ಪೋಪೆಂ. (ಎಂದಿರ್ವರುಂ ತೆರಳ್ದರ್.)

—ಇದು ಪ್ರವೇಶಕಂ—

[ಆಬಳಿಕ್ಕೆ ಪಟ್ಟವಣಿಯೊಳೊಟ್ಟೈಸಿ ವಾಸುದೇವಂ ಸಾರ್ತಂದಂ.]

ವಾಸು. (ಯೋಚಿಸಿ)

ವೃ॥ ನೆವಗೊಂಡಾಣೆಗಳಿಂದೊಡಂಬಡಿಕೆಮಾತಿಂ ತೆಟ್ಟನೆಲ್ಗೆಯ್ದುದು।
ಕೈವದಿಂ ಚೀಟಗಳಿಂ ಪದಪ್ರಣತಿಯಿಂ ಮತ್ತಂ ಸಖೀವಾಕ್ಯದಿಂ ॥
ಕವಿದಾಂ ಸೈಪಿಡೆ ಮಾಣ್ದಳೀ ಮುಳಿಸನಂತಂತೋತು ಕಣ್ಣೀರ್ಗ [ಳಂ।
ದೆ ವಲಂ ಪಾಳಿಸಿದಂತೆವೊಲ್ ಭರದಿನೀಗಳ್ತಾನೆ ಪೋಗಾಡಿದಳ್॥೨೩

(ಮತ್ತಮಲ್ತೆಯಿಂ ನಿಡುಸುಯ್ಯುತ್ತೆ)

ಈಗಳೆನ್ನೊಳ್ ರಾಣಿ ಪಸಾದಮನೆಸಗಿದೊರ್ಡಂ ಸಾರಸ್ವತಿಯ ಚಿಂತೆಯೆನ್ನ ಮನಕ್ಕೆ ಸಂತಸಮಂ ಪುಟ್ಟಲೀಯದಿದೆ.

ವೃ॥ ಸೆಱೆದಪ್ಪಿನಿಂ ಮುಳಿದ ರಾಣಿಗೆ ಬೆರ್ಚಿ ತಾನೇ।
ಮಱಗೊಳ್ವೆನೆಂದೊದವಿಯೆನ್ನೊಡಲೊಳ್ಮನೋಜಂ॥
ಕಱತೆಚ್ಚ ಕೂರ್ಗಣೆಯ ಗಾಯದ ದಾಱಿಯಿಂ ಸಾ।
ರ್ದೆಱಿಯುಳ್ ದಿಟಂ ಮನದೊಳಿಂದೊಳಪೊಕ್ಕಳಕ್ಕುಂ॥೨೪

ಅದೊಡೆನಗಾವಂ ನಂಬುಗೆದಾಣಮಾಗಿರ್ಪ ಮಾಕುಚೇಲನಂ ರಾಣಿ ಮುಳಿಸಿಂ ಸೆಱೆಗಿಕ್ಕಿದಳ್; ಈದುಗುಹಮನಿನ್ನಾರೊಳ್ ಕಳೆವೆಂ.
(ಎನುತಿರ್ದಂ.)

[ಆಬಳಿಕ್ಕೆ ಕುಚೇಲಂ ಬಂದಂ]

ಕುಚೇ. (ಮುಂತೆ ನೋಡಿ) ಇದೆಕೊಳ್ಮರಾಯಂ ನಿಟ್ಟೆಳಸಿಕೆಯಿಂ ಕಡು ಬಡವಾಗಿಯುಂ, ಚೆಲ್ವಿನಿಂ ಬಳ್ಳಿದನಾಗಿ, ದಾಡಿವದೊಳ್ಮುಡಿದ ಚಂದಿರನಂತೆಂದವಾಗಿ ತೋರ್ಕುಂ. (ಎನುತ್ತೆ ಸಮೀಪಮಂ ಸಾರ್ದು) ಎಲೆ ಮಹಾರಾಯನೆ, ನಿನಗೇಸಕ್ಕೆ! ಕಟಕಟಾ! ಈಪರಿಯೊಳ್ ರಾಣಿಯ ಕೈಯೊಳ್ಪಂಡಿಗಸಿಲ್ಕಿ ಪ್ರಣ್ಯವಿಂದಮಾಂ ಬಿಡುತವೆತ್ತು

ಈಕಣ್ಗಳಿಂದಮೆ ನಿನ್ನಂ ನೋಡಿದೆಂ.

ವಾಸು. (ನೋಡಿ ಸಂತಸಂಗೊಂಡು) ಎಲೆ ಕೆಳೆಯ ಸಾದ ಕುಚೇಲಾ, ಎನ್ನಂ ತಳ್ಕೈಸು. (ಎಂದಿರ್ವರುಂ ಕ್ಷೇಮಾಲಿಂಗನಂಗೆಯ್ದರ್)

ವಾಸು. ಎಲೆ ಕುಚೇಲನೆ, ನಿನ್ನ ಮೊಗದುಂಮುದದಿಂದಮೆ ರಾಣಿಯ ಹರ್ಸಾದಮಂ ತಿಳಿದೆಂ; ಸಾರಸ್ವತಿಯ ವೃತ್ತಾಂತಮೆಂತಿರ್ಪುದು? (ಎನೆ

(ವಿದೂಷಕಂ ತಲೆಗುತ್ತಿಯುಸಿಕೆಮಿರ್ದಂ.)

ವಾಸು. ಎಲೆ ಕೆಳೆಯನೆ, ಏಕೆ ನುಡಿಯದಿರ್ಪೆ? (ಎನೆ

ವಿದೂ. ಎಲೆ ಮಹಾರಾಯಾ, ಇದಪ್ರಿಯೋಕ್ತಿಯೆಂದಾಂ ಬಿನ್ನವಿಸದಿರ್ಪೆಂ.

ವಾಸು. ಅದೆಂತಪ್ರಿಯಂ? ಏನವಳಸುವಂ ಬಿಸುಟಳೊ!

(ಎನುತ್ತೆ ಮೂರ್ಚ್ಛೆಗಿಸಿದಂ)

ವಿದೂ. (ತವಕಂಗೊಂಡು) ಎಲೆ ಮಹಾರಾಯನೆ, ಸೈರಿಸು ಸೈರಿಸು!

ವಾಸು. (ಅಱಿವುಗೊಂಡು ಸುಯ್ಯುತ್ತೆ)

ವೃ॥ ಹರಣಗಳರ ಮಾಣಿಂ ಗಾಂಪನಾದೆನ್ನನಿಂ ನೀ।
ಮಿರದೆ ಚತುರರಾಗಿಂ ಕೇಳಮೆನ್ನೊಂದು ಮಾತಂ॥
ಭರದೆ ನಡೆಯುವೇಱ್ಕುಂ ಮೆಲ್ಲನಿಂತೆಯ್ದಿಯಾಪೆಣ್।
ಪರೆದುಱ್ ಕಡುದೂರಂ ಸಿಲ್ಕದೇ ತಪ್ಪಿ ಪೋಪಳ್॥೭೯

ವಿದೂ. ಎಲೆ ಮಹಾರಾಯನೆ, ಬೇಱ್ ನೀಂ ತಿಳಿಯವೇಡ; ಆ ಸಾರಸ್ವತಿಯಂ ದೇವಿ ಕುಂಡಿನೀಪಟ್ಟಣಕ್ಕೆ ಕಳುಪಿದಳ್; ಅದಱಿಂದಾ ಮಾತು ನಿನಗಪ್ರಿಯಮೆಂದಾನೊರೆದುದಿಲ್ಲ. (ಎನೆ

ವಾಸು. ಅಕ್ಕಟಾ! ರಾಣಿಗೆನ್ನೊಳನಿತಾನುಂ ದಾಕ್ಷಿಣ್ಯಮಿಲ್ಲದೆ ಪೋದುದು; ನಿನಗೀವೃತ್ತಾಂತಮನಾರಱಿಪಿದರ್?

ವಿದೂ. ಚಂದ್ರಲೇಖೆಯಲ್ತೆ; ಮತ್ತಮವಳದೇಂ ನಿಮಿತ್ತಮೋ ಈ

ಮುತ್ತಿನ ತಾರಾವಳಿಯನೆನಗೆ ಕಳುಪಿದಳ್.

ವಾಸು. ಎನ್ನಂ ಸಂತೈಸುವುದಲ್ಲದಿದರ್ಕಿಂ ನಿಮಿತ್ತಮಾವುದು ?

(ಎಂದಾ ಮುತ್ತಿನೊಚ್ಚರಮುಂ ಕೊಂಡು, ತನ್ನೆ*ದೆಯ ಮೇಲಿಟ್ಟು)

ಅಚ್ಚರಿಯಚ್ಚರಿ !

ಕಂ॥ ಚೆನ್ನೆಯ ಕಂಠಾಲಿಂಗನ।
ದಿಂ ಸಡಿಲ್ ಬಿಡುಗೊಂಡು ಪೊರಳ್ವ* ತಾರಾವಳಿಯಿಂ।
ದೇಂ ನೇಹದೆ ಸಂತೈಕುಂ !।
ತನ್ನವೊಲಿರ್ದನ್ನ ತನುವನೊಳ್ಗಳದಿಯವೊಲ್ ॥೮೦

ಎಲೆ ಕುಚೇಲನೆ, ಈಮುತ್ತಿನೊಚ್ಚರಮಂ ನೀನೆ ನಿನ್ನ ಕೊರಲ್ಗ ಮುಚರ್ಚು ; ಆನುಮಿದನವಳಂ ನೋಡುವಂತೆ ನೋಡಿ ಸಂತಸಂಬಡುವೆಂ.

ವಿದೂ. ರಾಯಂ ಬೆಸಸಿದಂತಕ್ಕೆ. (ಎಂದು ತನ್ನ ಕೊರಲ್ಗ ಮುಚರ್ಚಿದಂ)

ವಾಸು. ಎಲೆ ಕುಚೇಲನೆ, ಸಾರಸ್ವತಿಯ ದರ್ಶನಮೆಂಬುದು ಮಗುೞ್ ಮಗೆ ದುರ್ಲಭಮಾದುದು.

ವಿದೂ. (ಭಯಂಗೊಂಡು) ಎಲೆ ಮಹಾರಾಯನೆ, ಈಯೆಡೆಯೊಳಿಂತು ನುಡಿಯದಿರು ; ಒಂದಾನೊಂದು ವೇಳೆಯಾರಾನುಂ ದೇವಿಯ ಪರಿಜನಂ ಸಂಚರಿಕುಂ.

(ಎಂದು ಕಿವಿಯನೋಸರಿಸಿ ಕೇಳ್ದು)

ಎಲೆ ಮಹಾರಾಯನೆ, ಇದೇನೋ ಪಜ್ಜೆಯ ದನಿ ಕೇಳಿಸುತ್ತಿದೆ, ಒಂದು ನಿಮಿಷಮುಸಿಕಮಿರ್.

[ಆಬೞಿಕ್ಕೆ ಕತ್ತಿಯಂ ಕೈಯೊಳಾಂತು ವಿಶ್ವಂಭರೆಯೆಂಬ ಪಡಿಯರಿತಿ ಬಂದಳ್.]

ವಿಶ್ವಂ. ಎಲೆ ಮಹಾರಾಯನೆ, ಜಯಿಸು ಜಯಿಸು; ಇದೆಕೊಳ್ಬಾಗಿಳೊಳ್

ಪ್ರದ್ಯುಮ್ನನ ಬಳಿಯಿಂ ಕೃತವರ್ಮನೇನೋ ಒಂದೋಸಗೆವಾತಂ ಕೊಂಡು ದೇವರ್ಗಱಿಪಲ್ ಬಂದಿರ್ದಪಂ.

ವಾಸು. ಎಲೆ ವಿಶ್ವಂಭರೆ, ಅವರ್ಗೇಂ ತಡವು, ಬೇಗಂ ಬರಿಸಾ.

ವಿಶ್ವಂ. ದೇವರಾಣತಿಯಾದಂತಕ್ಕೆ.

(ಎಂದು ಪೋಗಿ ಕೃತವರ್ಮನನೊಡಗೊಂಡು ಬಂದು)

ಎಲೆ ಕೃತವರ್ಮನೆ, ಇದೆಕೋಳ್ಮಾರಾಯಂ ; ಸನಿಯಮಂ ಸಾರಾ.

(ಎಂಬುದುಂ

ಕೃತ. (ವಾಸುದೇವನ ಸನ್ನಿಧಿಯಂ ಸಾರ್ದು) ಎಲೆ ಮಾರಾಯನೆ, ದೈವ ಕಟಾಕ್ಷದಿಂದಾದ ಪ್ರದ್ಯುಮ್ನನ ಗೆಲವಿಂ ನಿನಗೆ ಲೇಸಾದುದು.

ವಾಸು. (ಸಂತಸಂಗೊಂಡು) ಸೌಭಪುರಾಧಿಪನಾದ ಸಾಲ್ವನಂ ಜಯಿಸಿದನೇ ಪ್ರದ್ಯುಮ್ನಂ?

ಕೃತ. ಅಂತಪ್ಪುದು.

ವಾಸು. ಭಾಪುರೇ ಪ್ರದ್ಯುಮ್ನ! ಕಿಱಿಯಂ ದಿನದೊಳೆ ಪಿರಿದಾದ ನಲ್ಗಜ್ಜಮಂ ಸಜ್ಜುಗೊಳಿಸಿದೈ; ಆದೊಡೀಗಳಾಗೆಲವಿನ ಪರಿಯಂ ಬಿತ್ತರದಿಂ ಕೇಳಲೆಳಸುವೆಂ.

ಕೃತ. ಎಲೆ ಮಾರಾಯನೆ, ಆದೊಡಾಲಿಸಾ ; ದೇವರಡಿಯಾಣತಿಗೊಂಡಾಮಿತ್ತಣಿಂ ದೇವರ್ ಬೆಸಸಿದ ದಾಱಿವಿಡಿದು ಕೆಲವು ದಿವಸದೊಳೆ ಪೆಗ್ಗಳಮಾಗಿ ನೆರಪಿದಾನೆಕುದುರೆತೇರ್ಕಾಲಾಳ್ಗಳಂ ಪರರ್ಗಸದಳಮಾದ ಪಿರ್ದಟಮನೊಡಗೊಂಡು ಪೋಗಿ, ವಿಂಧ್ಯದುರ್ಗದೊಳ್ನೆಲಸಿಪರ್ ಸಾಲ್ವನ ಸೌಭಮೆಂಬ ಪೊಟಲಂ ಸುತ್ತಿ ಮುತ್ತಿಗೆಯನಿಕ್ಕಲುಜ್ಜುಗಿಸಿದೆವು.

ವಾಸು. ಮತ್ತೆ ಮತ್ತೇಂ?

ಕೃತ. ಆಬಳಿಕ್ಕಾ ಸೌಭಪುರಾಧಿಪನಾದ ಸಾಲ್ವನಿನಿತುಂ ಪರಿಭವಮಂ ಸೈರಿಸದೆ ರಕ್ಕಸರಿಂ ಕಿಕ್ಕಿರಿಸಿ ಕರ್ಕಸಮಾದ ತನ್ನ ಚಾತುರಂಗದಳಮನಿತುಮಂ ಸಜ್ಜುಗೊಳಿಸಿದಂ.

ವಿದೂ. ಎಲೆ ಕೃತವರ್ಮನೆ, ಎನಗೆ ಬಿಗುರ್ಪಿನಿಂ ಮನಂ ತಲ್ಲಳಿಸುತಿದೆ, ಬೇಗಬೇಗಂ ಬಿನ್ನವಿಸು.

ವಾಸು. ಮತ್ತೆ ಮತ್ತೇಂ ?

ಕೃತ. ಆಬಳಿಕ್ಕೆ ಸೌಭಪುರಾಧೀಶಂ ನಿಶ್ಚಯಿಸಿ ;

ವೃ॥ ಜಗಳಂಗೆಯ್ಯಲ್ಕೆ ಬೇಗಂ ಪರಿದು ನಗರದಿಂದಾಂತು ನಿಂದಿರ್ಪನಂ ದಿ।ಕ್ಕುಗಳೊಂದುಂ ಕಾಣದಂತಾಖಳರ ಗಡಣದಿಂ ಸುತ್ತಲುಂ ಮುತ್ತಿ ಕ್ರೂರಂ ।ಬುಗಳಂ ಬೀಱುತ್ತೆ ಮತ್ತದ್ವಿರದಪೃತನೆಯಿಂದಾಳ್ಗಳಂ ತಳ್ಳುಸುತ್ತಾ।ವಗೆಯಿಂ ಸಾರ್ತರ್ಪನಂ ತದ್ವಿಗುಣಮೆನಿಸಿ ಪ್ರದ್ಯುಮ್ನನುಂ ಪ್ರೋಣ್ದು ನಿಂದಂ ॥೮೧

ಮತ್ತಂ,

ವೃ॥ ಇಸುತಿರ್ಪಸ್ತ್ರಂಗಳಿಂ ಸೀಸಕಮುಡಿದುಱದಿಂ ಖಡ್ಗದೇಱಿಂ ತನುತ್ರಂ। ಕಸಿದುಂ ಬಲ್ಗಾಯದಿಂ ನೆತ್ತರ ಪೊಱ್ ಪರಿವಂತಾಗಳೇಱಾಳಿಗಳ್ಬ॥ಚ್ಚಿಸಕಂಗೆಟ್ಟೆಮ್ಮ ಸೇನಾಸಮುದಯಮನಿತುಂ ಬೀಯೆ—

ವಾಸು. ಅದೇನೆಮ್ಮ ಸೇನೆ ಸರಿದುದೆ ? ಮತ್ತೆಂತಾದುದು ?

ಕೃತ. — ತಾನೊರ್ವನೇ ಮಾ।ಮಸಕಂಗೊಂಡಾಂತು ಪ್ರದ್ಯುಮ್ನನವನ ತಲೆಯಂ ಶಸ್ತ್ರದಿಂ ಬೀಱ್ ಕೊಯ್ದಂ ॥೮೨

ವಿದೂ. ಎಲೆ ಮಾರಾಯನೆ, ಲೇಸುಲೇಸು ! ಆಂ ಗೆಲ್ದೆಪ್ಪ !

(ಎನುತ್ತೆೞ್ದು ಕುಣಿಕುಣಿದಾಡಿದಂ.)

ವಾಸು. ಭಾಪು ಭಾಪೆಲೆ ಸಾಲ್ವನೆ ! ನೀಂ ಮಾಡಿದುದುಂ ನಿನಗೆ ಲೇಸಾ

ದುದು; ಆವ ನಿನ್ನಾವರ್ಗಂ ಪಗೆವರುಂ ಕೊಂಡಾಡುವರ್. ಆಬಱಿಕ್ಕೆ ಮತ್ತೇಂ? (ಎನೆ

ಕೃತ. ಪ್ರದ್ಯುಮ್ನನುಂ ತನ್ನ ತಮ್ಮನಾದ ಸುದ್ಯುಮ್ನನಂ ಸಾಭಪುರದೊಳಿರಿಸಿ, ಕೊಳುಗುಳದೊಳ್ಬಲ್ಗಾಯಪಡೆದಾನೆ ಕುದುರೆ ಮೊದಲಾದ ಧಳಮನೊಡಗೊಂಡು ಮೆಲ್ಲನೆ ಸಾಗಿ ಬಂದಪಂ.

ವಾಸು. ಎಲೆ ವಿಶ್ವಂಭರೆ, ಎಮ್ಮ ಹಸಾದಕ್ಕೆ ತಕ್ಕಂತೀಕೃತವರ್ಮಂ ಗುಡುಗೋಱಿಯನೀವುದೆಂದುದ್ಧವಂಗೆ ಸೊಲ್ಲಿಸಾ. (ಎಂಬುದುಂ

ವಿಶ್ವಂ. ದೇವರಾಣತಿಯಾದಂತಕ್ಕೆ.

(ಎಂದು ಕೃತವರ್ಮನನೊಡಗೊಂಡು ಪೋದಳ್)

[ಆಬಳಿಕ್ಕೆ ಸೌದಾಮಿನಿ ಸಾರ್ತಂದಳ್]

ಸೌದಾ. ಎಲೆ ಮಹಾರಾಯನೆ, ದೇವಿಯರೆನಗಾಣತಿಗೆಯ್ದರದೆಂತೆನೆ :— “ಎಲೆಗೆ ಸೌದಾಮಿನಿ, ನೀಂ ರಾಯನೆಡೆಗೆ ಪೋಗಿ ಈಯೈಂದ್ರಜಾಲಿಕನಂ ಕಾಣಿಸಾ.” ಎಂದು. ಅದಱಿಂ ರಾಯನಿಲ್ಲಿರ್ದಪಂ, ಬಿನ್ನಪಂಗೆಯ್ವೆಂ. (ಎಂದು ಸನಿಯಮಂ ಸಾರ್ದು)

ಎಲೆ ಮಹಾರಾಯನೆ, ಇದೆಕೊಳ್ ವೈದರ್ಭಸಿದ್ಧನೆಂಬ ಪೆಸರುಳ್ಳೊರ್ವನೈಂದ್ರಜಾಲಿಕಂ ಕುಂಡಿನೀಪಟ್ಟಣದಿಂ ಬಂದಂ. ಇವನ ವಿದ್ಯೆಯಂ ದೇವರ್ ನೋಡಲ್ವೇಳ್ಪುದೆಂದು ದೇವಿಯರ್ ಬಿನ್ನಪಂಗೆಯ್ದು ಕಳುಪಿದರ್. (ಎನೆ

ವಾಸು. ಎಲೆ ಸೌದಾಮಿನಿ, ಬೇಗಂ ಕರೆದು ತಾರಾ.

ಸೌದಾ. ರಾಯರಾಣತಿಯಾದಂತಕ್ಕೆ. (ಎಂದು ಪೋಗಿ, ಸೋಗೆಗಱಿ ಪೊದೆಯಂ ಪಿಡಿದಿರ್ದ ಐಂದ್ರಜಾಲಿಕನನೊಡಗೊಂಡು ಬಂದಳ್.)

ಐಂದ್ರ. ಈಯೈಂದ್ರಜಾಲವಿದ್ಯೆಗೆ ತಾನಧಿದೇವತೆಯಾದುದಱಿಂದಿಂದ್ರನ

ಅಡಿಗೆಱಗುವೆಂ; ಪುತ್ರಮಾತೆಱದೊಳ್ ಮಾಯಾವಿದನಾಗಿಯೆನಗೀ ವಿದ್ಯೆಯಂ ಕಲಿಸಿದ ಗುರುವಿನಡಿಗಂ ಮಣಿವೆಂ. (ಎನುತ್ತೆ ಬಪಂ.)

ಸೌದಾ. (ವಾಸುದೇವನ ಸುಮುಖಂ ತೋರ್ದು) ದೇವ, ಇದೆಕೊಳ್ ಐಂದ್ರಜಾಲಿಕಂ. (ಎಂದು ಕಾಣಿಸಿದಳ್)

ಐಂದ್ರ. (ವಾಸುದೇವಂಗೆ ಮಣಿದು) ಎಲೆ ನಾರಾಯಣ, ವಿಜಯೋದ್ಭವ ; ಇದೆ ಬಿನ್ನಪಂ.

ಕಂ॥ ಧರೆಯೊಳ್ತಣ್ಣಿದಿರನಸಂ |
ಬರವೊಳ್ಬಟ್ಟೆಗಳನುರಿಯನುದಕದೊಳಂ ತಾ ॥
ಇರುಳಂ ನಡುವಗಲೊಳ್ಬ |
ತ್ತರಿಸುವೆನೋ ಮತ್ತೆ ಮಾಳ್ಪುದೇಂ ನೀಂ ಬೆಸಸಾ ॥೮೩

ಮತ್ತಮೊಂದಂ ಕಡುಸೂರುಳ್ಗಿಡಿದು ನುಡಿವೆಂ.—

ಕಂ॥ ದೇವರ್ ಚಿತ್ತೈಸುವುದೆನ |
ಗೀವಿದ್ಯಾಚಾರ್ಯನಿತ್ತ ಮಂತ್ರದ ಬಲದಿಂ ॥
ದಾವಾವುದನೆರ್ದೆ*ಯೊಳ್ಸಂ |
ಭಾವಿಸುವೆಯವರನಿಲ್ಲಿ ತೋಱಸಲಾರ್ಪೆಂ ॥೮೪

ವಿದೂ. ಇವಂ ಪೆರ್ಗಳಂಗೊಂಡುರ್ಗಳಿಸುವಂ; ಅದಱನಿವನೊಳನಿತು ಮರ್ಕಮೆಂಬುದು ತೋಱುತ್ತಿದೆ.

ವಾಸು. ಎಲೆ ಸೌದಾಮಿನಿ, ನೀಂ ಪೋಗಿ ರಾಣಿಯೊಡನೆ “ಈಯೈಂದ್ರಜಾಲಿಕಂ ನಿಮ್ಮ ದೇಶದವನಾಗಿರ್ಪಂ. ಈಯೆಡೆಯೊಳ್ಸಂದಣಿಯಿಲ್ಲದಿದೆ ; ಅದಱಂ ನೀನುಂ ಬಂದೊಡೆ ಇರ್ವರುಂ ನಿಟ್ಟಿಪಂ.” ಎಂದಱಪಿ ಬೇಗದಿನೊಡಗೊಂಡು ಬಾರಾ.

ಸೌದಾ. ದೇವರಾಣತಿಯಾದಂತಕ್ಕೆ.

(ಎಂದು ಪೋಗಿ ದೇವಿಯನೊಡಗೊಂಡು ಬಂದಳ್.)

ರುಕ್ಮಿಣೀದೇವಿ. ಎಲೆ ಸೌದಾಮಿನಿ, ಆಯೈಂದ್ರಜಾಲಿಕನೆಮ್ಮ ತವರ್ಮನೆಯಿಂ ಬಂದನೆಂದವನೊಳೆನಗೆನಿತು ಪಕ್ಷಪಾತಂ.

ಸೌದಾ. ಎಲೆ ದೇವಿ, ಬಲ್ಲೆಂ ಬಲ್ಲೆಂ ; ನಿನಗೆ ತವರ್ಮನೆಯೊಳ್ ಮಱಕಮುಂಟು ; ಅಕ್ಕೆ ಚಿತ್ತೈಸು.

ರುಕ್ಮಿ. (ವಾಸುದೇವನ ಸಮೀಪಮಂ ಸಾರ್ದು) ರಾಯಂಗೆ ಲೇಸುಲೇಸು !

ವಾಸು. ಎಲೆ ರಾಣಿ, ಈಯೈಂದ್ರಜಾಲಿಕಂ ಕಡುಬಿಂಕದ ನುಡಿಯಂ ನುಡಿದಪಂ ; ಅದಱಿಂ ದೊಂದಿನಿಸು ಪೊೞ್ತು ಕುಳ್ಳಿರ್; ನಿಟ್ಟಿಪಂ.

ದೇವಿ. (ಕುಳ್ಳಿರ್ದಳ್)

ವಾಸು. ಎಲೆ ಬಿಜ್ಜೆವಳಾ, ನಿನ್ನ ಬಿಜ್ಜೆಯಂ ತೋಱಿಸು. (ಎನೆ

ಐಂದ್ರ. (ಕೈಯೊಳಿರ್ದ ಸೋಗೆಗಱಿವೊದೆಯನೊಯ್ಯಾರದಿಂ ತಿಱುಪಿ)

ಎಲೆ ಮಹಾರಾಯನೆ,

ಕಂ॥ ಕಮಲಜನನಬ್ಜನಾಭನ ।
ನುಮೆಯರಸನನಂತು ಶಕ್ರನಂ ಬಾನೊಳ್ಸಂ ॥
ಭ್ರಮದಿಂ ನರ್ತಿಪ ನಿರ್ಜರ ।
ರಮಣಿಯರಂ ತೋಱಿಸಿದಪೆನೊಲವಿಂ ನೋಡಾ ! ॥೮೫

(ಎಂಬುದುಂ

ವಿದೂ. (ಬಾನಂ ನೋಡಿಯುಚ್ಚರಿಗೊಂಡೆೞ್ದು ವಾಸುದೇವನೊಡನೆ)

ಎಲೆ ಜೀಯಾ,

ವೃ॥ ಇದೆಕೊಳ್ತಾವರೆಯೊಳ್ವಿರಂಚಿಯಿದೆಕೊಳ್ಗಂಗಾಧರಂ ಶಂಭು ಮ।-
ತ್ತಿದೆ ಕೊಳ್ಚಕ್ರಗದಾಭಯಾಂಬುಜದ ನಾಲ್ಗೈವೆತ್ತ ವೈಕುಂಠನಿಂ॥
ತಿದೆ ಚೌದಂತನ ಬೆನ್ನೊಳಿಂದ್ರನಿದೆಕೊಳ್ಮಿಕ್ಕಾದ ದೇವರ್ಕಳಿಂ।
ತಿದೆ ಕಾಲಂದುಗೆಯಂದದಿಂದುಲಿಯೆ ಬಾನೊಳ್ದೇವಿಯರ್ ನರ್ತಿಪರ್॥

(ಎನೆ

ವಾಸು. (ನೋಡಿ) ಅಂತಪ್ಪುದು. (ಎಂದು ಶಿರಮನೊಲೆವಂ)

ವಿದೂ. (ಮತ್ತಂ ಗೊಣಗುತ್ತೆ) ಎಲೆ ಮರುಳೆ, ಐಂದ್ರಜಾಲಿಕನೆ, ಈ ಬೊಮ್ಮಂ ಮೊದಲಾದ ಬಿಡುಗಣ್ಣರಂ ತೋಱುವುದಱಿಂದೇಂ? ನೀನೀರಾಯಂಗೆ ಸಂತಸಮನುಂಟುಮಾಡಿ, ಇವನಿಂ ಪೊರುಳಂ ಪಡೆಯವೇೞ್ಪುದಾದೊಡೆ ಸಾರಸ್ವತಿಯಂ ತೋಱಿಸಾ.

[ಅನಿತಱೊಳ್ ವಿಶ್ವಂಭರೆ ಸಾರ್ತಂದಳ್.]

ವಿಶ್ವಂ. ಎಲೆ ಮಹಾರಾಯನೆ, ಗೆಲವುಗೆಲವು! ಈಗಳಮಾತ್ಯನಾದುದ್ಧವಂ "ಅವಂತೀದೇಶದಮಾತ್ಯನಾದ ಸುನಂದಂ ಸುಭದ್ರನೆಂಬೆಮ್ಮ ಪಡಿಯರನೊಡವೆರಸು ಬಂದಿರ್ಕುಂ; ಇದೆ ಈಗಳೆನ ಪೊಱವೊೞಲ ತಾಗಿರ್ಕುಂ; ಅದಱಿಂದಿರ್ವರಂ ರಾಯಂಗೆ ಕಾಣಿಸು; ಆನುಮೊಂದಿನಿಸು ಜೋಲಿಯಂ ತೀಱಿಸಿ ಬೇಗದಿಂ ಬಂದಪೆಂ" ಎಂದು ಬಿನ್ನಪಂಗೆಯ್ದು ಕಳುಪಿದಂ; ಅದಱಿಂದವರಿರ್ವರುಂ ಬಾಗಿಲೊಳ್ ಬಂದು ನಿಂದಿರ್ಪರ್; ಈಮೇಲೆ ದೇವರ ಚಿತ್ತಮಿರ್ದಂತೆ.

ಶುಕ್ತಿ. ಎಲೆ ಎಱೆಯನೆ, ಈಯೈಂದ್ರಜಾಲದ ನೋಟಮಪಂತಿರ್ಕೆ; ಪಲವಗಲ್ಗಳೀಸೋದರದತ್ತೆಯಮನೆಯಿಂ ಬಂದಿರ್ಪಮಾತ್ಯನಾದ ಸುನಂದಂ ಬರ್ಕೆ, ಅವನಂ ಕಾಣ್ಬೆಂ.

ವಾಸು. ರಾಣಿ ಪೇೞ್ದಂತಕ್ಕೆ. (ಎಂದು) ಐಂದ್ರಜಾಲಿಕನೆ, ಇನ್ನೊಂದು ವೇಳೆ ನೋೞ್ಪೆಂ; ಈಗಳ್ಗೆ ನಿನ್ನ ವಿದ್ಯೆಯಂ ನಿಲಿಸಾ. (ಎಂಬುದುಂ

ಇಂದ್ರ. ದೇವರಾಣತಿಯಾದಂತಕ್ಕೆ; ಆದೊಡೆ ಇನ್ನುಂ ನೋಡತಕ್ಕ ಪಿರಿದಾದೊಂದು ಬಿಜ್ಜೆಯುಂಟು, ಅದನವಶ್ಯಮಾಗಿ ದೇವರ್ ನೋಡವೇೞ್ಪುದು. (ಎಂದು ನಿಲಿಸಿದಂ.)

ವಾಸು. ಅಂತಕ್ಕೆ, ನಿಟ್ಟಿಪೆಂ.

ರುಕ್ಮಿ. ಎಲೆ ಸೌದಾಮಿನಿ, ಉದ್ಧವನೊಡನೆ ಈಯಿಂದ್ರಜಾಲವಿದ್ಯೆಯವಂಗೆ ಬಾಗಮನೀವುದೆಂದು ಪೇೞ್.

ಸೌದಾ. ಅಂತಕ್ಕೆ. (ಎಂದು ಐಂದ್ರಜಾಲಿಕನನೊಡಗೊಂಡು ತೆರಳ್ದಳ್)

ವಾಸು. ಎಲೆ ಕುಚೇಲನೆ, ನೀನಿದಿರ್ಗೊಂಡಾ ಸುನಂದನಂ ಕರೆದು ತಾರಾ.

ವಿದೂ. ಅಂತಕ್ಕೆ. (ಎಂದು ವಿಶ್ವಂಭರೆಯನೊಡಗೊಂಡು ತೆರಳ್ದಂ.)

[ಆಬೞಿಕ್ಕೆ ಕುಚೇಲನೊಡನೆ ಸುನಂದನುಂ ಸುಭದ್ರನುಂ ಬಂದರ್.]

ಸುನಂ. (ಸುತ್ತಲುಂ ನಿಟ್ಟಿಸಿ, ವಿಸ್ಮಯಂಗೊಂಡು) ಕಟಕಟಾ ! ಈ ವಾಸುದೇವನೈಸಿರಿಯ ಪೆರ್ಚುಗೆಯೆಂತುಟು ; ಮತ್ತಾವರಾಯರರಮನೆಯೊಳಾದೊಡಮೀಯೈಶ್ವರ್ಯಾತಿಶಯಮಂ ಕಾಣಲಕ್ಕುಮೆ !

ವೃ॥ ಬಳಸಿರ್ಪಶ್ವಮಿದೆಲ್ಲಮುಂ ಹರಿಹಯಂ ಚೌದಂತಮೀದಂತಿಸಂ ।
ಕುಳಮಿಂತೀಸಭೆಯುಂ ಸುಧರ್ಮೆಯಿದೆಯೀಸಭ್ಯರ್ಕಳೇ ನಿರ್ಜರರ್॥
ಕಳೆಯಿಂ ಪಾಡುವ ಗಾಯನರ್ಕಳವರೇ ಗಂಧರ್ವರೀಸೂಳೆವೆ ।
ಣ್ಗಳ್ ತಾನಚ್ಚರಿಯರ್ಕಳೀನಗರಿಯಿನ್ನಾ ಸಗ್ಗಕೇನಗ್ಗಳಂ ?॥೮೩

(ಮತ್ತಂ ಸೋಜಿಗವಡುತ್ತೆ,)

ವೃ॥ ಇದೆಕೊಳ್ದಿವ್ಯಸುಗಂಧದಿಂ ದೆಸೆಗಳಂ ಪೂರೈಸುಗುಂ ಪಾರಿಜಾ ।
ತದ ವೃಕ್ಷಂ ಮಣಿಶೈಲಮಿತ್ತಲಿದೆ ನಾನಾರತ್ನರೋಚಿರ್ವೃತಾ ॥
ನದಿನಾಕಾಶದೊಳಿಂದ್ರಚಾಪದಿರವಂ ತೋಱುತ್ತೆ ಮತ್ತಿತ್ತ ಬೇ ।
ಱ್ಪುದನೀಯುತ್ತಿದೆ ಕಾಮಧೇನುವನಿಬರ್ಗಂ ತಾನಿದೇನುರ್ವಿಯೊಳ್ ?॥

ಅದಱಿಂ,

ಕಂ॥ ದೊರೆಯೆನಿಪುದೆಮ್ಮವಂತಿಯ ।
ದೊರೆಯೈಸಿರಿಯೀನಗರದ ಪರದರ್ಗಾನುಂ ॥
ಪರಿಕಿಸೆ ದೌವಾರಿಕನೀ ।
ಸಿರಿಯಿರವೇ ಗಾವಿಲಂಬೊಲಾಗಿಪ್ಪುದೆನ್ನಂ ! ॥೮೪

(ಎನುತ್ತೆ, ಮತ್ತಂ ಮುಂತಣ್ಗಡಿಯಿಟ್ಟು ನಿಟ್ಟಿಸಿ, ಕಟ್ಟಚ್ಚರಿವಟ್ಟು,)

ವೃ॥ ಇದು ತಾಂ ಕ್ಷೀರಸಮುದ್ರಮಧ್ಯದೆಸೆವಾಬೆಳ್ದೀವಿಯೋ ಮೇಣಿದ| ಲ್ಲವೊಡಾಸ್ವರ್ಗಮೊ ಸತ್ಯಲೋಕಮೊ ಇದೇ ತದ್ದಿವ್ಯವೈಕುಂಠ ಮೋ ॥ ಮೊದಲಾವಾನ್ರುದನ್ಮೆದೆ ಕೇಳ್ದವವನಿಂದಾವಿಲ್ಲಿ ಕಣ್ಣಾಱ ಕಾಣ್ಬುದಱಿಂದಚ್ಚರಿಯುಂ ಮನಕ್ಕೊದವಿಕುಂ ಸೌಭಾಗ್ಯಮೀಕ್ಷ ಕೃಷ್ಣನಾ ॥೯೦

(ಎನುತ್ತೆ ಸಂತಸಮನಭಿನಯಿಸಿ)

ಕಂ॥ ಅಹಹ! ಈಸಿರಿಯೊಱೆಯನ|
ದರುಸನಮಿಂದೆನಗೆ ದೊರೆದ ಪರಿಯಿಂದಱಿವೆಂ ॥
ಪಿರಿದಾದ ಪೂರ್ವಪುಣ್ಯದ|
ನೆರವಿಯ ಪರಿಪಾಕಮಿಂತು ನಿಕ್ಕುವಮೆಂದಾಂ ॥೯೧

ಅದೊಡೆಮ್ಮಾಳ್ದನಱುಗಿ ಮಿತ್ರವಿಂದೆಯುಮಂ ತಂದೀಮಾರಾಯನ ಕಾಣ್ಕೆಗೊಪ್ಪಿಸಿದೆನಾದೊಡಾಂ ಬರ್ದುಂಕಿ ಬಂದುದುಂ ಸಫಲಮಕ್ಕುಂ.

ಸುಭ. (ತನ್ನೊಳ್) ಪಲವಗಲ್ಗಾಗಿಯೆಮ್ಮಾಳ್ದನಾದ ಗೋವಿಂದನಡಿಯಂ ಕಾಣ್ಬೆನೆಂಬುಕ್ಕವಂಗೊಂಡಿರ್ಪೆನಗೆ ಮನದೊಳ್ಬೀಱೊಂದು ಪಾಂಗು ಸಂಗಳಿಸಿದೆ; ಅದೆಂತೆನೆ:—

ವೃ॥ ಪದಱಿಂದೊಂದಿದ ಭೀತಿಯುಂ ನಡುಕಮುಂ ಪೇರ್ಚೆಕ್ಕುಮುಂಗೆಕ್ಕೆವಾ| ಸಿದ ಮುದ್ದೃಷ್ಟಿಗಳಂ ಕರಂ ಮುಱುಸುಗುಂ ಹರ್ಷಾಶ್ರುವಿಂ ಮೀಱೆ ಗ॥ ದ್ಗದಮಂ ಪೊಣ್ಮಿಸಿ ವಾಕ್ಯಮಂ ತೊದಳಕುಂ ತಜ್ಜೀನ್ನ ವಾರ್ಧಕ್ಯಕೇ| ಱದ ಸಾಹಾಯ್ಯಮನಾಗಿಸಿರ್ಕುಮುಱಿದೀಗಳ್ ಪೊಂಗುವೀಸಂತಸಂ ॥೯೨

ವಿದೂ. (ಇದಿರೊಳ್ನಿಂದು) ಎಲೆ ಸುನಂದನ್ನೆ, ಇತ್ತಿತ್ತ ಲೇಱಾರಾ.

ಸುನಂ. (ಕುಚೇಲನ ಕೊರಲೊಳನುಬರ್ಪ ತಾರಾವಳಿಯಂ ನೋಡುತ್ತೆ, ಸೋಜಿಗಂಗೊಂಡು, ಮನದೊಳ್,) ಅಚ್ಚರಿ! ಎಮ್ಮ ರಾಯನರಮನೆಗಕ್ಕಜಮೆನಿಸಿಯತಿಶಯಮಾದಗ್ಗದ ತಾರಾವಳಿಯಾ ಗೋವಿಂದನರಮನೆಯಂ ಸೇರ್ದ ತಿರುಕುಳಹಾರ್ವನ ಕೊರಲೊಳಪ್ಪುದು.

(ಎನುತ್ತೆ ಪ್ರಕಾಶವಾಗಿ, ಸುಭದ್ರನೊಡನೆಕ್ಕಟಿಯೊಳ್)

ಎಲೆ ಸುಭದ್ರನೆ, ಈ ಹಾರ್ವನ ಕೊರಲ ಮುತ್ತಿನೊಬ್ಬರಮಂ ನಿಟ್ಟಿಸೆ, ಎಮ್ಮಾಳ್ದ ಜಯತ್ಸೇನರಾಯನಂದು ತನ್ನ ಕುವರಿ ಮಿತ್ರವಿಂದೆಗಿತ್ತು ಕಳುಹಿದ ತಾರಾವಳಿಯೆಂದೆಂಬಂತೆ ತೋರ್ಪುತ್ತಿದೆ.

ಸುಭ. ನಿಕ್ಕುವವಾಗಿ ಸಾದೃಶ್ಯಮುಂಟು; ಆದೊಡೀ ಕುಚೇಲನಿಂದಿದರ ಬರವಂ ತಿಳಿವೆಂ. (ಎನೆ

ಸುನಂ. ಎಲೆ ಸುಭದ್ರನೆ, ಇಂತೆಸಗವೇಡ; ಈ ಪಿರಿದಾದ ರಾಜಾಸ್ಥಾನದೊಳ್ ಪಲತೆಱದ ಕಟ್ಟಾಣಿಮುತ್ತಿನೇಕಾವಳಿಗಳೊಳವು.

ವಿದೂ. ಎಲೆ ಸುನಂದನೆ, ಇದೆಕೊಳ್ ಮಹಾರಾಯಂ ಇದಿರೊಳಿರ್ಪಂ, ಕಾಣಿಸಿಕೊಳ್.

ಸುನಂ. (ವಾಸುದೇವನ ಸನಿಯಮಂ ಸಾರ್ದು)

ಎಲೆ ಮಹಾರಾಯನೆ, ನಿನಗೆ ಜಯಮಕ್ಕೆ.

ವಾಸು. ಎಲೆ ಸುನಂದ, ಲೇಸು ಲೇಸು! ಇದೆ ನಲ್ಗಾಸು, ಇಲ್ಲಿ ಕುಳ್ಳಿರ್. (ಎನೆ

(ಸುನಂದಂ ಕುಳ್ಳಿರ್ದಂ.)

ಸುಭ. ಎಲೆ ಮಹಾರಾಯನೆ, ಇದೆಕೊಳ್ಳಿಂ ಸುಭದ್ರಂ ಮಣಿದಪೆಂ.

ವಾಸು. ಎಲೆ ಸುಭದ್ರನೆ, ಬಂದ್ಯೆ? ಕುಳ್ಳಿರ್. (ಎಂಬುದುಂ

(ಸುಭದ್ರಂ ಮಂಡಿಸಿರ್ದಂ.)

ವಿದೂ. ಎಲೆ ಸುನಂದನೆ, ಇದೆಕೊಳ್ ರುಕ್ಮಿಣೀದೇವಿ ಮಣಿದಪಳ್.

ಸುನಂ. ಎಲೆ ದೇವಿ, ಇನ್ನುಂ ನಿನ್ನನಿಯಂಗೊಳವಂ ಪೆರ್ಚಿಸುತ್ತೆ ಸೊಗವಾಳ್ !

ಸುಭ. ಎಲೆ ದೇವಿ, ಆಂ ಸುಭದ್ರಂ ಮಣಿದಪೆಂ.

ದೇವಿ. ಎಲೆ ಸುಭದ್ರನೆ, ಕುಶಲಮೆ ?

ವಾಸು. ಎಲೆ ಸುನಂದನೆ, ಸೋದರದತ್ತೆ ರಾಜಾಧಿದೇವಿಗಂ ಜಯತ್ಸೇನಂಗಂ ಕ್ಷೇಮಮೇ ?

ಸುನಂ. (ಮೇಲೆ ನೋಡಿ, ನಿಡುಸುಯ್ದು) ಎಲೆ ಮಹಾರಾಯನೆ, ಎಂತು ಬಿನ್ನಪಂಗೆಯ್ವೆನೆಂದು ಮುಂದುದೋಱದಿದೆ. (ಎಂಬುದುಂ

ದೇವಿ. (ದುಗುಡಂಗೊಂಡು, ತನ್ನ ಮನದೊಳ್) ಸುನಂದಂ ಇದೇನನೊರೆದಪಂ ?

ವಾಸು. ಎಲೆ ಸುನಂದನೆ, ಇದೇನೇತರ್ಕೆ ನೀನಾಕುಲನಾಗಿರ್ದಪ್ಪೈ ?

ಸುನಂ. ಎನಿತು ಪ್ರೊಬ್ಬುತ್ತಿಸಿಕಮಿದೊರ್ಡಂ, ಎಂತಾನುಮೊರ್ಮೆಯಾನೆ ಪೇೞವೇೞ್ಕುದೇ ಸರಿ ; ಅದಱಿಂ ಪೇೞತಕ್ಕುದನೆಲ್ಲಮಂ ಪೇೞ್ವೆಂ. (ಎಂದು ಕಣ್ಬನಿಗಱೆಯುತ್ತೆ) ಎಲೆ ಮಹಾರಾಯನೆ, ಇದೆಕೊಳ್ ಮಂದಭಾಗ್ಯನಾದಾಂ ಪೇೞ್ದಪೆಂ, ಕೇಳ್ ; ಅಂದಿಂಗೆಮ್ಮಾಳ್ದನಾದ ಜಯತ್ಸೇನರಾಯಂ ತನ್ನಕುವರಿ ಮಿತ್ರವಿಂದೆ ದೇವರಡಿದಾವರೆಯೊಳನುರಕ್ತೆಯಾಗಿರ್ಪಳೆಂಬುದಂ ತನ್ನರಸಿ ರಾಜಾಧಿದೇವಿಯಿಂ ತಿಳಿದು, ಆಕನ್ನೆಯಂ ದೇವರ್ಗೀವೆನೆಂದು ನಿಕ್ಕುವಂಗೆಯ್ವುದುಂ; ಅದನವನ ಕುವರರಾದ ವಿಂದಾನುವಿಂದರಿರ್ವರುಂ ಅಱಿದು ತಾಮಾದುರ್ಯೋಧನಂಗೆ ಕೆಳೆಯರಾಗಿರ್ಪ ಕತದಿಂ, ತಮ್ಮ ತಂಗಿಯನೀಯೆಡೆಗೆ ಕುಡಲೀಯವೆಂದು ತಡೆದು, ಎಮ್ಮರಸನಾಕುವರರಿರ್ವರುಮಱಿಯದಂತೆನ್ನಂ ಕರೆದು ಈಕನ್ನೆಯಂ ಪಡಂಗನೇಱಿಸಿ, ಕಡಲ ಬೞಿವಿಡಿದು ದೇವರ ಅಡಿಯೆಡೆಗೆ ಕಡುವಹಿಲದಿಂದೊಡಗೊಂಡೊಯ್ಯೆಂದು ಬೆಸಸಿಯಾ

ಕುವರಿವೆರಸೆನ್ನನಂತು ಕಳುಪಿದನೈಸೆ. (ಎಂಬುದಮಂ

ವಾಸು. (ರುಕ್ಮಿಣೀದೇವಿಯೊಡನೆಕ್ಕಟಿಯೊಳ್) ಎಲೆ ರಾಣಿ, ಈ ಮಾವನ
ಅಮಾತ್ಯನಾದ ಸುನಂದನಿದೇನು ಪೇಳ್ದಪಂ ? (ಎನೆ

ರುಕ್ಮಿ. ಎಲೆ ಮಾರಾಯನೆ, ಎನಗಮಿದೇತೆಱನೆಂದು ತಿಳಿಯಲಱಿಯೆ ;
ಆನುಮಿದಱ ಪರಿಯಂ ಕೇಳಲೆಳಸಿರ್ಪೆಂ.

ವಿದೂ. ಆದೊಡಾಕುವರಿಗೇನಾದುದು ?

ಸುನಂ. ಆಕುವರಿಯನಾಂ ತವರ್ಗಳ್ ನಡುಗಡಲೊಳಪರ್ಗಿರಿಯನೆಡ
ಹಿಯಾನಪಡಂಗೊಡೆಯೆ ಕಡಲೊಳ್ಪಡಲ್ವಟ್ಟಳ್.
(ಎಂದಱುತ್ತೆ ತಲೆವಾಗಿದಂ.)

ರುಕ್ಮಿ. ಹಾ ಹಾ ! ತಂಗಿ, ನೀಂ ಪೋದೆಯಾ ! ಎನ್ನೊಡನೆ ಪಡಿನುಡಿ
ಗುಡುವಡೊಲ್ಲದೆ!

ವಾಸು. ಎಲೆ ರಾಣಿ, ಸೈರಿಸು ಸೈರಿಸು, ದೈವಗತಿಯಂ ತಿಳಿಯಲ
ಱಿದೈಸೆ ; ಆದೊಡೆ ನೀಂ ನೋಡು, " ಕಡಲೊಳ್ ಪಡಲ್ವಟ್ಟವರ್
ಮಗುೞ್ ಬರ್ಪರೆ " ಎಂದು ಸಂದೆಯಮನುೞ್, ಅದರ್ಕೆ ಪಡಂಗೊ
ಡೆದು ಪಡಲ್ವಟ್ಟುಂ ಮಗುೞ್ದು ಬರ್ದುಂಕಿ ಬಂದವರಿವರಿರ್ವರೇ
ಕುಱುಪೈಸೆ. (ಎನೆ

ರುಕ್ಮಿ. ಇದಿಂತಪ್ಪುದು ; ಆದೊಡೆನಗನಿತು ಸುಕೃತಮೆತ್ತಣದು ?
(ಎಂಬನಿತಱೊಳ್, ತೆಱೆಯೊಳ್ ಗಲಬೆಯಾದುದು.)

ವೃ॥ ಉರಿಯಿಂ ಹರ್ಮ್ಯಂಗಳಗಳ್ಪಂಗಳಸದ ಸಿರಿಯಂ ತಾಳೆಯುದ್ಯಾನ
ದೊಳ್ಪು । ರ್ಕ್ಕರದೊಳ್ಕಂದಿರ್ಪ ಪತ್ರಂಗಳನೊಗೆದು ಪೊಗಂದೋಱ
ಸಂತಾಪಮಂಭೋ ॥ ಧರಮಂ ತಾಳ್ದಂತೆ ಕೇಳೀನಗಮಿಥೆ ಪೋಗೆ
ಯಿಂ ಗಾವರಂದಾಳ್ದಯಂತಃ । ಪುರದೊಳ್ನಾರೀಜನಂ ಕಣ್ಗಿಡೆಯು
ರಮನೆಯಂ ಚುರ್ಚುಗುಂ ಕಿಚ್ಚು ಪೆರ್ಚಿಂ ! ॥೯೩

ಮತ್ತಂ, ಕಂ॥ ಅಂದಾನಂದವ್ರಜಮಂ ।
ಬಂದುಱೆ ಕಾಱ್ಕಿಚ್ಚು ಜುರ್ಚೆ ಕೆಣ್ಚಿಸಿಯುದನಾ ॥
ನಂದಮನುಣ್ಮಿಸಿಬೀಗೋ ।
ವಿಂದಂ ನಂದಿಸುವನಿಂಧಿದಂ ದಯೆಯಿಂದಂ ॥೯೪

ವಾಸು. (ಆರ್ಭಿಪು, ಬಿಗುರ್ಪುದವಕೆಂಗೊಂಡು) ಎಲೆಲೆ, ರುಕ್ಮಿಣೀದೇವಿ ಪೆರ್ಚಿದ ಕಿಚ್ಚಿನ ದಳ್ಳುರಿಗೆ ಸಿಲ್ಕಿದಳೆ ?

ರುಕ್ಮಿ. ಎಲೆ ಮಹಾರಾಯನೆ, ಸಲಹು ಸಲಹು !

ವಾಸು. ಎಲೆ ರಾಣಿ, ಈತಳವೆಳಗಿನಿಂ ಪಕ್ಕದೊಳಿರ್ಪ ನಿನ್ನಂ ಮಱೆದೆಂ. (ಎನುತ್ತೆ ರುಕ್ಮಿಣೀದೇವಿಯಂ ತೆಕ್ಕೈಸಿ,) ಅಳ್ಕದಿರು, ಸ್ಥೈರಿಸು ಸ್ಥೈರಿಸು !

ದೇವಿ. ಎಲೆ ಮಹಾರಾಯನೆ, ಎನಗಾಗಿಯಾನಿಂತು ಸೊಲ್ಲಿಸಿತಿಲ್ಲ ; ಮತ್ತೇನೆನೆ, ಕಡುಗೇಡಾಳತನಕ್ಕೊಡೆಯಾಗಿರ್ಪ್ಪ ಸಾರಸ್ವತಿಯಂ ಸೆಱೆವನೆಯೊಳ್ಬಂಧಿಸಿದೆಂ ; ಅವಳ್ಕಿಚ್ಚಿನೊಳ್ಪಡುತಿರ್ಪಳ್; ಅವಳಂ ಪಾಲಿಸೆಂದು ನುಡಿದೆಂ.

ವಾಸು. ಎಲೆಲೆ ! ಸಾರಸ್ವತಿಯುಱಿದವಳೆ ! ಇದೆಕೊಳ್ಳೆಂ ಪೋಪೆಂ.

(ಎನುತೆಳ್ದಂ.)

ಸುನಂ. ಇದೇಂ ದೇವರಕಾರಣವಾಗಿ ಪತಂಗದ ಪಾಂಗನುಗೀಕರಿಪರೆ?

ಸುಭ. ಎಲೆ ಮಹಾರಾಯನೆ, ಸುನಂದನೊದ ನುಡಿ ಸಲ್ವುದೇ ಸರಿ.

ವಿದೂ. (ವಾಸುದೇವನುತ್ತರಿಗೆಯಂ ಪಿಡಿದು ನಿಲಿಸಿದಂ.)

ವಾಸು. ಎಲೆ ಗಾಂಪನೆ, ಎನ್ನ ಸಾರಸ್ವತಿಯುಗ್ರಗಡಬಳೆಮುಪ್ಪಳ್ ; ಇನ್ನುಮೇಂ ಹರಣಂಗಳಂ ಕಾಪಿಡವೇಳ್ಪುದೇ ?

(ಎನುತ್ತುತ್ತರಿಗೆಯಂ ಬಿಡಿಸಿಕೊಂಡು ನಡೆದಂ.)

ವಾಸು. (ವಹ್ನಿಪ್ರವೇಶಮನಭಿನಯಿಸಿ,)

ವೃ॥ ತನ್ನ ತವೆಲೆಲೆ ಕಿಚ್ಚೀ ಧೂಮದುರ್ಬಂ ಬಿಡಿನ್ನೀಂ ।
ಕವಿಸುವೆಯುರಿಯಂ ಪೇೞಂತಿದೇತರ್ಕೆ ಮಾಣ್ಕ್ರೆ ॥
ಯುವತಿವಿರಹಕಲ್ಪಾಂತಾಗ್ನಿಯುಂ ಬೇಯದೆನ್ನೀ ।
ಯುವಯುವತಿನಿತಾನುಂ ಬೇಗೆಯಂ ಮಾಡ್ಪೆಯಾ ಪೇೞ್ ? ॥೯೫

(ಎನುತ್ತೆ ಮುಂದೆ ನಿಟ್ಟಿಸಿ) ಎಲೆಲೆ ! ಇನ್ನೇವೆಂ ! ಉರಿ ಸಾರಸ್ವತಿಯ ಸನಿಯಮುಂ ಸಾರ್ದುದು ; ಅವಳುಂ ಬೇಗಂ ಪೋಗಿಯವಳಂ ಸಂತೈಸುವೆಂ.

ದೇವಿ, ಇನ್ನೇವೆಂ? ಕ್ಲೇಶಕಾರಿಣಿಯಾದೆನ್ನ ವಚನದಿಂದೈಸೆ ಮಾರಾಯನೀಕಿಚ್ಚಿನೊಳಗಣ್ಗೆ ಪೊಕ್ಕಂ ; ಅದಱಂದಾನುಂ ಮಾರಾಯನ ಬೞಸಲ್ವೆಂ. (ಎನುತ್ತ ಮಾಯಿಡೆಗೆ ನಡೆದಳ್.)

ವಿನೂ. ಎಲೆ ಮಾರಾಯತಿ, ಆನುಂ ನಿನಗೆ ದಾಱದೋಱುತ್ತೆ ನಡೆವೆಂ.

(ಎನುತ್ತವಂ ಮುಂದೆ ನಡೆದಂ.)

ಸುನಂ. ಇದೆಕೊಳ್ ಕಿಚ್ಚಿನೊಳಗಣ್ಗೆ ವಾಸುದೇವಂ ಪೊಕ್ಕುಪೋದಂ. ಎಮ್ಮಾಳ್ದನ ಕುವರಿಯುಂ ಪೋದ ಮೇಲೆ ಮಗುೞದೊಳಪ್ಪುದೇಕೆ? ಆನುಮೀಯೊಡಲನಗ್ನಿಗಾಹುತಿಯನಿತ್ತು ಸೊಗವಡುವೆಂ.

ಸುನ. (ಕಣ್ಬನಿದುಂಬಿ) ಇದೇನಿದೆತ್ತಣೆಡರು ; ನಿಷ್ಕಾರಣಮಾಗಿ ಯದುಕುಲದೇೞ್ಗೆ ಸಂದೆಯುಂ ಬಂದುದು ; ಅಂತಲ್ಲದೊಡೆ, ಬೞದೆ ಇನಿತು ಪಲುಂಬಿ ಬರ್ಪುದೇಂ ? ಆನುಮಾಳ್ದನಡಿಯೆಱಕಕ್ಕೆ ಸರಿಯಾದ ಕಜ್ಜಮನೆಸಗುವೆಂ.

(ಎನುತ್ತೆ ಅನಿಬರುಂ ಅಗ್ನಿಪ್ರವೇಶಮನಭಿನಯಿಸಿದರ್)

[ಆಬಟಿಕ್ಕೆ ಕಾಲೊಳ್ ಸಂಕಲೆ ತಳ್ತು ಕುಳ್ಳಿರ್ದ ಭಾವದೊಳೆ ಸಾರಸ್ವತಿ ಸಾರ್ತಂದಳ್.]

ಸಾರ. (ಸುತ್ತಲುಂ ನಿಟ್ಟಿಸಿ) ಎಲೆಲೆ! ಇದೆಕೊಳ್ ದೈವಾನುಕೂಲದಿಂ

ಪೆರ್ಗಿರ್ಚು ನಾಲ್ದೆಸೆಯೊಳಂ ಪೆರ್ಚಿ ಪರ್ಬಿದೆ ; ಈಗಳದೆನ್ನದುಗುಡಮುಂ ಕಡೆಗಾಣಿಪ್ಪುದು.

ವಾಸು. (ತವಕಬಿಗುರ್ಪುಗಳಿಂ ಸಾರಸ್ವತಿಯ ಸನಿಯಮಂ ಬೇಗದಿಂ ಸಾರ್ದು) ಎಲೆ ಇನಿಯಳೆ, ಇನ್ನುಮೇಂ ಮಧ್ಯಸ್ಥರೀತಿಯಿಂ ನೋಡುತಿರ್ಪೆ ?

ಸಾರ. (ವಾಸುದೇವನಂ ನೋಡಿ ತನ್ನೊಳ್) ಕಟಕಟಾ ! ಇಲ್ಲಿಗೆ ಮಾರಾಯನುಂ ಬಂದಪಂ ; ಮಗುೞ್ ಇವನಂ ನೋಡೆ ನಿಶ್ಚಯಮಾಗಿ ಎನಗೊಡಲ್ವಿಡಿಯವೇೞ್ಪುದೆಂಬೆಳಸಿಕೆ ಪುಟ್ಟಿದೆ.

(ಪ್ರಕಾಶಮಾಗಿ ತವಕದಿಂದೆ) ಎಲೆ ಮಾರಾಯನೆ, ಎನ್ನಂ ಕಾಪಿಡು.

ವಾಸು. ಎಲೆ ಭೀರುವೆ, ನೀಂ ಭಯಂಬಡವೇಡ ;

ವೃ॥ ಎಲೆಗೇ ಸೈರಿಸು ಸೈರಿಸೀಪ್ರೊಗೆಯನೆಂತಾನುಂ ಕ್ಷಣಂ ಮಾತ್ರ
ದಿಂ । ತೆಲೆಲೇ ಜಾಱದ ನಿನ್ನ ಮೇಲುದುರಿಗುಂ ಹಾಹಾ ! ಶಿಖಿಜ್ವಾ
ಲೆಯಿಂ ॥ ಎಲೆಲೇ ಮೆಲ್ಲನಿದೇಕೆ ಬರ್ಪೆ ? ನಿಗಳಂ ತೊಟ್ಟಿರ್ಕುಮೇ
ಕಾಲೊಳಂ । ತೆಲೆಲೇ ಎನ್ನ ಸಮರ್ಕೆಯಿಂ ಪಿಡಿದೊಡಾನೇ ನಿನ್ನನಿಂ
ದಾಂಟಿಪೆಂ ॥೯೬

(ಎನುತ್ತೆ ಸಾರಸ್ವತಿಯಂ ಬರಸೆಳೆದಪ್ಪಿ ಸೋಂಕಿನ ಸೊಗಮನಭಿನಯಿಸುತ್ತೆ) ಅಚ್ಚರಿಯಚ್ಚರಿ ! ಇನಿತಱೊಳ್ ಎನ್ನೊಡಲ ಸೆಗಳಿಕೆಯನಿತುಂ ಜಗುೞ್ದುದು ; ಎಲೆ ಸಾರಸ್ವತಿ, ಸೈರಿಸು ಸೈರಿಸು.

ಕಂ॥ ನಿನ್ನಂ ಸುತ್ತಿದೊಡಂ ಶಿಖಿ ।
ಯೆನ್ನಂ ತಾನಂಟಲಾರ್ಪುದೇ ಪೇೞ್ನಿನ್ನೀ ॥
ಬೆನ್ನೊಡಲ ಸೋಂಕು ತಣ್ಪಿಕು ।
ಮೆನ್ನಯ ತಾಪಮನಿದಲ್ತೆ ಪೂರ್ಣೇಂದುಮುಖೀ ॥೯೭

(ಎನುತ್ತೆ ಕಣ್ದೆಱೆದು ಪತ್ತುಂದೆಸೆಗಳಂ ನೋಡಿ ಸಾರಸ್ವತಿಯ ತೆಕ್ಕೆಯಂ ಬಿಟ್ಟು) ಕಟಕಟಾ ! ಅಚ್ಚರಿಯಚ್ಚರಿ !

ವೃ॥ ಉರಿವಗ್ನಿಯೆತ್ತಲುಡುಗಿತ್ತಿದೆ ಮುನ್ನಿನಂತೀ ।
ಯುರಸಾಲೆಯಿರ್ಕುಮಿವಳೆನ್ನಯ ರಾಣಿಯೀಕೆಂ ॥
ಸರಸಂ ಕುಚೇಲನಿವನಲ್ತೆ ಸುನಂದನೀತಂ ।
ಪರಿಕಾಣೆನೇಂ ಕನಸಿದಕ್ಕುಮೊ ಮಾಯೆಯೋ ಮೇಣ್! ॥೯೮

ಕುಚೇ. ಎಲೆ ಮಾರಾಯನೆ, ಸಂದೆಯಂ ಬೇಡ; ನಿಕ್ಕುವಮಾಗಿ, ಇದಿಂದ್ರಜಾಲಮೇ ಸರಿ ; ಆತೊಬ್ಬನ ಮಗಂ ಐಂದ್ರಜಾಲಿಕಂ "ಅವಶ್ಯಮಾಗಿನ್ನೊಂದು ಪೆರ್ಚಿನಾಟಮುಂಟು ತೋರ್ಪುದಪೆಂ, ಅದಂ ದೇವರ್ ನೋಡವೇಳ್ಪುದು." ಎಂದು ಪೇಳ್ದನಲ್ತೆ; ಇದೇ ಅವನಾಟಂ.

ವಾಸು. (ರುಕ್ಮಿಣೀದೇವಿಯಂ ನೋಡಿ) ಎಲೆ ರಾಣಿ, ನಿನ್ನ ಮಾತಿನಿಂದಮೆ ಸಾರಸ್ವತಿಯನಲ್ಲಿಂದೊಡಗೊಂಡು ಬಂದೆಂ.

ರುಕ್ಮಿ. ಅಪ್ಪುದಪ್ಪುದು, ಬಲ್ಲೆಂ.

ಸುನಂ. (ಸಾರಸ್ವತಿಯುಮಾರಯ್ದು ನೋಡಿ, ಸುಭದ್ರನೊಡನೆಕ್ಕಟಿಯೊಳ್) ಎಲೆ ಸುಭದ್ರನೆ ! ಇವಳೆಮ್ಮಾಳ್ದನ ಕುವರಿಯಂತಿರ್ಪಳ್.

ಸುಭ. ಎನಗಮಂತೆ ತೋಱುತ್ತಿದೆ.

ಸುನಂ. ಎಲೆ ಮಾರಾಯನೆ, ಈಕನ್ನೆಯೆತ್ತಣಿಂ ಬಂದಳ್ ?

ವಾಸು. ರಾಣಿ ಬಲ್ಲಳ್.

ರುಕ್ಮಿ. ಅಯ್ಯ ಸುನಂದಾ, ಇವಳ್ ಸಾರಸ್ವತಿ, ಕಡಲ ನಡುವಿಂ ತಂದೆವೆಂದು ಪೇಳ್ದು ಅಮಾತ್ಯನಾದುದ್ಧವನೆನಗೊಪ್ಪಿಸಿದಂ ; ಅದಱಿಂ ದೈಸೆ ಆಮುಮಿವಳಂ ಸಾರಸ್ವತಿಯೆಂದು ಪೇಳ್ದಪೆವು.

ವಾಸು. (ತನ್ನೊಳ್) ಉದ್ಧವನೆನಗಱಿಪದೆ ಇಂತೆಸಗಿದನೆ !

ಸುನಂ. (ಸುಭದ್ರನೊಡನೆಕ್ಕಟಿಯೊಳ್) ಇದೆಕೊಳ್ ಈ ಕುಚೇಲನ ಕೊರಲೊಳ್ ಮುತ್ತಿನೊರ್ಚಾರಮಿರುವುದಱಿಂದೆಯುಂ, ಈ ಕುವರಿಯು ಬರವು ಸಮುದ್ರದಿಂದೆಂದು ನುಡಿವ ನುಡಿಯಿಂದೆಯುಂ ನಿಕ್ಕುವಮಾಗಿ ಇವಳೆಮ್ಮವಂತಿದೇಶದರಸನ ಕುವರಿಯೆ ಸರಿ.

(ಪ್ರಕಾಶಮಾಗಿ, ಕಣ್ಬನಿದುಂಬಿ) ಎಲೆಯಾಳ್ದನಣುಗಿ, ನೀನಿನಿತು ಕೋಟಲೆಗೊಳಗಾದೆಯಾ ?

ಶಾರ. ಹಾಹಾ! ಇನ್ನೇವೆಂ? ಇದೆಕೊಳ್ ಎಮ್ಮಮಾತ್ಯನಾದ ಸುನಂದಂ.

ಸುನಂ. (ಅೞುತ್ತೆ) ಅಕಟಕಟಾ ! ಆಂ ಪುಣ್ಯಹೀನನಲ್ತೆ !

(ಎನುತ್ತೆ ನೆಲದೊಳ್ಪಡಲ್ಪಟ್ಟಂ.)

ಶಾರ. (ಸುನಂದನ ಮೇಲೆ ಬಿೞ್ದು) ಎಲೆ ತಂದೆ ! ಹಾ ! ಎಲೆ ತಾಯೆ ! ನೀಮೆಂತಾದಿರ್ ; ಎನಗೆ ಪಡಿನುಡಿಗುಡಿಂ.

(ಎನುತ್ತೆ ಮೂರ್ಛೆವೋದಳ್)

ರುಕ್ಮಿ. (ಕಣ್ಬನಿದುಂಬಿ) ಅಯ್ಯ ಸುಭದ್ರಾ, ಇವಳೇಂ ಎನ್ನ ತಂಗೆಯಾದ ಮಿತ್ರವಿಂದೆಯೊ ?

ಸುಭ. ಅಮ್ಮಾ, ಅಂತಪ್ಪುದು.

ರುಕ್ಮಿ. (ಶಾರಸ್ವತಿಯಂ ತೞ್ಕೈಸಿ) ಎಲೆ ತಂಗೆ, ಸೈರಿಸು ಸೈರಿಸು.

ವಾಸು. (ತನ್ನೊಳ್) ಕಟಕಟಾ ! ಇವಳೇ ಪಿರಿಯ ಕುಲದೊಳ್ಪುಟ್ಟಿದ ಅವಂತೀದೇಶದರಸನಾದ ಜಯತ್ಸೇನನ ಕುವರಿ !

ವಿದೂ. (ತನ್ನ ಮನದೊಳ್) (ತನ್ನ ಕೊರಲೊಳಿರ್ಪ ತಾರಾವಳಿಯಂ ಮುಟ್ಟಿ) ಆಂ ಮುನ್ನಮೆ ಇಂತಪ್ಪ ನೇವಚ್ಚಂ ಸಾಮಾನ್ಯಮಾದ ಜನಕ್ಕೆತ್ತಣ್ತೆಂದು ತಿಳಿದೆಂ.

ರುಕ್ಮಿ. (ಮಗುೞ್ದು) ಎಲೆ ತಂಗೆ, ನೀಂ ಕುದಿಯಬೇಡ, ಸೈರಿಸು ಸೈರಿಸು.

ವಾಸು. ಎಲೆ ರಾಯಗುವರಿ, ಇದೆಕೊಳ್ ನಿಮ್ಮಕ್ಕಂ ದುಗುಡದೊಳಿರ್ದಳ್ ಅವಳಂ ತೆಕ್ಕೈಸಾ.

ಸಾರ. (ಸಂತೈಸಿ) ವಾಸುದೇವನಂ ಓರೆನೋಟದಿಂ ನೋಡುತ್ತೆ, (ತನ್ನೊಳ್) ಇನಿತು ತಪ್ಪನೆಸಗಿ ರಾಣಿಯ ಮೊಗವನೆಂತು ನಿಟ್ಟಿಪೆಂ.

ದೇವಿ. (ಮುಗುಳ್ ಕಣ್ಣೀರ್ಗಱೆಯುತ್ತೆ ಕೈಗಳಂ ನೆಗಪಿ) ಎಲೆ ತಂಗೆ, ಇತ್ತಿತ್ತ ಬಾರಾ. ನೀಂ ಕಡುಗಡಿಸುಗಾರ್ತಿಯೈಸೆ! ಇನ್ನಾದೊಡಮೆನ್ನಂ ತೆಕ್ಕೈಸಿ ಒಡವುಟ್ಟಿದಳೆಂಬ ನೇಹಮಂ ತೋಱುಸಾ.

(ಎನುತ್ತೆ ಬಳಿಸೆಳೆದು ತೆಕ್ಕೈಸಿದಳ್.)

ಮಿತ್ರವಿಂದೆ. (ತತ್ತರವಡುವಂತಭಿನಯಿಸಿದಳ್.)

ರುಕ್ಮಿ. (ಮೆಲ್ಲನೆ ವಾಸುದೇವನೊಡನೆ) ಎಲೆ ಎಱೆಯನೆ, ಎನ್ನನೆನ್ನ ಕೇಡಾಳತನಂ ನಾಣ್ಚಿಸುತ್ತಿದೆ; ಅದಱಿಂದಿವಳ ಸಂಕಲೆಯಂ ಗಳ್ಕನೆ ಸಡಿಲ್ಚು.

ವಾಸು. (ಹರಿಸಂಗೊಂಡು) ದೇವಿ ಪೇೞ್ದಂತಕ್ಕೆ. (ಎಂದಂತೆಸಗಿದಂ.)

ರುಕ್ಮಿ. (ಸುನಂದನಂ ನೋಡಿ) ಅಯ್ಯಾ, ಆನಿನ್ನೆವರಮುದ್ಧವನಿಂದೈಸೆ ಇಂತು ದುರ್ಜನೆಯಾದೆಂ, ತಾಂ ತಿಳಿದಿರ್ದುಮೆನಗಱಿಪದೆ ಪೋದಂ.

[ಆ ಬೞಿಕ್ಕೆ ಉದ್ಧವಂ ಬಂದಂ.]

ಉದ್ಧ. ವೃ॥ ಚಿರಕಾಲಂ ರಾಣಿಗೆನ್ನಿಂದಮೆ ಪತಿವಿರಹಾಯಾಸಮಾದ
ತ್ತು ಮುನ್ನೆ । ಮ್ಮರಸಂಗೀಯಲ್ಕೆ ಸಾರಸ್ವತಿಯುಮನಿನಿತುಂ
ಕ್ಲೇಶದೊಳ್ಸಾರ್ಚಿದೆಂ ಭೂ ॥ ವರನುಂ ತಾಂ ಕನ್ಯಕಾರತ್ನದ ಮದು
ವೆಯಿನಾನಂದಮಂ ತಾಳ್ದಿಯೆನ್ನಂ । ಪಿರಿದುಂ ಮನ್ನಿಕ್ಕುಮಂತಾ
ದೊಡಮೆನಗೆ ಮೊಗಂದೋಱಸಲ್ನಿಗ್ಗ ಬರ್ಕುಂ ॥೯೯

(ಮತ್ತಮಿನಿಸಂ ಪೊೞ್ತಾಲೋಚಿಸಿ) ಇಂತಲ್ಲದಿನ್ನೇಗೆಯ್ವೆಂ ? ಸ್ವಾಮಿ ಕಾರ್ಯಂ ಗಳ್ಕನಾಗವೇಳ್ಪುದೆಂಬೀಯೆಳಸಿಕೆಗೆ ಎನಿತಪ್ಪ ಪ್ರಾಜ್ಯವಿಷಯಮನಾದೊಡಂ ಕೋಟಲೆಗೊಳಸದೆ ತೀರದಲ್ತೆ !

(ಮುಂತೆ ನೋಡಿ,) ಇದೆಕೊಳ್ ಮಹಾರಾಯಂ ಕುಳ್ಳಿರ್ದಪಂ, ಕಾಣಿಸಿಕೊಂಬೆಂ.

(ಎಂದು ವಾಸುದೇವನ ಸಂಮುಖಮಂ ಸಾರ್ದು)

ಎಲೆ ಮಹಾರಾಯನೆ, ನಿನಗೆ ಲೇಸಕ್ಕೆ. ಆದೊಡಿದೊಂದು ಕಜ್ಜಮಂ ನಿನಗಱಿಪಿದೊಡಚರ್ದೆಂ, ಅದಂ ನೀಂ ಸೈರಿಸವೇಳ್ಪುದು.

(ಎಂದಡಿಗೆಱಗಿದಂ.)

ವಾಸು. ಅದೇತಕ್ಕೆನಗಱಿಪದೆ ನೀನಿಂತೆಸಗಿದ್ದೈ ?

ಉದ್ಧ. ದೇವರಿತ್ತ ಚಿತ್ತೈಸಿ ಕುಳ್ಳಿರವೇಳ್ಪುದು. ಇವನೆಲ್ಲಮಂ ಚೆನ್ನಾಗಿ ಬಿನ್ನಪಂಗೆಯ್ವೆಂ.

ವಾಸು. ಅಂತಕ್ಕೆ (ಎಂದು ಕುಳ್ಳಿರೆ, ಅನಿಬರುಂ ಕುಳ್ಳಿರ್ದರ್.)

ಉದ್ಧ. ಎಲೆ ಮಹಾರಾಯನೆ, ಚಿತ್ತವಿಸು; ಇಲ್ಲಿಗೆ ದಾನನಿಮಿತ್ತವಾಗಿಯೊರ್ವಂ ಪಾರ್ವಂ ಬಂದು, “ ಅವಂತೀದೇಶದರಸನಾದ ಜಯತ್ಸೇನರಾಯಂಗೆ ಮಿತ್ರವಿಂದೆಯೆಂಬ ಕುವರಿ ಇರ್ದಪಳ್ ; ಆಕನ್ನೆಗೆ ಈಜಗಕ್ಕೆಲ್ಲಂ ಬಲ್ಲಿದನಾಗಿ ಪುರುಷೋತ್ತಮನಾಗಿರ್ಪ ವರವರಿಣಯಮಾಗಿ ಪಿರಿದು ಸೊಗದೊಳಿರ್ಪುದರ್ಕೆ ಕಾರಣಮಾದ ಕನ್ನೆಲಕ್ಕಣಂಗಳನಿತುಮಂಗಂಗಳಲ್ಲಿ ಚೆನ್ನಾಗಿ ಸನ್ನಿದಂಗಳಾಗಿರ್ಪುವು” ಎಂದೆನ್ನೊಡನೆ ನನ್ನಿಯಿಂ ಸೊಲ್ಲಿಸಿದಂ ; ಆವಿಪ್ರನೆಲ್ಲಮಂ ಬಲ್ಲವನಾದುದಱಿಂದವನುಸಿರ್ದುದು ಪುಸಿಯೆನಿಸದೆಂಬ ನಂಬುಗೆವಿಡಿದು, ಎಮ್ಮಾಳ್ದಂಗೀಕುವರಿಯುಂ ಕುಡವೇಳ್ಪುದೆಂದೋಲೆಯುಡುಗೊ

ಱೆತೊಡವುಗಳನಿತ್ತು ಶಿಷ್ಟರಂ ನಿರವಿಸಿ ಕೇಳಿಕಳುಹಿದೆಂ. ಅದರ್ಕೆ ಜಯತ್ಸೇನರಾಯನುಂ ರಾಜಾಧಿದೇವಿಯುಮಿರ್ವರುಂ ಸಂತಸದಿನೊಡಂಬಟ್ಟು ಕೊಟ್ಟಪೆವೆಂಬುದುಂ ; ಅವರ ಕುವರರಾದ ವಿಂದಾನುವಿಂದರಿರ್ವರುಂ ಕುಡಲೀಯೆವೆಂದು ವಲವಗೆಯಿಂ ತಡೆದರ್.

ವಾಸು. ಮತ್ತೆಮತ್ತೆಂ ?

ಉದ್ಧ. ಅದರ್ಕಾಂ ಬೇಱೆ ದಾಱಿಯುಂ ತಿಳಿದು, ಆಕನ್ನೆಯನವರಿರ್ವರು ಮಱಿಯದಂತೆ ಪಡಂಗನೇಱಿಸಿ ಕಡಲೆಡೆಯೊಳೇ ತಪ್ಪುರ್ದೆಂದೀಸುಭದ್ರನುಂ ಕಳುಹಿದೆಂ.

ವಾಸು. ಎಲೆ ಉದ್ಧವನೆ, ಆಬೞಿಕ್ಕಾದ ವೃತ್ತಾಂತಮನಿತಂ ಕೇಳರ್ದೆವು. ಆದೊಡಿವಳಂ ರಾಣಿಯ ಕೈಗೇನನೆಣಿಸಿ ಇತ್ತೈ ?

ವಿದೂ. ಎಲೆ ಮಾರಾಯನೆ, ಪೇೞದಿರ್ದೊಡಮಿದಱ ನೆಲೆ ತಿಳಿಯಲಕ್ಕುಂ ; ಅದೆಂತೆನೆ— ಅಂತಃಪುರದೊಳೇಕನ್ನೆಯಿರ್ದೊಡೆಂತಾದೊಡಂ ನಿನ್ನ ದಿಟ್ಟಿಗೆ ಸಿಲ್ಕದಿರಳ್ ಎಂದು.

ವಾಸು. ಎಲೆ ಉದ್ಧವ, ಇದೆಕೊಳೇಕುಚೇಲಂ ನಿನ್ನಭಿಪ್ರಾಯಮಂ ತಿಳಿದಂತೆ ಸೊಲ್ಲಿಕುಂ.

ಉದ್ಧ. ಜೀಯಾ, ಅಂತೆ ಅಪ್ಪುದು.

ವಾಸು. (ಉದ್ಧವನಂ ಬೆರಲನೊಳೆದು) ಭಾಪುಭಾಪು ! (ಎಂದು) ಆದೊಡೀ ಇಂದ್ರಜಾಲದ ವೃತ್ತಾಂತಮುಂ ನೀನೆಸಗಿದುದೇ ಆಗವೇೞ್ಪುದು.

ಉದ್ಧ. ಇದಿಂತಪ್ಪುದು; ಅಲ್ಲದಿರ್ದೊಡಂತಃಪುರದೊಳಗೆ ಸೆಱೆವನೆಯೊಳಿರ್ದ ಸಾರಸ್ವತಿಯುಂ ಕಾಣ್ಬುದೆಂತು ; ಇವಳಂ ಕಾಣದಿರ್ದೊಡೆ ಸುನಂದನಿವಳನಱಿವುದೆಂತುಟು?

ವಾಸು. (ನಸುನಗುತೆ) ತಿಳಿದ ಮೇಲಿನ್ನುಂ ತನ್ನ ತಂಗೆಗೇನೇನಂ ನಡೆ

ಯಿಸವೇೞ್ಪುದೊ ಅದಂ ರಾಣಿ ಬಲ್ಲಳ್.

ರುಕ್ಮಿ. (ನಗೆವೇೞಂಗೊಂಡು) ಎಲೆ ಎಱೆಯನೆ, ಎನ್ನೊಡನೆ ಮುನ್ನಮೆ ಮಿತ್ರವಿಂದೆಯನೆನಗೀಯೆಂದೇಕೆ ಪೇೞದಿರ್ದೆ ?

ವಿದೂ. ಎಲೆ ದೇವಿ, ರಾಯನ ಮನದಿರವಂ ಚೆನ್ನಾಗಿ ತಿಳಿದೆ.

ರುಕ್ಮಿ. (ಮಿತ್ರವಿಂದೆಯಂ ನೋಡಿ) ಎಲೆ ತಂಗೀ ಮಿತ್ರವಿಂದೆ, ಇತ್ತ ಬಾರಾ ; ಇನ್ನಾನುಂ ಒಡವುಟ್ಟಿದಳೆಂಬ ನೇಹವಿರ್ಕೆ !

(ಎಂದು ತನ್ನ ತೊಡವುಗಳಿಂ ಮಿತ್ರವಿಂದೆಯನಲಂಕರಿಸಿ, ಮತ್ತಮಾ ಮಿತ್ರವಿಂದೆಯಂ ಕೈವಿಡಿದು ವಾಸುದೇವನ ಸಮೀಪಮಂ ಸಾರ್ದು,)

ಇದೆಕೊಳ್ ಮಹಾರಾಯನೆ, ಈಮಿತ್ರವಿಂದೆಯಂ ನೀಂ ಕಾಪಿಡು.

ವಾಸು. (ಕೈಯಂ ನೀಡಿ) ದೇವಿ ಮಾೞ್ಪ ಬಹುಮಾನಮನಾನೆಂತು ಕಡೆಗಣಿಸುವೆಂ !

ರುಕ್ಮಿ. (ಕಣ್ಬನಿದುಂಬಿ) ಎಲೆ ಇನಿಯನೆ, ಇವಳ್ಗೆ ತಂದೆತಾಯ್ಗಳ್ ದೂರದೊಳಿರ್ದಪರ್; ಅದಱಿಂದವರ್ದೂರದೊಳಿರ್ಪರೆಂಬ ದುಗುಡಂದೋಱದಂತೆ ಕಟ್ಟೆಱಕದಿಂ ಹರಿಸಮಂ ನೆಱಪಿ ಮನ್ನಿಸು.

(ಎನುತ್ತೆ ಮಿತ್ರವಿಂದೆಯಂ ಗೋವಿಂದಂಗೆ ಒಪ್ಪಿಸಿದಳ್.)

ವಾಸು. ನೀನೆಂತು ಬೆಸಸುವಯಂತು ನಡೆಯಿಸುವೆಂ.

(ಎನುತ್ತೆ ಮಿತ್ರವಿಂದೆಯಂ ಕೈವಿಡಿದಂ.)

ವಿದೂ. (ಕಡುಸಂತಸಂದಳೆದು) ಹಿಹಿ !! ಎಲೆ ಮಹಾರಾಯನೆ, ಈಸಕಲಲೋಕದೈಸಿರಿವೆರಸಿದೀಪ್ರೊಢವಿಮಾತ್ರಮೆ ನಿನ್ನ ಕೈಬಸಮಾಗಿರ್ಪುದಲ್ತು. ಮತ್ತಮೀರಾಣಿಯೆಂಬ ಪೊಸಸಿರಿಯುಂ ನಿನ್ನಕೈಬಸಮಾದಳ್.

(ಎನುತ್ತೆ ನರ್ತಿಸಿದಂ.)

ಸುನಂ. ಎಲೆಯಾಳ್ದನಣುಗಿ! ನೀಂ ರಾಣಿವಸಮನಾಂತೆ, ಚೆನ್ನಾಗಿ ಸೊಗವಾಳ್!

ಸುಭ. ಈಗಳೆಂ ಪಟ್ಟ ಕೋಟಲೆಯುನಿತುಂ ಸಫಲಮಾದುದು.

ಉದ್ಧ. ಎಲೆ ದೇವಿಯಾ, ನಿನಗಿನ್ನುಂ ಪ್ರಿಯಮನೇನೆಸಗುವೆಂ ?

ವಾಸು. ಎಲೆ ಉದ್ಧವನೆ, ಎನಗಿದಱಿಂದೆಯುಮಿನ್ನೇಂ ?

ವೃ॥ ಈನೆಮ್ಮೊಳ್ ಮಿಗೆ ಮೈತ್ರಿ ಪೆರ್ಚಿತು ಜಯತ್ಸೇನಂಗೆ ಕೈಸಾರ್ದರ್ಳಿಂ । ತೀನಾರೀಮಣಿ ಮಿತ್ರವಿಂದೆ ಮುದಮಿಂದೀತಂಗಿಯಿಂದಾದುದೆಂ ॥ ತಾನುಂ ದೇವಿಗೆ ಗೆಲ್ದು ಸೌಭಪತಿಯುಂ ಪ್ರದ್ಯುಮ್ನನುಂ ಬಂದನಿಂ। ದಾನಂದೋದಯಮುಣ್ಮುತಾದುದು ಜಯಂ ನೀನೇ ಗಡಾ! ಉದ್ಧವಂ ॥೧೦೦

ಅಂತಾದೊಡಮಕ್ಕೆ!

[ಇದೊಂದು ಭರತವಾಕ್ಯಂ.]

ವೃ॥ ಮೞೆಗಱೆದುರ್ವಿಯುಂ ಸುರಪನುರ್ವರೆಯೊಂನಿಸುಗೇೞ್ಗೆ ವೆತ್ತು ಪೆ। ರ್ಬೆಳಸುಗಳಿಂದೆ ಭೂಸುರರ ಜನ್ನದ ಸುಂದಣಿಯಿಂದೆ ಸಂತಸಂ ॥ ಬಳೆಗೆ! ಸುರರ್ಗೆ ಸಜ್ಜನರ ಸಂಗಡಮುಂ ಸೊಗಮೀರ್ಕೆ! ದುರ್ಜನ। ರ್ಕಳ ಪಿಸುಣೆಲ್ಲಮುಂ ತವುಗೆ! ಧರ್ಮದಿನಾಳ್ಗೆ! ನೃಪರ್ ಧರಿತ್ರಿಯಂ॥

(ಎಂದೆಲ್ಲರುಂ ತೆರಳ್ದರ್.)

—ಇದು ನಾಲ್ಕನೆಯ ಅಂಕಂ—

ಮಿತ್ರವಿಂದಾಗೋವಿಂದ ನಾಟಕಂ

ಸಂಪೂರ್ಣಂ.